ಕರ್ನಾಟಕ ವಿಧಾನ ಸಭೆ

ಗುರುವಾರ 26 ನೇ ಆಗಸ್ಟ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ
ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ)ಅವರು
ಪೀಠವನ್ನು ಅಲಂಕರಿಸಿದ್ದರು.

-:O:-

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ : - ಕಾವೇರಿ ನದಿ ನೀರಿನ ವಿವಾದ ಕುರಿತು.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಕಾವೇರಿ ನದಿ ನೀರಿನ ವಿವಾದ ಕುರಿತು ಚರ್ಚಿಸಲು ಅನೇಕ ಮಾನ್ಯ ಸದಸ್ಯರು ತಮಗೆ ನಿಲುವಳಿ ಸೂಚನೆ ಕಳುಹಿಸಿದ್ದಾರೆ. ಅದನ್ನು ನಿಲುವಳಿ ಸೂಚನೆಯಾಗಿ ತಾವು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಿ, ಕಾವೇರಿ ವಿಚಾರ ಅತಿ ಮುಖ್ಯವಾಗಿರುವುದರಿಂದ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ತಮಿಳುನಾಡು ಮುಖ್ಯಮಂತ್ರಿ ಕುಮಾರಿ ಜಯಲಲಿತಾರವರ ವಿರುದ್ಧ, ಕೇಂದ್ರ ಸರ್ಕಾರದ ವಿರುದ್ಧ ಮತ್ತು ಕೇಂದ್ರ ಸರ್ಕಾರದ ಸಚಿವರಾಗಿರುವ ವಿ.ಸಿ. ಶುಕ್ಲಾರವರ ವಿರುದ್ಧ ನಿರ್ಣಯ ಮಂಡಿಸಬೇಕು. ತಮಿಳುನಾಡಿನಲ್ಲಿ ಇವೊತ್ತು ಕುಮಾರಿ ಜಯಲಲಿತಾರವರು ಉದ್ದೇಶಪೂರ್ವಕವಾಗಿ ಜನರನ್ನು ಪ್ರಚೋದಿಸಿ ನಮ್ಮ ರಾಜ್ಯವನ್ನು ದುರಂತಕ್ಕೀಡು ಮಾಡಿದ್ದಾರೆ. ಆದುದರಿಂದ, ಇವರುಗಳ ವಿರುದ್ಧ ನಿರ್ಣಯ ಮಂಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ತಮಿಳುನಾಡು ಸರ್ಕಾರ ಆಕ್ಷನ್ ತೋರಿಸಿದಾಗ ಮಾತ್ರ ಈ ಸರ್ಕಾರ ರಿಆ್ಯಕ್ಷನ್ ತೋರಿಸುತ್ತದಷ್ಟೆ.

ಅಧ್ಯಕ್ಷರು : ಕಾವೇರಿ ವಿಚಾರವಾಗಿ ಚರ್ಚಿಸಲು ತಾವುಗಳು ನಿಲುವಳಿ ಸೂಚನೆ ಕೊಟ್ಟಿರುವುದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ, ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ.

ಶ್ರೀ ವಾಟಾಳ್ ನಾಗರಾಜ್: ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿರುವುದೇನೆಂದರೆ, ತಮಿಳುನಾಡು ಮುಖ್ಯಮಂತ್ರಿ ಕುಮಾರಿ ಜಯಲಲಿತಾ ಅವರ ವಿರುದ್ಧ ನಿರ್ಣಯ ಮಂಡಿಸಬೇಕು. ನಾನು ಈ ಸದನದಲ್ಲಿ ಕಪ್ಪು ಬಾವುಟ ಪ್ರದರ್ಶಿಸುತ್ತೇನೆ. ಈಗ ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಬೇಕೆಂದು ತಮ್ಮಲ್ಲಿ ನಾನು ಕೈಮುಗಿದು ಪ್ರಾರ್ಥಿಸುತ್ತೇನೆ. ಇವೊತ್ತು ಏನಾಗಿದೆಯೆಂದರೆ, ಒಂದು ಕಡೆ ತಮಿಳುನಾಡಿನಲ್ಲಿ ಕುಮಾರಿ ಜಯಲಲಿತಾರವರು ಸತ್ಯಾಗ್ರಹ ನಡೆಸಿ, ಜನರನ್ನು ಪ್ರಚೋದಿಸಿ ಪ್ರಾಮಾಣಿಕರಾದಂಥ ಕರ್ನಾಟಕದವರ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಇವೊತ್ತು ವಿ.ಸಿ. ಶುಕ್ಲಾರವರು ಮಾಡುತ್ತಿರುವುದಾದರೂ ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಿ, ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲು ತಮಗೆ ಅಧಿಕಾರವಿರುವುದರಿಂದ, ಕಾವೇರಿ ನದಿ ವಿವಾದ ಕುರಿತು ಚರ್ಚಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಮುಖ್ಯ ಮಂತ್ರಿಗಳು ಒಪ್ಪುತ್ತಾರೆಂದು ನಾನು ಭಾವನೆ ಮಾಡಿದ್ದೇನೆ.

ಅಧ್ಯಕ್ಷರು :- ಈ ಸಬ್‌ಮಿಷನ್ ಅನ್ನು ಪ್ರಶ್ನೋತ್ತರ ಕಾಲವಾದ ನಂತರ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :- ತಾವು ಕೊಡುವ ತೀರ್ಪಿಗೆ ನಾವು ಬದ್ಧರಾಗಿರುತ್ತೇವೆ. ನಾವು ತಮ್ಮನ್ನು ವಿನಂತಿ ಮಾಡುತ್ತಿದ್ದೇವಷ್ಟೇ. ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಜರೂರಾದ ಕಾರ್ಯಕಲಾಪಗಳನ್ನು ನಡೆಸಿದಂತಹ ದಿನಗಳು ಬೇಕಾದಷ್ಟು ಇವೆ. ಇದು ಹೊಸದಲ್ಲ. ವಿಶೇಷವಾಗಿ ಈ ಅಧಿವೇಶನ ಕರೆಯಬೇಕೆಂದು ನಾವು ರಾಜ್ಯಪಾಲರನ್ನು ಭೇಟಿ ಮಾಡಿ ಒತ್ತಾಯ ಮಾಡಿದ್ದೆವು. ಕಾವೇರಿ ಜಲ ವಿವಾದದ ಪ್ರಶ್ನೆ ತೀರ ಜಟಿಲವಾದ ಪರಿಸ್ಥಿತಿಯನ್ನು ತಲುಪಿದೆ. ನಮ್ಮ ದೃಷ್ಟಿಯಲ್ಲಿ ಹೇಳುವುದಾದರೆ, ಸರಕಾರ ಸರಿಯಾಗಿ ಕೆಲಸ ಮಾಡಿಲ್ಲ. ಆ ಕಾರಣ ಜನರು ಯಾವ ನಿರೀಕ್ಷೆಯನ್ನು ನಮ್ಮಿಂದ ಇಟ್ಟುಕೊಂಡಿದ್ದರು ಆ ನಿರೀಕ್ಷೆಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಆ ಕಾರಣದಿಂದಾಗಿ ಅಧಿವೇಶನ ಕರೆಯಬೇಕೆಂದು ರಾಜ್ಯಪಾಲರನ್ನು ಒತ್ತಾಯ ಮಾಡಿದ್ದೇವೆ. The Constitutional Authorities have also taken serious note of it.

ಮಾನ್ಯ ರಾಜ್ಯಪಾಲರು ಇದೇ ಚರ್ಚೆಗೆ ಅಧಿವೇಶನ ಕರೆಯುತ್ತೇವೆಂದು ಹೇಳಿದರು. ಆದರೆ ದುರ್ದೈವ; ಕಳೆದ ಮೂರು ದಿವಸಗಳಿಂದ ನಡೆದಂತಹ ಘಟನೆಗಳು ಕಾರಣಗಳಿಂದಾಗಿ ಇದನ್ನು ತೆಗೆದು ಕೊಳ್ಳುವುದಕ್ಕಾಗಲಿಲ್ಲ. ಇವತ್ತು ಕೂಡ ನಿಲುವಳಿ ಸೂಚನೆ ಕಳಿಸಲಾಗಿದೆ. ಅದನ್ನು ತಮ್ಮ ಕಾರ್ಯಾಲಯದಲ್ಲಿ ನಿಯಮ 68 ಕ್ಕೆ ಬದಲಾಯಿಸಿದ್ದೀರಿ. ಅದು ತಮ್ಮ ವ್ಯಾಪ್ತಿಗೆ ಬಿಟ್ಟಿದ್ದು. ಅದಕ್ಕೆಷ್ಟು ಮಹತ್ವ ಸಿಗಬೇಕೋ ಅಷ್ಟು ಮಹತ್ವ ರೂಲ್ 68 ನಲ್ಲಿ ಸಿಗುತ್ತದೆಂದು ನನಗನ್ನಿಸುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಹೇಳಿದ್ದಾರೆ ಅದಕ್ಕೆ ವಿಶೇಷವಾಗಿ ಒತ್ತು ಕೊಡುವುದಕ್ಕೆಂದು ಪ್ರಶ್ನೋತ್ತರವನ್ನು ರದ್ದುಪಡಿಸಿ ಕಾವೇರಿ ವಿವಾದವನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು

ಸಲಹೆ ಕೊಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ, ಈ ಅಧಿವೇಶನ ಕರೆದಿರುವುದೇ ಜಟಿಲವಾದ ಕಾವೇರಿ ಸಮಸ್ಯೆಯ ಬಗ್ಗೆ ಚರ್ಚೆ ಮಾಡಬೇಕೆಂದು. ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ಇವತ್ತು ಸಾಕಷ್ಟು ಅನ್ಯಾಯವಾಗಿದೆ. ಅಲ್ಲಿ ನೀರು ಇಲ್ಲ. ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆ. ಆ ಭಾಗದಲ್ಲಿ ಇಂತಹ ಪರಿಸ್ಥಿತಿಯಿರಬೇಕಾದರೆ ತಮಗೆ ಅಧಿಕಾರ ಇದೆ ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಿ ಮಹತ್ತರವಾದ ಈ ವಿಷಯದ ಬಗ್ಗೆ ಚರ್ಚೆ ಮಾಡೋಣ. ಕನ್ನಡ ನಾಡಿನ ರೈತ ಸಮೂಹದ ಅಳಿವು ಉಳಿವಿನ ಪ್ರಶ್ನೆ ಇದಾಗಿದೆ. ನಾವು ಅವರಿಗೆ ಸಾಕಷ್ಟು ನ್ಯಾಯ ಒದಗಿಸಿಕೊಡುವುದಕ್ಕಾಗಿಲ್ಲ. ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಕಾವೇರಿ ಜಲ ವಿವಾದ ಬಂದಾಗ ಸರಕಾರಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದೇವೆ. ಮಾನ್ಯ ಸಭಾ ನಾಯಕರು ಒಪ್ಪಿಕೊಳ್ಳಬೇಕು. ಕ್ವೆಶ್ಚನ್ ಅವರ್ ಅನ್ನು ರದ್ದು ಮಾಡಿ ಕಾವೇರಿ ಜಲ ವಿವಾದವನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇದಕ್ಕೆಂದು ಉಸ್ತುವಾರಿ ಸಮಿತಿ ರಚನೆ ಮಾಡಬೇಕೆಂದು ಇತ್ತು, ಲೋಕಸಭೆಯಲ್ಲಿ ಆ ರೀತಿ ಹೇಳಿಕೆ ಮಾಡಿದ್ದಾರೆ. ಮುಖ್ಯ ಕಾರ್ಯದರ್ಶಿಗಳ ಜೊತೆ ಚರ್ಚೆಯಾಗುವುದಿದೆ ಎಂದು ರಾಜ್ಯ ಸಭೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ತಮ್ಮ ಅಧಿಕಾರ ಚಲಾಯಿಸಿ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಮುಖ್ಯ ಮಂತ್ರಿಗಳವರು ಇದರ ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿಯವರ ವಿರುದ್ಧ ನಿರ್ಣಯ ತರುತ್ತೇವೆಂದು ಭರವಸೆ ಕೊಡಬೇಕು. ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ವಿ.ಸಿ.ಶುಕ್ಲ ಅವರು ದಾರಿ ತಪ್ಪಿಸಿದ್ದಾರೆ. ತಮಿಳುನಾಡಿನ ಮುಖ್ಯ ಮಂತ್ರಿಯವರ ವಿರುದ್ಧ ಇಲ್ಲಿ ಪರಿಣಾಮಕಾರಿಯಾದ ನಿರ್ಣಯವಾಗಲೇಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಅವರು ಭರವಸೆ ಕೊಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ :- ಕಾನ್‌ಸ್ಟಿಟ್ಯೂಷನ್ ಡಿಫೈನ್ ಮಾಡುತ್ತಾರೆ.

She defines the Constitution.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಅವರು ಸಂವಿಧಾನಕ್ಕೆ ವಿರುದ್ಧವಾಗಿ ಸತ್ಯಾಗ್ರಹ ನಡೆಸಿದ್ದಾರೆ. ಈ ಸತ್ಯಾಗ್ರಹ ಮಾಡಿದ್ದುದು ಸರಿಯಲ್ಲ ತಮಿಳುನಾಡಿನ ಮುಖ್ಯ ಮಂತ್ರಿಯವರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇನೆ. ಈ ರೀತಿ ಸರಿಯಲ್ಲ. ಕುಮಾರಿ ಜಯಲಲಿತಾ ವಿರುದ್ಧ ಪ್ರದರ್ಶನ ಮಾಡುತ್ತಿದ್ದೇನೆ. ಇದು ಸರಿಯಾದ ನೀತಿಯಲ್ಲ.

(ಸಭೆಯಲ್ಲಿ ಕಪ್ಪು ಬಟ್ಟೆಯನ್ನು ಪ್ರದರ್ಶಿಸಿದರು)

(ಗೊಂದಲ)

ಅಧ್ಯಕ್ಷರು :- ನಾನು ಅವಕಾಶ ಮಾಡಿಕೊಡುತ್ತೇನೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಮುಖ್ಯ ಮಂತ್ರಿಯವರು ಪತ್ರ ಕಳಿಸಿದ್ದಾರೆಂದು....

(ಗೊಂದಲ)

ಅಧ್ಯಕ್ಷರು : - ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : - ಮಾನ್ಯ ಮುಖ್ಯ ಮಂತ್ರಿಗಳು ಪತ್ರ ಕೊಟ್ಟಿದ್ದಾರೆಂದು ಕೇಂದ್ರ ಸಚಿವರು ಹೇಳಿದ್ದಾರೆ. ಅವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಇಲ್ಲಿ ರೆಸಲ್ಯೂಷನ್ ಪಾಸ್ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : - ತಮಿಳುನಾಡು ಮುಖ್ಯ ಮಂತ್ರಿಗಳು ನಡೆದುಕೊಂಡ ರೀತಿ ನೀತಿಗಳು ಬಹಳ ಅಗೌರವವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ನಿರ್ಣಯವನ್ನು ಮಂಡಿಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : - ಕೇಂದ್ರ ಮಂತ್ರಿ ಮಂಡಲದಿಂದ ಅವರನ್ನು ವಜಾ ಮಾಡಬೇಕೆಂದು ಈ ಸಭೆ ರೆಸಲ್ಯೂಷನ್ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : - ತಾವು ಹೇಳಿದ್ದು ನನ್ನ ಗಮನದಲ್ಲಿದೆ. ನನಗೂ ಅಷ್ಟೇ ಆಸಕ್ತಿಯಿದೆ. ನಾನು ಸಾಕಷ್ಟು ಕಾಲಾವಕಾಶ ಮಾಡಿಕೊಡುತ್ತೇನೆ. ಪ್ರಶ್ನೋತ್ತರ ಮುಗಿದ ನಂತರ ಕಾವೇರಿ ವಿಚಾರದ ಬಗ್ಗೆ ಸಾಕಷ್ಟು ಕಾಲಾವಕಾಶ ಮಾಡಿಕೊಡುತ್ತೇನೆ. ಆಗ ತಾವೇನು ಹೇಳಬೇಕಿದೆ ಅದನ್ನು ಸವಿಸ್ತಾರವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : - ಅದರ ಪ್ರಾಮುಖ್ಯತೆ ಹೋಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದೇ ಸಮನೆ ಮನವಿ, ಒತ್ತಾಯ ಮಾಡುತ್ತೇನೆ. ತಮಿಳುನಾಡಿನ ಮುಖ್ಯಮಂತ್ರಿ ವಿರುದ್ಧ ಖಂಡನಾ ನಿರ್ಣಯ ಆಗಲೇಬೇಕು. ಮತ್ತು ವಿ.ಸಿ.ಶುಕ್ಲಾ ವಿರುದ್ಧ ಕೂಡ ಖಂಡನಾ ನಿರ್ಣಯವಾಗಬೇಕು.

ಅಧ್ಯಕ್ಷರು : - ವಿ.ಸಿ. ಶುಕ್ಲಾ ಬೇಡ, ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ. ಆಗ ಮಾತನಾಡಿ. ಈ ಸಮಯದಲ್ಲಿ ಬೇಡ.

ಶ್ರೀ ವಾಟಾಳ್ ನಾಗರಾಜ್ : - ಅದರ ಪ್ರಾಮುಖ್ಯತೆ ಹೋಗುತ್ತದೆ, ಅದರ ಶಕ್ತಿ ಹೋಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ : - ಕಾವೇರಿ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದೆ. ನಿನ್ನೆ ಕೂಡ ಇದೇ ವಿಚಾರದಲ್ಲಿ ಪುನಃ ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದೇನೆ. ಇದು ಬಹಳ ಪ್ರಮುಖ ವಿಚಾರವಿದೆ. ತಮ್ಮ ಸಮಸ್ಯೆಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. 3 ದಿವಸ ಅಂದರೆ 23-24-25 ರಂದು ಮಾಜಿ ಮುಖ್ಯ ಮಂತ್ರಿಯವರ ನಿಧನದಿಂದ ಸಭೆ ಅಡ್ಜರ್ನ್ ಆಯಿತು. ನಮಗೆ ಭಯ ಇದೆ, ಈ ವಿಷಯ ಚರ್ಚೆಯಾಗುತ್ತದೆಯೋ ಇಲ್ಲವೋ ಎಂದು. ಮುಖ್ಯವಾಗಿ ಈ ಅಧಿವೇಶನ ಕರೆದದ್ದು ಕಾವೇರಿ ವಿಚಾರದಲ್ಲಿ ಚರ್ಚೆ ಮಾಡಬೇಕೆಂದು.

ನಾವು ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ಈ ಸರ್ಕಾರ ಅಧಿವೇಶನವನ್ನು ಕರೆಯುವುದಕ್ಕೆ ಸಿದ್ಧವಿಲ್ಲ ಎಂದು ತಿಳಿಸಿ ಅಧಿವೇಶನವನ್ನು ಕರೆಯುವುದಕ್ಕೆ ಒತ್ತಾಯ ಮಾಡಿದ್ದರಿಂದ ಇವತ್ತು ಈ ಅಧಿವೇಶನವನ್ನು ಕರೆದಿದ್ದಾರೆ. ಇವತ್ತು ಕಾವೇರಿ ವಿಚಾರ ಬಹಳ ಪ್ರಮುಖವಾದ ವಿಚಾರವಾಗಿದೆ. ಸಾಕಷ್ಟು ಅನ್ಯಾಯ ರಾಜ್ಯಕ್ಕೆ ಮತ್ತು ರಾಜ್ಯದ ರೈತರಿಗೆ ಆಗಿದೆ. ಈ ಸರ್ಕಾರದ ನಿಷ್ಕ್ರಿಯತೆಯಿಂದ ಸಾಕಷ್ಟು ಲೋಪವಾಗಿದೆ. ಆದುದರಿಂದ ನಾನು ಇವತ್ತು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಕೊಟ್ಟಿದ್ದೇನೆ. ಇದಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟು ಇವತ್ತು ಕಾವೇರಿ ವಿಚಾರವನ್ನು ಚರ್ಚೆಗೆ

ತೆಗೆದುಕೊಳ್ಳಬೇಕು. ಪ್ರಶ್ನೋತ್ತರ ವೇಳೆಯನ್ನು ಲ್ಯಾಪ್ಸ್ ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ಕಾವೇರಿ ವಿಚಾರವನ್ನು ಮೊದಲು ತೆಗೆದುಕೊಂಡು ಅನಂತರ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬಹುದು. ಇದರಲ್ಲಿ ಯಾವುದೇ ತೊಂದರೆ ಇಲ್ಲ. ತಮಗೆ ಗೊತ್ತಿರುವಂತೆ, ನಿನ್ನೆ ಮೊನ್ನೆ ಕೂಡ ಇದೇರೀತಿ ಆಗಿದೆ. ಆದುದರಿಂದ ಯಾವುದೇ ಪ್ರಶ್ನೆಯನ್ನೂ ಲ್ಯಾಪ್ಸ್ ಮಾಡಬೇಕೆಂದು ನಾನು ಹೇಳುವುದಿಲ್ಲ. ಆದುದರಿಂದ ಕಾವೇರಿ ಬಗ್ಗೆ ಪ್ರಾಧಾನ್ಯತೆಯನ್ನು ಕೊಟ್ಟು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಮೂವ್ ಮಾಡಿದ್ದೇನೆ. ಇದರ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ :- ಮಾನ್ಯ ಅಧ್ಯಕ್ಷರೆ, ದುರ್ದೈವದಿಂದ ಕಳೆದ 3 ದಿನಗಳಿಂದ ಅಸೆಂಬ್ಲಿ ಕಾರ್ಯಕಲಾಪಗಳು ನಡೆದಿಲ್ಲ. ಮುಖ್ಯವಾಗಿ ಕಾವೇರಿ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಈ ಅಧಿವೇಶನವನ್ನು ಕರೆದಿರತಕ್ಕದ್ದು. ತಾವು ಮಾಡಿರತಕ್ಕದ್ದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಿಯಮ 68ರ ಕೆಳಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆಂದು ತಾವು ಹೇಳಿದ್ದೀರಿ. ನಾವು ವಿರೋಧಪಕ್ಷದ ವತಿಯಿಂದ ಇದರ ಬಗ್ಗೆ ಇವತ್ತು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಇವತ್ತಿನ ಸದನದ ಎಲ್ಲ ಕಾರ್ಯ ಕಲಾಪಗಳನ್ನೂ ನಿಲ್ಲಿಸಿ ಈ ವಿಚಾರಕ್ಕೆ ಆದ್ಯತೆಯನ್ನು ಕೊಡಬೇಕೆಂದು ತಮ್ಮ ಗಮನಕ್ಕೆ ಈಗಾಗಲೇ ನಾವು ತಂದಿದ್ದೇವೆ. ಈಗ ಬಂದಿರತಕ್ಕ ಪ್ರಶ್ನೆ ಎಂದರೆ, ಈ ವಿಚಾರಕ್ಕೆ ನಾವು ಎಷ್ಟೊಂದು ಮಹತ್ವವನ್ನು ಕೊಡುತ್ತೇವೆ ಎಂಬುದನ್ನು ಕೇಂದ್ರ ಸರ್ಕಾರದವರೂ ಅಲ್ಲಿ ನೋಡುತ್ತಿರುತ್ತಾರೆ. ಕಾವೇರಿ ಮತ್ತು ಕೃಷ್ಣಾ ನದಿ ನೀರಿನ ವಿಚಾರದಲ್ಲಿ ನಾವು ತಳೆದಿರತಕ್ಕ ನಿಲುವಿನಿಂದ ನಮಗೆ ಎಷ್ಟೊಂದು ಅನ್ಯಾಯವಾಗಿದೆ ಎಂಬುದು ತಮಗೂ ಗೊತ್ತಿದೆ. ಆದುದರಿಂದ ಪ್ರಶ್ನೋತ್ತರದ ನಂತರ ನಮ್ಮ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸಭಾಧ್ಯಕ್ಷರೆ, ತಮಗೆ ಪದೇ ಪದೇ ತೊಂದರೆ ಕೊಡಬೇಕು ಅಥವಾ ನಿಮ್ಮ ಆಜ್ಞೆಯನ್ನು ಪಾಲನೆ ಮಾಡಬಾರದೆಂಬ ಉದ್ದೇಶ ನನಗಿಲ್ಲ. ನಾನು ತಮ್ಮಲ್ಲಿ ಪ್ರಾಮಾಣಿಕವಾಗಿ, ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದನ್ನು ನೋಡಿದ್ದಾರೆ. ಅವರಿಗೂ ಗೊತ್ತಿದೆ. ತಮಿಳ್ನಾಡಿನ ಮುಖ್ಯ ಮಂತ್ರಿಗಳ ವರ್ತನೆ ಏನು? ಅವರು ಮಾಡಿರತಕ್ಕ ರೀತಿ ನೀತಿ ಏನು ಎಂಬುದು ಗೊತ್ತಿದೆ. ಅವರು ಸಂವಿಧಾನ ಬಾಹಿರವಾಗಿ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ, ಪ್ರಚೋದನೆ ಮಾಡಿದ್ದಾರೆ. ಆದುದರಿಂದ ಅವರ ಬಗ್ಗೆ ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಭರವಸೆಯನ್ನು ಕೊಡಬೇಕು. ತಮಿಳ್ನಾಡು ಮುಖ್ಯ ಮಂತ್ರಿಗಳ ವಿರುದ್ಧ ಅವರು ನಡೆಸಿದಂಥ ಸತ್ಯಾಗ್ರಹದ ವಿರುದ್ಧ ಈ ಸಭೆಯಲ್ಲಿ ಒಂದು ಖಂಡನಾ ನಿರ್ಣಯವನ್ನು ನಾನೇ ತರುತ್ತೇನೆಂಬ ಮಾತನ್ನು ಅವರು ಹೇಳಬೇಕೆಂದು ತಮ್ಮ ಮೂಲಕ ಅವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳಬೇಕು. ಏಕೆಂದರೆ, ಇದು ಬಹಳ ಗುರುತರವಾದ ಪ್ರಶ್ನೆ. ಈ ಪ್ರಶ್ನೋತ್ತರ ಕಾಲವನ್ನು ನಿಲ್ಲಿಸಿ ಇದನ್ನು ತೆಗೆದುಕೊಳ್ಳುವಂತೆ ನಾಲ್ಕು ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :-ಮಾನ್ಯ ಅಧ್ಯಕ್ಷರೆ, ಕಾವೇರಿ ವಿವಾದದ ಮಹತ್ವದ ಬಗ್ಗೆ ನನ್ನದು ಎರಡು ವಿಚಾರವಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ. ನಾವು ಈ ಸದನವನ್ನು ಕರೆದದ್ದು ಕಾವೇರಿ ವಿಚಾರವನ್ನು ಚರ್ಚೆ ಮಾಡಬೇಕೆಂದು. ದುರ್ದೈವವಶಾತ್ ಕಳೆದ 3

ದಿನಗಳಿಂದ ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಆಗಿಲ್ಲ. ಆದರೂ ಕೂಡ ತಾವು ಈ ವಿಚಾರದ ಮಹತ್ವದ ಬಗ್ಗೆ ತಮ್ಮ ಸೂಚನೆಗಳನ್ನು ಏನು ಕೊಡುತ್ತೀರಿ ಅದರೆ ಬಗ್ಗೆ ಇವತ್ತೇ ಚರ್ಚೆ ಮಾಡೋಣ. ನಮ್ಮ ವ್ಯವಹಾರ ಶೀರ್ಷಿಕೆಯಲ್ಲಿ ಇದನ್ನೂ ಕೂಡ ತಾವು ಕಾಣಿಸಿದ್ದೀರಿ. ಕಾವೇರಿ ಬಗ್ಗೆ ತಾವು ಹೇಳುವುದಕ್ಕೆ ನಾವು ಬಹಳ ಮಹತ್ವವನ್ನು ಕೊಟ್ಟಿದ್ದೇವೆ. ನಮ್ಮ ಕರ್ನಾಟಕ ರಾಜ್ಯದ ನಿಲುವು ಅಚಲವಾಗಿದೆ. ಯಾವುದೇ ಸಂದರ್ಭದಲ್ಲೂ ಕಾವೇರಿ ವಿಚಾರದಲ್ಲಿ ನಮ್ಮ ನಿಲುವನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆಂದು ನಾವು ಬಹಳ ಸ್ಪಷ್ಟವಾಗಿ ಕೇಂದ್ರ ಸರ್ಕಾರಕ್ಕೆ ಮತ್ತು ತಮಿಳ್ನಾಡಿಗೂ ಕೂಡ ಹೇಳಿದ್ದೇವೆ. ಇದರ ಬಗ್ಗೆ ವ್ಯಾಪಕವಾದ ಚರ್ಚೆಯಾಗಬೇಕಾಗಿದೆ; ಇದನ್ನು ನಾನು ಒಪ್ಪುತ್ತೇನೆ. ಈಗ ಪ್ರಶ್ನೆ ಏನೆಂದರೆ, ಪ್ರಶ್ನೋತ್ತರ ವೇಳೆ ಎಂದರೆ ಅದು ಮಾನ್ಯ ಸದಸ್ಯರ ಕಾಲ. ಅದು ಮಾನ್ಯ ಸಭಾಧ್ಯಕ್ಷರದ್ದೂ ಅಲ್ಲ, ಸರ್ಕಾರದ ನಡವಳಿಕೆ ಕೂಡ ಅಲ್ಲ. ಅದು ಸದಸ್ಯರ ಒಂದು ಹಕ್ಕಿನ ಪ್ರಶ್ನೆ. ಏಕೆಂದರೆ, ಮಾನ್ಯ ಸದಸ್ಯರು ಅವರವರ ಕ್ಷೇತ್ರದ ಬಗ್ಗೆ, ಸರ್ಕಾರದ ವ್ಯಾಪಕ ಕಾರ್ಯಕ್ರಮಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿರುತ್ತಾರೆ. ಆದುದರಿಂದ ಇದಕ್ಕೆ ಹೆಚ್ಚು ಮಹತ್ವ. ಇನ್ನೊಂದಕ್ಕೆ ಕಡಿಮೆ ಮಹತ್ವ, ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ಏನು ಪ್ರಶ್ನೆಗಳನ್ನು ಕೇಳಿದ್ದಾರೆ ಅದಕ್ಕೆ ಉತ್ತರಗಳನ್ನು ಪಡೆಯತಕ್ಕ ಹಕ್ಕು ಅವರಿಗಿದೆ. ನಮ್ಮ ನಾಯಕರು ಹೇಳಿದಂತೆ, ಮಾನ್ಯ ಚಂದ್ರೇಗೌಡರು, ಸಿಂಧ್ಯಾರವರು ಹೇಳಿದಂತೆ ಅನೇಕ ಸಂದರ್ಭಗಳಲ್ಲಿ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಮೊದಲು ತೆಗೆದುಕೊಂಡು ಪ್ರಶ್ನೋತ್ತರ ವೇಳೆಯನ್ನು ಬದಿಗಿರಿಸಿರತಕ್ಕದ್ದೂ ಇದೆ; ಇಲ್ಲವೆಂದು ನಾನು ಹೇಳುವುದಿಲ್ಲ. ನಿಯಮಾವಳಿಯ ಪ್ರಕಾರ ಆಗುವುದಿಲ್ಲ. ಬಹಳ ಮಹತ್ವದ ಪ್ರಶ್ನೆ ಬಂದಾಗ ಇದನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೂ ಇದೆ. ಆದರೆ ಈಗಾಗಲೇ ಕಳೆದ 3 ದಿನಗಳಿಂದ ಎಲ್ಲ ಪ್ರಶ್ನೆಗಳೂ ಲ್ಯಾಪ್ಸ್ ಆಗಿರುವುದರಿಂದ ಮತ್ತೆ ಇವತ್ತೂ ಕೂಡ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಿದರೆ ಸದನದ ಸದಸ್ಯರ ಹಕ್ಕು ಅಥವಾ ಅವರ ಸವಲತ್ತು ಏನಿದೆ ಅದನ್ನು ನಿರಾಕರಿಸತಕ್ಕ ಅಗತ್ಯ ಇದೆಯೇ ಇಲ್ಲವೇ ಎಂಬ ವಿಚಾರ ತಮ್ಮ ಪರಾಮರ್ಶೆಗೆ ಬಿಟ್ಟಿದ್ದುದು.

ಸರ್ಕಾರದ ಮಟ್ಟಿಗೆ ಹೇಳುವುದಾದರೆ, ಈ ಚರ್ಚೆಯಾಗಬೇಕು, ಇದು ಮಹತ್ವವಾದ ಚರ್ಚೆ, ಇಲ್ಲಿ ಬಹು ಕಾಲ ಸದಸ್ಯರ ಚರ್ಚೆಯಾಗಬೇಕು, ಇಲ್ಲಿ ಕೂಡ ಸಮರ್ಪಕವಾದ ಉತ್ತರವನ್ನು ಕೊಡಲಿಕ್ಕೆ ತಾವು ನಿರೀಕ್ಷೆ ಮಾಡುವಂಥದ್ದು ಪ್ರಾಮುಖ್ಯವಾದುದ್ದು. ಆದುದರಿಂದ ಪ್ರಶ್ನಾವಳಿಯಾಗಲಿ, ಪ್ರಶ್ನಾವಳಿಯಾದ ಕೂಡಲೆ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ :-ಮಾನ್ಯ ಅಧ್ಯಕ್ಷರೇ, ರಾಜ್ಯದ ಹಿತವನ್ನು ಕಾಯುವುದರಲ್ಲಿ ಅವರಿಗೆ ಕಳಕಳಿ ಇದೆ ಎಂದು ಅವರು ಹೇಳಿದ್ದಾರೆ. ಅದಕ್ಕಿಂತಲೂ ಸದಸ್ಯರ ಹಕ್ಕು ದೊಡ್ಡದು ಎಂದು ಹೇಳಿ ಸದಸ್ಯರು ತೀರ್ಮಾನ ಮಾಡಿದರೆ ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ಆದರೆ ಸಭಾನಾಯಕರಾದ ನೀವು ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು. ಅದು ಬಿಟ್ಟು ಕಳಕಳಿ ಇದೆ, ಕಳಕಳಿ ಇದೆ ಎಂದರೆ, ಅದರ ಅಭಿವ್ಯಕ್ತತೆ ಎಲ್ಲಾದರೂ ಒಂದು ಕಡೆ ಆಗಬೇಕು, ಅದರ ಪ್ರದರ್ಶನವಾಗಬೇಕು. ಆ ಪ್ರದರ್ಶನ ಎಲ್ಲಿ ಆಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಸಂಜೆ 5-6 ಗಂಟೆಗೆ ಪ್ರಶ್ನೆ ತೆಗೆದುಕೊಂಡರೆ ದೊಡ್ಡ ಅಪಘಾತ, ಅಪರಾಧ ಏನೂ ಆಗುವುದಿಲ್ಲ. ತಮಗೆ ಯಾವುದರ ಬಗ್ಗೆ ಕಳಕಳಿ ಇದೆ ಅದು ಅಭಿವ್ಯಕ್ತವಾಗಬೇಕು. ಕಳಕಳಿ ಇದೆ, ಪತ್ರಿಕೆಗಳ ಹೇಳಿಕೆಯನ್ನು ನೋಡಿದ್ದೇವೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಸರ್ಕಾರವನ್ನು ನಡೆಸುವ ಕ್ರಮವನ್ನು ನೋಡಿದ್ದೇವೆ. ಆದರೆ

ಸದನ ಇಂತಹ ಒಂದು ಮಹತ್ವದ ವಿಚಾರಕ್ಕೆ ಅಂದರೆ ಪ್ರಶ್ನೋತ್ತರವೇ ಮುಖ್ಯವೆಂದು ಸದಸ್ಯರ ತೀರ್ಮಾನವಾದರೆ ನಾನೇನೂ ಅಡ್ಡಿ ಬರುವುದಿಲ್ಲ. ಆದರೆ ನಾವು ಇದಕ್ಕೆ ಎಷ್ಟು ಮಹತ್ವವನ್ನು ಕೊಟ್ಟಿದ್ದೇವೆ ಎಂಬುದು ನಾಳೆ ಜನರಿಗೆ ಪತ್ರಿಕೆಗಳ ಮೂಲಕ ಗೊತ್ತಾದರೆ ಅದರಿಂದ ಆಗುವ ಪರಿಣಾಮವನ್ನು ಅವರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ತಮ್ಮಿಂದ ನನಗೆ ಭರವಸೆ ಬೇಕು. ತಮಿಳುನಾಡಿನ ಮುಖ್ಯಮಂತ್ರಿಗಳ ವಿರುದ್ಧ ಮತ್ತು ವಿ.ಸಿ.ಶುಕ್ಲಾ ಅವರ ವಿರುದ್ಧ ಖಂಡನಾ ನಿರ್ಣಯವನ್ನು ಈ ಸಭೆಯಲ್ಲಿ ತರುತ್ತೀರಾ ಎಂದು ನಾನು ತಮ್ಮ ಮೂಲಕ ಈ ಪ್ರಾರ್ಥನೆಯನ್ನು ಮಾಡುತ್ತೇನೆ. ನಿರ್ಣಯವನ್ನು ತರುತ್ತೇವೆಂದು ನೀವು ಭರವಸೆ ಕೊಡಬೇಕು. ಏಕೆಂದರೆ ನಿಮಗೆ ಗೊತ್ತಿದೆ. ಏನು ಏನು ನಡೆದಿದೆ, ಏನೇನು ಪಿತೂರಿ ನಡೆದಿದೆ ಎಂಬುದನ್ನು ವಿಚಾರಗಳು ಚರ್ಚೆಗೆ ಬಂದಾಗ ಗೊತ್ತಾಗುತ್ತದೆ. ಈಗ ನೀವು ಪತ್ರವನ್ನು ಬರೆದು ಕೊಟ್ಟಿದ್ದರು ಎಂದು ಹೇಳಿ ಸುಳ್ಳು ಹೇಳಬಹುದು, ನಿಜ ಹೇಳಬಹುದು ಇದೆಲ್ಲಾ ಚರ್ಚೆಗೆ ಬರುತ್ತದೆ. ಆದುದರಿಂದ ಶ್ರೀ ವಿ.ಸಿ.ಶುಕ್ಲಾ ಮತ್ತು ತಮಿಳುನಾಡಿನ ಮುಖ್ಯಮಂತ್ರಿ ಕುಮಾರಿ ಜಯಲಲಿತವರ ವಿರುದ್ಧ ಇಲ್ಲಿ ಖಂಡನಾ ನಿರ್ಣಯವನ್ನು ತರುತ್ತೀರಾ? ಎಂಬ ವಿಷಯಕ್ಕೆ ಭರವಸೆ ಸಿಗಬೇಕು. ಇದನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ ಮಾತನ್ನು ನಾನು ಬಹಳ ಗಹನವಾಗಿ ಕೇಳಿದೆ. ಪ್ರಶ್ನೋತ್ತರ ಎನ್ನತಕ್ಕದ್ದು ಸದಸ್ಯರ ಹಕ್ಕು ನಿಜ. ಅದನ್ನು ಮೊಟಕು ಮಾಡುವುದು ಸರಿಯಲ್ಲ. ಆದರೆ ಇದು ಕೂಡ ನಿಜ. ಇವತ್ತು ಇರತಕ್ಕಂಥ ವಿಷಯ ಏನೆಂದರೆ, ಮುಖ್ಯಮಂತ್ರಿಗಳಾಗಿರುವಂಥವರು ತನ್ನ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಂಥದ್ದು ಅವರ ಮೊದಲ ಕರ್ತವ್ಯ. ಅಂಥವರು ಉಪವಾಸ ಸತ್ಯಗ್ರಹ ಮಾಡಿರುವಂಥದ್ದು ಬಹುಶಃ ನನ್ನ ಮಾಹಿತಿಯ ಪ್ರಕಾರ ಇಡೀ ದೇಶದಲ್ಲಿ ಎಲ್ಲೂ ಇಲ್ಲ. ಇದು ಪ್ರಥಮವಾದುದ್ದು. ಇದಕ್ಕೆ ಕಾರಣವೇನು ಎಂದರೆ, ಈ ಕಡೆ ನಮ್ಮ ರಾಜ್ಯದ ಮೇಲೆ ಒತ್ತಡ ಹಾಕುವುದು, ಅದಕ್ಕಿಂತ ಮಿಗಿಲಾಗಿ ಕೇಂದ್ರದ ಮೇಲೆ ಒತ್ತಡ ತರುವಂಥದ್ದು. ಕಾವೇರಿ ನದಿ ಕಥೆ ಈಗಿನಿಂದ ಪ್ರಾರಂಭವಾಗಿಲ್ಲ. ಈ ದಬಾವಣೆ ಎನ್ನತಕ್ಕದ್ದು ನೂರು- ನೂರೈವತ್ತು ವರ್ಷಗಳು ಆಗಿದೆ. ಅದನ್ನೇ ಒಂದು ಮೂಲ ಬಂಡವಾಳವನ್ನಾಗಿ ಇಟ್ಟುಕೊಂಡು 100-150ವರ್ಷಗಳಿಂದ ಇಲ್ಲಿಯವರೆಗೆ ತಮಿಳುನಾಡಿನ ಜನರು ಯಶಸ್ಸನ್ನು ಕಾಣುತ್ತಿದ್ದಾರೆ. ಅದಕ್ಕೆ ಅಲ್ಲಿನ ಸರ್ಕಾರ ಒತ್ತು ಕೊಡುತ್ತದೆ. ಮತ್ತು ಕೇಂದ್ರದ ಒಬ್ಬ ಮಂತ್ರಿಗಳು ಒತ್ತು ಕೊಡುತ್ತಿದ್ದಾರೆ. ಇದು ಅರ್ಥವಾಗುತ್ತಿಲ್ಲ. ಈ ದೇಶದಲ್ಲಿ ಯಾರು ಆಡಳಿತ ನಡೆಸತಕ್ಕಂಥವರು, ಎಂಥವರಿಂದ ಆಡಳಿತ ನಡೆಯುತ್ತಿರುವುದು ಎಂಬುದು ಇತ್ಯರ್ಥವಾಗಬೇಕಾಗಿದೆ. ಒಬ್ಬ ಕೇಂದ್ರ ಮಂತ್ರಿಗಳು ಇಲ್ಲಿ ಬಂದು ಕರ್ನಾಟಕ ರಾಜ್ಯದಲ್ಲಿ ಒಂದು ರೀತಿಯಲ್ಲಿ ಮಾತನ್ನಾಡುತ್ತಾರೆ. ತಮಿಳುನಾಡಿನಲ್ಲಿ ಮತ್ತೊಂದು ರೀತಿಯಲ್ಲಿ ಮಾತನಾಡುತ್ತಾರೆ. ದೆಹಲಿಯಲ್ಲಿ ಮತ್ತೊಂದು ಮಾತು ಆಡುತ್ತಾರೆ. ಎಂಥವರ ಕೈಯಲ್ಲಿ ಇವತ್ತಿನ ದಿವಸ ರಾಜ್ಯದ ಆಡಳಿತ ನಡೆಯುತ್ತಿದೆ, ಇಂಥವರ ಕೈಯಲ್ಲಿ ದೇಶ ಸುರಕ್ಷಿತವಾಗಿರುತ್ತದೆ ಎಂಬುದು ಇತ್ಯರ್ಥ ವಾಗಬೇಕಾಗಿದೆ. ಆದುದರಿಂದ ನಿಯಮಾವಳಿ ಪ್ರಕಾರ ಪ್ರಶ್ನೋತ್ತರ ನಿಗದಿತವಾಗಿದೆ. ಆದರೆ ಎಂದೂ ನಡೆಯದಿರತಕ್ಕಂಥ ಘಟನೆ ಈ ದೇಶದ ಚರಿತ್ರೆಯಲ್ಲಿ ನಡೆದಿದೆ. ಆದುದರಿಂದ ಆ ಘಟನೆಗಳಿಗೆ ಅನುಗುಣವಾಗಿ ಇವತ್ತಿನ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾದದ್ದು ಅವಶ್ಯಕವಾಗಿದೆ. ಇದಕ್ಕೆ ಅಷ್ಟು ಪ್ರಾಮುಖ್ಯತೆ ಇದೆ.

ಇದಕ್ಕೆ ಕಾರಣವೇನು ಎಂದರೆ, ಈ ರೀತಿಯಾಗಿ ತಮಿಳುನಾಡಿನ ದಬ್ಬಾಳಿಕೆಗೆ ತಲೆಬಾಗುತ್ತಾ ಹೋದರೆ ಸಾವಿರಾರು ವರ್ಷಗಳ ಕಾಲ ಈ ಭೂಮಿ ಆಕಾಶ ಇರುವವರೆಗೂ ಕೂಡ ಕರ್ನಾಟಕದ ರಾಜ್ಯ ಜನತೆ ಹಾಳಾಗಬೇಕಾಗುತ್ತದೆ. ಇವರು ಕಷ್ಟ ಅನುಭವಿಸಬೇಕಾಗುತ್ತದೆ. 100-150 ವರ್ಷಗಳಿಂದ ಇದನ್ನು ಅನುಭವಿಸಿದ್ದೇವೆ, ಇನ್ನು ಸಾವಿರಾರು ವರ್ಷಗಳವರೆಗೂ ಅನುಭವಿಸಬೇಕಾಗುತ್ತದೆ. ಆದುದರಿಂದ ಈ ವಿಷಯದ ಪ್ರಾಮುಖ್ಯತೆಯನ್ನು ತಾವು ಅರ್ಥ ಮಾಡಿಕೊಂಡು ದಯಮಾಡಿ ಇದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಇವತ್ತಿನ ಪ್ರಶ್ನೋತ್ತರವನ್ನು ಮತ್ತೊಂದು ದಿವಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಈ ಕಾರಣದಿಂದ ಇದನ್ನು ತಕ್ಷಣ ತೆಗೆದುಕೊಳ್ಳುವಂತಹ ಅವಶ್ಯಕತೆ ಇದೆ. ಇದಕ್ಕೆ ಸರ್ಕಾರ ಒಪ್ಪಬೇಕು ಎಂದು ನಾನು ತಮ್ಮ ಮೂಲಕ ಅವರನ್ನು ವಿನಂತಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೇ, ತಮ್ಮ ಕಛೇರಿಯಿಂದ ಈಗತಾನೆ ನಮಗೆ ಒಂದು ಪತ್ರ ಬಂದಿದೆ. ನಾನು ಮತ್ತು ನಮ್ಮ ಸ್ನೇಹಿತರು ಕಾವೇರಿ ನೀರನ್ನು ಬಳಸಿಕೊಳ್ಳುವುದರ ಬಗ್ಗೆ ಮತ್ತು ಅದರ ಹಕ್ಕನ್ನು ಉಳಿಸಿಕೊಳ್ಳುವುದರ ಬಗ್ಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿಕೊಟ್ಟಿದ್ದೆವು. ಅದನ್ನು ನೀವು 68ನೇ ನಿಯಮಾವಳಿ ಕೆಳಗೆ ಬದಲಾವಣೆ ಮಾಡಿರುವುದಾಗಿ ನಮಗೆ ಪತ್ರ ಬಂದಿದೆ. ನನಗೆ ಸಂಪೂರ್ಣವಾಗಿ ಅರಿವು ಇದೆ. ಈ ಬದಲಾವಣೆಯನ್ನು ಮಾಡುವುದಕ್ಕೆ ನಿಮಗೆ ಹಕ್ಕು ಇದೆ, ಅಧಿಕಾರ ಇದೆ. ಆದರೆ ಇದು ಸರಿಯಲ್ಲ ಎಂದು ನನ್ನ ಭಾವನೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್ ಮಾಡಿ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎನ್ನುವಂತಹ ಪ್ರಶ್ನೆ ಬಂದಿದೆ ಮೊದಲು ಅದನ್ನು ಇತ್ಯರ್ಥ ಮಾಡೋಣ.

ಶ್ರೀ ವೈ.ಕೆ.ರಾಮಯ್ಯ :- ಅದರ ಜೊತೆಯಲ್ಲಿ ಇದೂ ಒಂದು ಪ್ರಶ್ನೆ ಇದೆ. ದಯಮಾಡಿ ಕೇಳಿ. ಇದು ಪ್ರಶ್ನೆಗಳು ಆದಮೇಲೆ ಚರ್ಚೆಗೆ ಬರಬೇಕೇ ಅಥವಾ ಈಗಲೇ ಚರ್ಚೆಗೆ ಬರಬೇಕೇ ಎನ್ನುವುದು ಒಂದು ವಿಷಯ. ಇನ್ನು ಎರಡನೆಯ ವಿಷಯ, ಇದು ಯಾವ ವಿಧದಲ್ಲಿ ಚರ್ಚೆಯಾಗಬೇಕು ಎನ್ನುವುದು. ಏಕೆಂದರೆ ಮೂರು ವರ್ಷಗಳಿಂದ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಆ ಕಡೆಯಿಂದ ಉತ್ತರ ಕೊಟ್ಟಿದ್ದಾರೆ. ಆದರೆ ಸಮಸ್ಯೆ ಪರಿಹಾರವಾಗಿಲ್ಲ. ಇವತ್ತು ಇದಕ್ಕೆ ಔಪಚಾರಿಕವಾದಂತಹ ಒಂದು ಚರ್ಚೆ ನಡೆದು, ಔಪಚಾರಿಕವಾದಂತಹ ಉತ್ತರ ಬರುವುದಾದರೆ ಚರ್ಚೆ ಬೇಕಾಗಿಲ್ಲ. ಅದಕ್ಕೆ ನಾನು ಹೇಳುತ್ತಿದ್ದೇನೆ, ಇದನ್ನು 68ನೇ ನಿಯಮಾವಳಿ ಇರುವುದನ್ನು ನೀವು ಬದಲಾವಣೆ ಮಾಡಿ ಹೆಚ್ಚಿನ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಬೇರೆ ವಿಧದಲ್ಲಿ, ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ತೆಗೆದುಕೊಳ್ಳಬೇಕು ಎಂದು ನನ್ನ ಪ್ರಾರ್ಥನೆ ಏಕೆಂದರೆ ಯಾರೋ ಒಬ್ಬ ಸತ್ತಾಗ ಶ್ರದ್ಧಾಂಜಲಿ ಅರ್ಪಿಸಲಿಕ್ಕೆ, ಯಾರಾದರೂ ಅಧಿಕಾರಕ್ಕೆ ಬಂದಾಗ ಅಭಿನಂದನೆ ಅರ್ಪಿಸಲಿಕ್ಕೆ ಈ ಸದನ ಸೀಮಿತವಾಗುವುದು ಬೇಡ. ಇದು ಬಡವರ ಬವಣೆಯನ್ನು ಬಿಂಬಿಸುವಂತಹ ಸದನವಾಗಲಿ. ನಾವು ಕಾವೇರಿ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿದರೆ ತಾವು ಅದನ್ನು 68ರ ನಿಯಮಾವಳಿ ಕೆಳಗೆ ಬದಲಾವಣೆ ಮಾಡಿ ಕಳುಹಿಸಿದರೆ ನಾವು ಏನು ಮಾಡಬೇಕು. ಒಂದು ತಿಂಗಳಿನಿಂದ ಕಾವೇರಿ ನೀರಿನ ಬಗ್ಗೆ ಎಷ್ಟೊಂದು ಗಂಭೀರವಾದಂತಹ ವಾತಾವರಣ ಇದೆ. ಎಲ್ಲಿ ನಿಮ್ಮ ನೀರಾವರಿ ಸಚಿವರು ಎಂದು ಸರ್ಕಾರವನ್ನು ತಮ್ಮ ಮುಖಾಂತರ ಕೇಳಲಿಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರಕ್ಕೆ ಕಾವೇರಿ ನೀರಿನ ಬಗ್ಗೆ ಎಷ್ಟು ಗಂಭೀರವಾದ ಪ್ರಜ್ಞೆ ಇದೆ ಎನ್ನುವುದಕ್ಕೆ ಇದೇ ಕಾರಣ. Where is your Irrigation Minister ? ಎಲ್ಲಿ ಹೋಗಿದ್ದಾರೆ ಸ್ವಾಮಿ ಮಂತ್ರಿಗಳು. ಇದರಲ್ಲೇ ಗೊತ್ತಾಗುತ್ತದೆ, ಇವರಿಗೆ ಕಾವೇರಿ ನೀರಿನ ಬಗ್ಗೆ ಮತ್ತು ಕಾವೇರಿ ನೀರಿನ ಪಾತ್ರದಲ್ಲಿ ಇರುವಂತಹ ಜನಗಳ ಬಗ್ಗೆ ಎಷ್ಟು ಆಸಕ್ತಿ ಇದೆ

ಎಂದು. ಇಂತಹ ಒಂದು ಪ್ರಬಲವಾದಂತಹ, ಗಂಭೀರವಾದಂತಹ ಸಮಸ್ಯೆ ಸದನದ ಮುಂದೆ ಇದೆ. ಆದರೆ ಇದಕ್ಕೆ ಸಂಬಂದಪಟ್ಟ ಮಂತ್ರಿಗಳು ಇಲ್ಲ. ನಾವು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳಬೇಕು ಎಂದು ತಮಗೆ ಕಳುಹಿಸಿಕೊಡುತ್ತೇವೆ, ಆದರೆ ತಾವು ಅದನ್ನು 68ರ ನಿಯಮಾವಳಿ ಕೆಳಗೆ ಬದಲಾವಣೆ ಮಾಡುತ್ತೀರಿ. ಈ ಸರ್ಕಾರಕ್ಕೆ ಗಂಭೀರತೆ ಇಲ್ಲ, ಸೀರಿಯಸ್‌ನೆಸ್ ಇಲ್ಲ. ಆದರೆ ತಮಗಾದರೂ ಇರಬೇಕಾಗುತ್ತದೆ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇದನ್ನು 68ರ ನಿಯಮಾವಳಿ ಕೆಳಗೆ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ತೆಗೆದುಕೊಳ್ಳಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾವು ನಿಲುವಳಿ ಸೂಚನೆ ಕಳುಹಿಸಿದ್ದೇವೆ. ಬಹುಶಃ ಇದಕ್ಕೆ ವಿರೋಧ ಪಕ್ಷದ ಎಲ್ಲಾ ಮುಖಂಡರ ಒಮ್ಮತದ ಅಭಿಪ್ರಾಯ ಇದೆ. ಆದುದರಿಂದ ಪ್ರಶ್ನೋತ್ತರ ವೇಳೆಯನ್ನು ದಯಮಾಡಿ ಸಸ್ಪೆಂಡ್ ಮಾಡಿ. ನಿಲುವಳಿ ಸೂಚನೆ ಮೂಲಕ ಇವತ್ತು ತಾವು ಕಾವೇರಿ ವಿಚಾರದ ಬಗ್ಗೆ ಚರ್ಚೆಗೆ ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಸಭಾನಾಯಕರು ದಯಮಾಡಿ ಒಪ್ಪಿಕೊಳ್ಳಬೇಕು. ಏಕೆಂದರೆ, ಕ್ವಶ್ಚನ್ ಅವರ್ ಯಾವಾಗ ಉದ್ಭವ ಆಗುತ್ತದೆ ಎಂದರೆ ಕಾವೇರಿ ವಿವಾದದ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವು ಸದನ ಕರೆದಿದ್ದಕ್ಕೋಸ್ಕರ ಈ ಪ್ರಶ್ನೆ ಉದ್ಭವವಾಯಿತು. ಮತ್ತು ಈ ಭಾಗದಲ್ಲಿನ ಎಲ್ಲರ ಒಮ್ಮತದ ಅಭಿಪ್ರಾಯ ಇದೆ. ಕಾವೇರಿ ಬಗ್ಗೆ ಆದ್ಯತೆ ಕೊಡಬೇಕು. ಈ ದೇಶದ ಪ್ರಧಾನಿಗೆ ಈ ಸದನ ಇದಕ್ಕಾಗಿ ಸೇರಿದ್ದು ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡಿ, ಇದರ ಮಹತ್ವದ ಬಗ್ಗೆ ಚರ್ಚೆಯಾಗಿದೆ, ಆದ್ದರಿಂದ ಇದರ ಬಗ್ಗೆ ಗಮನಕೊಡಬೇಕೆಂದು ಹೇಳಬೇಕಾಗಿದೆ. ಸತ್ಯಕ್ಕೆ ಅಪಚಾರ ಮಾಡಿರುವಂತಹ ಸಚಿವರನ್ನು ಕ್ಯಾಬಿನೆಟ್‌ನಿಂದ ಬಿಡುವಂತಹ ಒಂದು ರೆಸಲ್ಯೂಷನ್ ಮಾಡಬೇಕಾಗಿದೆ. ಆದುದರಿಂದ ದಯಮಾಡಿ ಸಭಾನಾಯಕರು ಇದಕ್ಕೆ ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಮಿಳುನಾಡಿನ ಮುಖ್ಯಮಂತ್ರಿ ವಿರುದ್ಧ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಮತ್ತು ವಿ.ಸಿ. ಶುಕ್ಲ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದೇನೆ. ತಮಿಳುನಾಡಿನ ಮುಖ್ಯಮಂತ್ರಿ ವಿರುದ್ಧ ನನ್ನ ಧಿಕ್ಕಾರ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ನಮಗೆ ಏನೂ ಆಕ್ಷೇಪಣೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು, ಮತ್ತು ಸದನ ಒಪ್ಪಿಗೆ ಕೊಟ್ಟರೆ ಈ ಕಾವೇರಿ ವಿವಾದವನ್ನು ಮೊದಲು ತೆಗೆದುಕೊಳ್ಳವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು :- ಈಗ ಪ್ರಶ್ನೋತ್ತರ ವೇಳೆಯನ್ನು ತಡೆಹಿಡಿದು, ಕಾವೇರಿ ಸಮಸ್ಯೆ ಬಗ್ಗೆ ಚರ್ಚೆಗೆ ತಮ್ಮೆಲ್ಲರ ಸರ್ವಮತ ಒಪ್ಪಿಗೆ ಇದ್ದರೆ ನಾನು ಅದನ್ನು ಮೊದಲು ತೆಗೆದುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಒಕ್ಕೊರಲಿನಿಂದ ಪ್ರಶ್ನೋತ್ತರ ವೇಳೆಗೆ ಒತ್ತಾಯಿಸಿದರು)

11.30 ಪಿ.ಎಂ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ವೇಳಗೆ ತಾವು

ಮಹತ್ವವನ್ನು ಕೊಡುವುದಾದರೆ ನಾವು ಈ ಧೋರಣೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಬೇಕಾಗುತ್ತದೆ.

(ಮಾನ್ಯ ಬಿ.ಜೆ.ಪಿ. ಸದಸ್ಯರಾದ ಬಿ.ಎಸ್.ಯಡಿಯೂರಪ್ಪನವರು, ಕೆ.ಎಸ್.ಈಶ್ವರಪ್ಪನವರು, ಎ.ರುಕ್ಮಯ್ಯಪೂಜಾರಿಯವರು ಮತ್ತು ಮಾನ್ಯ ನಾರಾಯಣರಾವ್ ಮನೋಳಿಯವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ :- ಮಾನ್ಯ ಅಧ್ಯಕ್ಷರೇ, ನಾವು ನೀತಿ ನಿಯಮಗಳ ಪ್ರಕಾರ ಹೋಗುತ್ತಿದ್ದೇವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನ ಮಾಡಲಾಗಿದೆಯೋ ಅದರಂತೆ ತಾವು ತೀರ್ಮಾನ ತೆಗೆದುಕೊಳ್ಳಬಹುದು. ಈಗ ಸಭೆಯಲ್ಲಿ ಬಿ.ಎ.ಸಿ. ರಿಪೋರ್ಟನ್ನು ಒಪ್ಪುವುದು ಬೇಡ, ಬೇರೆ ರೀತಿ ಮಾಡಬೇಕೆಂದರೆ ನಮ್ಮದೇನು ಅಡ್ಡಿ ಇಲ್ಲ. ಬಹುಶಃ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಈ ವಿಷಯ ಅತ್ಯಂತ ಪ್ರಾಮುಖ್ಯವಾಗಿದೆ. ಆದರೆ ಬಿ.ಎ.ಸಿ ಯಲ್ಲಿ ವಿರೋಧಪಕ್ಷದ ನಾಯಕರು ಉಪನಾಯಕರು ಪ್ರಶ್ನೋತ್ತರ ವೇಳೆ ಆದ ತಕ್ಷಣವೇ ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಬಿ.ಎ.ಸಿ.ಯಲ್ಲಿ ನೀವೇ ತೀರ್ಮಾನ ಮಾಡಿದ್ದೀರಿ.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಕಾವೇರಿ ವಿಷಯವನ್ನು ತೆಗೆದುಕೊಳ್ಳಬೇಕೆಂದು ಡಿಸ್‌ಕಷನ್ ಆಯಿತು. ಆದರೆ ಯಾವ ಫಾರಂನಲ್ಲಿ ಎಂದರೆ ಇದನ್ನು ನಮಗೆ ಬಿಡಿ ಎಂದು ಹೇಳಿದ್ದು. ಹಾಗಾಗಿ ನಾವು ತಕ್ಷಣ ಅಡ್ಜರ್ನ್‌ಮೆಂಟ್ ಮೋಷನ್ ತಮಗೆ ಕಳುಹಿಸಿದೆವು. ಅದಕ್ಕೆ ತಮ್ಮ ಕಡೆಯಿಂದ ಒಂದು ಪತ್ರ ಕೂಡ ಬಂದಿದೆ. ಅದೇನೆಂದರೆ ಅಡ್ಜರ್ನ್‌ಮೆಂಟ್ ಮೋಷನನ್ನು ನಾನು ನಿಯಮ 68ಕ್ಕೆ ಕನ್‌ವರ್ಟ್ ಮಾಡಿದ್ದೇನೆಂದು. ಅದು ದಿನಾಂಕ 24ರಂದು ಕೊಟ್ಟದ್ದು. ಮತ್ತೆ ಕೂಡ ಕೊಟ್ಟಿದ್ದೇವೆ. ತಾವು ನಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನನ್ನು ನಿಯಮ 68ಕ್ಕೆ ಕನ್‌ವರ್ಟ್ ಮಾಡುವುದು, ಅದು ತಮ್ಮ ಅಧಿಕಾರ, ಅದನ್ನು ನಾವು ಚಾಲೆಂಜ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಬಹಳ ವಿನಯದಿಂದ ಒಂದು ಮಾತನ್ನು ಹೇಳುತ್ತೇನೆ. ಯಾವುದಾದರೂ ಅಡ್ಜರ್ನ್‌ಮೆಂಟ್ ಮೋಷನನ್ನು ಮೂವ್ ಮಾಡಿದಾಗ ನಮಗೆ ಅದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲಿಕ್ಕೆ, ಪ್ರಿಲಿಮನರಿ ಸಬ್‌ಮಿಷನ್ ಮಾಡಲಿಕ್ಕೆ ಹೇಳಿ ಅದರಂತೆ ತಾವು ಯಾವ ನಿರ್ಣಯವನ್ನು ತೆಗೆದುಕೊಂಡರೂ ಅದಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ ಅದು ಆಗಲಿಲ್ಲ. ಹಾಗಾಗಿ ನಾವು ಪುನಃ ಏನು ಮಾಡಿದೆವು ಎಂದರೆ, ನಿನ್ನೆ 25ಕ್ಕೆ ಮತ್ತೊಂದು ಅಡ್ಜರ್ನ್‌ಮೆಂಟ್ ಮೋಷನ್‌ನನ್ನು ಕಳುಹಿಸಿದ್ದೇವೆ. ತಮ್ಮಿಂದ ಬಂದಿರತಕ್ಕಂಥ ಪತ್ರ ನಾವು 24ರಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದಕ್ಕೆ. ಕ್ವಶ್ಚನ್‌ಅವರ್ ಆದಮೇಲೆ ತೆಗೆದುಕೊಳ್ಳಲಾಗುವುದೆಂದು ನಾವು ಹೇಳಿದ್ದರೂ ಚರ್ಚೆಯಾಗಬೇಕೆಂದು ಹೇಳಿದ್ದಕ್ಕೆ ಸರ್ಕಾರ ಮತ್ತು ತಾವು ಒಪ್ಪಿಕೊಂಡಿರುತ್ತೀರಿ. ಆದರೆ ಯಾವ ಫಾರಂನಲ್ಲಿ ಅದನ್ನು ತರುವುದು ಎನ್ನುವುದು ನಮಗೆ ಬಿಟ್ಟದ್ದು ಎಂದು ನಾವು ಹೇಳಿದ್ದೇವೆ. ಕ್ವಶ್ಚನ್‌ಅವರ್ ನಂತರ ತೆಗೆದುಕೊಳ್ಳಿ. ಇದಕ್ಕೆ ಪ್ರಾಧಾನ್ಯತೆ ಕೊಟ್ಟು ಇದನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕು. ಆದಾದನಂತರ ಕ್ವಶ್ಚನ್‌ಅವರ್‌ನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ :- ಬಿ.ಎ.ಸಿ.ಯಲ್ಲಿ ತಾವೇ ಅದಕ್ಕೆ ಒಪ್ಪಿಗೆ ಕೊಟ್ಟಿದ್ದಿರಿ.

ಶ್ರೀ ಜಿ. ರಾಜುಗೌಡ :- ವಿಷಯ ಎಷ್ಟೇ ಗಹನವಾಗಿದ್ದರೂ, ಎಷ್ಟೇ ಪ್ರಾಮುಖ್ಯವಾದರೂ ಕೂಡ ಮಾನ್ಯ ಸದನದಲ್ಲಿರತಕ್ಕಂಥ ಸಂಪ್ರದಾಯವೇನೆಂದರೆ, ಯಾವುದೇ ವಿಷಯ ಬಂದರೂ ಕೂಡ

ಕ್ವಶ್ಚನ್ ಅವರ್ ಆಗಲೇಬೇಕು. ಆನಂತರ ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳಬೇಕೆನ್ನುವುದು ಸಂಪ್ರದಾಯ. ಅದನ್ನು ನಾವು ಪರಿಪಾಲನೆ ಮಾಡಿಕೊಂಡು ಬಂದಿದ್ದೇವೆ. ಬಹುಶಃ ಈಗ ಅದನ್ನು ಮೀರಿದರೆ ಅದು ಅತ್ಯಂತ ಒಂದು ಕೆಟ್ಟ ಸಂಪ್ರದಾಯವನ್ನು ಹಾಕಿಕೊಂಡಂತಾಗುತ್ತದೆ. ದಯವಿಟ್ಟು ಪ್ರಶ್ನೋತ್ತರ ವೇಳೆಯಾದ ಮೇಲೆ ಈ ವಿಷಯವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಒಂದು ವೇಳೆ ಕ್ವಶ್ಚನ್ ಅವರನ್ನು ಬದಿಗೊತ್ತಿದರೆ ಅದು ಒಂದು ಕೆಟ್ಟ ಸಂಪ್ರದಾಯ ಮಾಡಿದಂತಾಗುತ್ತದೆ. ಆದ್ದರಿಂದ ದಯವಿಟ್ಟು ಪ್ರಶ್ನೋತ್ತರವನ್ನು ಮುಗಿಸಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ :- ಮಾನ್ಯ ಅಧ್ಯಕ್ಷರೇ, ಇದು ಬಹುಮತದಿಂದ ತೀರ್ಮಾನ ಮಾಡುವಂಥ ವಿಷಯವಲ್ಲ.

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಸನ್ಮಾನ್ಯ ಅಧ್ಯಕ್ಷರೇ, ನಾನು ಬಹಳ ಹೊತ್ತಿನಿಂದ ನಿಂತಿದ್ದೇನೆ. ತಾವು ನನ್ನ ಕಡೆ ನೋಡಲೇ ಇಲ್ಲ. ಈ ವಿಷಯದಲ್ಲಿ ಇಷ್ಟು ಹೊತ್ತು ಚರ್ಚೆಯಾಗುವ ಅವಶ್ಯಕತೆ ನನಗೆ ಏನೂ ಕಾಣಲಿಲ್ಲ. ಕಾವೇರಿಯ ಸಮಸ್ಯೆಯ ಬಗ್ಗೆ ನಮ್ಮ ಧೋರಣೆ ಏನಿದೆ ಎನ್ನುವುದು ಈ ಕಾರ್ಯಕ್ರಮ ಪಟ್ಟಿಯಿಂದಲೇ ಗೊತ್ತಾಗುತ್ತದೆ. ಇವತ್ತು ಏನೋ ಎಲ್ಲರೂ ಬಹಳ ಹುಮ್ಮಸ್ಸಿನಲ್ಲಿ ಇದ್ದಾರೆ. ಇದಕ್ಕೆ ಕಾರಣವೇನು ಎನ್ನುವುದು ನನಗೆ ಗೊತ್ತಿದೆ. ಬಹಳ ಹುಮ್ಮಸ್ಸಿನಿಂದ ಈ ಸದನದ ಮಿತ್ರರು ಇದ್ದಾರೆ. ಆದರೆ ಈ ಹುಮ್ಮಸ್ಸಿನ ನಡುವೆ ಕಾವೇರಿಯ ಸಮಸ್ಯೆ ಮುಳಗಿ ಹೋಗಬಾರದು. ನಾನು ತಮಗೆ ಸಲಹೆ ಮಾಡುತ್ತಿರುವುದು. ಇವತ್ತಿನ ಕಾರ್ಯಕ್ರಮ ಪಟ್ಟಿಯ 6ನೇ ಅಂಶ, 68ನೇ ನಿಯಮಾವಳಿಯ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ ಎನ್ನುವುದನ್ನು ಬಿಟ್ಟರೆ ಕಾವೇರಿ ಸಮಸ್ಯೆ ಬಗ್ಗೆ ನಮಗೆ ಏನು ಶ್ರದ್ಧೆ ಇದೆ ಎನ್ನುವುದನ್ನು ನಾವೇ ತೋರಿಸಿಕೊಳ್ಳುತ್ತಿದ್ದೇವೆ ಎಂದಾಗುತ್ತದೆ. ಅದಕ್ಕಾಗಿ ನನ್ನ ವಿನಂತಿ ಏನೆಂದರೆ, ಈಗಲೂ ಕೂಡ ಅದನ್ನು ಅಡ್ಜರ್ನ್‌ಮೆಂಟ್ ಮೋಷನ್ ಎಂದು ತಾವು ಪರಿಗಣಿಸಿ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇಲ್ಲವೆಂದರೆ ಈ ಕಾರ್ಯಕ್ರಮದ ಪಟ್ಟಿಯಲ್ಲಿ ಭಾಗಿಯಾಗುವುದಕ್ಕೆ ನಾನು ತಯಾರಾಗಿಲ್ಲ. ತಾವು ತೀರ್ಮಾನವನ್ನು ಹೇಳಿದಮೇಲೆ ನಾನು ಸಭಾತ್ಯಾಗ ಮಾಡುವವನಿದ್ದೇನೆ.

ಅಧ್ಯಕ್ಷರು :- ಈ ಸಮಸ್ಯೆಯ ಗಂಭೀರತೆಯನ್ನು ಪರಿಗಣಿಸಿ ಇವತ್ತಿನ ಪ್ರಶ್ನೋತ್ತರದ ಸಮಯವನ್ನು ತಡೆಹಿಡಿದು, ಕಾವೇರಿ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡೋಣವೆಂದು ಹೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ತಾವು ಈ ಸಮಸ್ಯೆ ಮತ್ತು ಈ ವಿಷಯದ ಗಾಂಭೀರ್ಯವನ್ನು ತಿಳಿದುಕೊಂಡು ಇವತ್ತು ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕಿ ಕಾವೇರಿ ವಿಚಾರದಲ್ಲಿ ಪ್ರಾಧಾನ್ಯತೆಯನ್ನು ಕೊಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಇದರ ಬಗ್ಗೆ ಎಲ್ಲ ವಿರೋಧ ಪಕ್ಷದವರ ಪರವಾಗಿ ತಮಗೆ ನನ್ನ ಧನ್ಯವಾದವನ್ನು ಅರ್ಪಿಸುತ್ತೇನೆ. ಇವತ್ತು ಕರ್ನಾಟಕದ ಪ್ರಮುಖ ನದಿಯಾದ ಕಾವೇರಿ ನದಿಯ ನೀರನ್ನು ಬಳಸಿಕೊಳ್ಳುವುದರಲ್ಲಿ ಹಾಗೂ ರಾಜ್ಯಕ್ಕೆ ನ್ಯಾಯವಾಗಿ ಸಿಗಬೇಕಾದ ನೀರಿನ ಪಾಲನ್ನು ಉಳಿಸಿಕೊಳ್ಳುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದರ ಬಗ್ಗೆ ನಾನು ಈಗಾಗಲೇ ಅಡ್ಜರ್ನ್‌ಮೆಂಟ್ ಮೋಷನನ್ನು ಮೂವ್ ಮಾಡಿದ್ದೇನೆ. ಇವತ್ತು ಕಾವೇರಿಯ ಬಗ್ಗೆ ಹೇಳುವುದಾದರೆ, ಇವತ್ತೇ ನಮ್ಮ ಮುಂದೆ ಬಂದ ಸಮಸ್ಯೆ ಇದು ಎಂದು ನಾನು ಹೇಳುವುದಿಲ್ಲ. ಆದರೆ ನಾವು ಅಧಿಕಾರದಲ್ಲಿ ಬಂದಾಗ ಈ ಸಮಸ್ಯೆ ಇತ್ತು. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು

ಪ್ರಾಮಾಣಿಕವಾದ ಪ್ರಯತ್ನ ಸಹ ಆ ಸಮಯದಲ್ಲಿ ಆಯಿತು. ಈ ಸಮಸ್ಯೆಯನ್ನು ನಾವು ಮಾತುಕತೆಯಿಂದ ಬಗೆಹರಿಸಬೇಕು, ಟ್ರಿಬ್ಯೂನಲ್ ಮುಖಾಂತರ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನ್ಯಾಯ ತೀರ್ಮಾನ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಈ ನಮ್ಮ ಸ್ಟಾಂಡ್‌ಅನ್ನು ಆ ಸಮಯದಲ್ಲಿ ಆಗಿನ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಕೂಡ ಒಪ್ಪಿಕೊಂಡಿದ್ದರು. ಅದನ್ನು ಜಂಟಿ ಸಭೆಯಲ್ಲೂ ಅವರು ಹೇಳಿದ್ದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ದುರ್ದೈವದಿಂದ ಸರ್ಕಾರಗಳು ಹೋದವು. ಆ ವಿಷಯ ಅಲ್ಲಿಗೆ ನಿಂತಿತು. ಕಾಂಗ್ರೆಸ್ ಪಕ್ಷದವರು ಬಹಳ ದೊಡ್ಡ ಮೊತ್ತದಿಂದ 1989ರಲ್ಲಿ ಏನು ಅಧಿಕಾರದಲ್ಲಿ ಬಂದರೋ ಅವರು ಕಳೆದ ಮೂರುಮುಕ್ಕಾಲು ವರ್ಷಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವುದೂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಮುಖ್ಯವಾದ ಕಾರಣ ಸರ್ಕಾರದ ನೀತಿ ಸ್ಪಷ್ಟವಾಗಿಲ್ಲದಿರುವುದು. ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಸರ್ಕಾರಕ್ಕೆ ಯಾವ ಆಸಕ್ತಿಯೂ ಇರುವಂತೆ ಕಾಣುವುದಿಲ್ಲ. ಅಷ್ಟೇ ಅಲ್ಲ, ಕಾಂಗ್ರೆಸ್ ಪಕ್ಷದ ಕಚ್ಚಾಟದಿಂದ, ಒಳ ಜಗಳದಿಂದ ಇವತ್ತು ಮುಖ್ಯಮಂತ್ರಿ ವೀರಪ್ಪಮೊಯ್ಲಿಯವರು ಇರಬೇಕೋ ಅಥವಾ ಮತ್ತೊಬ್ಬರು ಇರಬೇಕೋ ಎನ್ನುವುದರ ಬಗ್ಗೆ ಹೆಚ್ಚು ಸಮಯ ಹೋಗುತ್ತಿದೆಯೇ ವಿನಃ ರಾಜ್ಯದ ಹಲವಾರು ಮುಖ್ಯಮಂತ್ರಿಗಳು . . . .

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ನಿಮಗೆ ಯಾವ ಚಿಂತನೆಯೂ ಇಲ್ಲ; ಕುಳಿತುಕೊಳ್ಳಿ. ಹಾಗಾಗಿ ಇದೇ ಒಂದು ಚಿಂತನೆಯಾಗಿದೆಯೇ ವಿನಃ ಕಳೆದ ಮೂರು ವರ್ಷದಲ್ಲಿ ಮುಖ್ಯಮಂತ್ರಿಗಳು ಮೂವರು ಆಗಿದ್ದಾರೆ. ನಾಲ್ಕನೆಯವರನ್ನು ತರುವುದಕ್ಕೆ ತಯಾರಿ ನಡೆದಿದೆ. ಕಾವೇರಿ ಸಮಸ್ಯೆ ಬಗ್ಗೆ ರಾಜ್ಯದಲ್ಲಿ ಭೀಕರ ಬರಗಾಲ ಇರುವ ಬಗ್ಗೆ, ರೈತರ ಬಗ್ಗೆ ಕಾರ್ಮಿಕರ ಬಗ್ಗೆ ಯಾವ ಚಿಂತನೆಯೂ ಈ ಸರ್ಕಾರಕ್ಕೆ ಇರುವುದು ಕಂಡುಬರುತ್ತಿಲ್ಲ. ಹಾಗಾಗಿ ಕಾವೇರಿ ಸಮಸ್ಯೆ ಬಗ್ಗೆ ಸರ್ಕಾರದ ನೀತಿ ಏನು ಎಂದು ಸ್ಪಷ್ಟವಾಗಿ ಇವತ್ತು ನಮಗೆ ಗೊತ್ತಾಗಬೇಕಾಗಿದೆ. ಇಡೀ ಸದನ ನಾವು ಯುನಾನಿಮಸ್ ಆಗಿ ಟ್ರಿಬ್ಯೂನಲ್‌ನ ಇಂಟೆರಿಮ್ ಅವಾರ್ಡನ್ನು ರಿಜೆಕ್ಟ್ ಮಾಡಬೇಕು ಎಂದು ರೆಸಲ್ಯೂಷನ್‌ನ್ನು ಮಾಡಿದ್ದೇವೆ. ಆದರೂ ಸಹ ಸರ್ಕಾರದ ಸ್ಪಷ್ಟವಾದ ನೀತಿ ಗೊತ್ತಾಗುತ್ತಿಲ್ಲ. ಮುಖ್ಯಮಂತ್ರಿಯವರು ಹಲವಾರು ಬಾರಿ ಹೇಳಿದ್ದಾರೆ. ಈ ಸದನದ ಏನುಒಂದು ರೆಸಲ್ಯೂಷನ್ ಇದೆ, ಅದು ನನಗೆ ಬೈಂಡಿಗ್ ಇದೆ, ಕಾವೇರಿ ವಿಚಾರದಲ್ಲಿ ನಾನು ದ್ರೋಹ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ದ್ವಂದ್ವ ನೀತಿಯಿಂದ ಇವತ್ತು ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಅದರ ಲಾಭ ಇವತ್ತು ತಮಿಳುನಾಡಿಗೆ ಸಿಗುತ್ತಿದೆ. ಕಳೆದ ಮೂರು ವರ್ಷಗಳಿಂದ ನಿಸರ್ಗದ ಆಶೀರ್ವಾದದಿಂದ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆಯಾಯಿತು. ನೀರು ಹೋಯಿತು. ಆದರೆ ಸಮಸ್ಯೆ ಬಗ್ಗೆ ಚಿಂತನೆ ಆಗಿಲ್ಲ. ಕಳೆದ ಮೂರು ವರ್ಷಗಳಲ್ಲಿ ಹಲವಾರು ಬಾರಿ ಈ ಸಮಸ್ಯೆ ಈ ಸದನದಲ್ಲಿ ಚರ್ಚೆಯಾಗಿದೆ. ಈ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕುವುದಾಗಲೀ,ತಮಿಳುನಾಡಿನ ಜೊತೆ ಮಾತನಾಡುವುದಕ್ಕೆ ಮಾಡಿದ ಪ್ರಯತ್ನ ಏನು? ಈ ಸಮಸ್ಯೆಯನ್ನು ಮಾತುಕತೆಯಿಂದ ಬಗೆಹರಿಸುವುದಕ್ಕೆ ಸರ್ಕಾರದಿಂದ ಆದ ಪ್ರಯತ್ನ ಏನು? ಅದು ನಮಗೆ ಗೊತ್ತಾಗುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಯಾವ ಪ್ರಯತ್ನವೂ ಆಗಿಲ್ಲ. ಪ್ರಯತ್ನ ಆಗಿದ್ದರೆ ಮುಖ್ಯಮಂತ್ರಿಗಳಾಗಲೀ ಅಥವಾ ಈ ಇಲಾಖೆಯ ಹೊಣೆಯನ್ನು ಹೊತ್ತ

ಉಪಮುಖ್ಯಮಂತ್ರಿಗಳಾಗಲೀ ಸ್ಪಷ್ಟವಾದ ಸ್ಪಷ್ಟನೆಯನ್ನು ಕೊಡಬೇಕಾಗುತ್ತದೆ. ಕಳೆದ 3 ವರ್ಷಗಳಲ್ಲಿ ರೈತರ ಹಾಗೂ ಈ ನಾಡಿನ ಹಿತದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಯಾವ ಪ್ರಯತ್ನ ಮಾಡಿದ್ದಾರೆಂದು ಗೊತ್ತಾಗಬೇಕಾಗುತ್ತದೆ. ತಮಿಳುನಾಡಿನವರು ಒಂದು ಕಡೆ ಟ್ರಿಬ್ಯುನಲ್‌ನಲ್ಲಿ ವಿಚಾರಣೆ ಆಗಬೇಕೆಂದು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಇರಿಗೇಷನ್ ಪೊಟೆನ್ಸಿಯಲ್ ಹೆಚ್ಚು ಮಾಡುತ್ತಲೇ ಇದ್ದಾರೆ. ನೀರಾವರಿ ಏರಿಯಾ ಹೆಚ್ಚಾಗುತ್ತಲೇ ಇದೆ. ಅವರ ಎರಡನೇ ಬೆಳೆಯಾದ ಕುರುವೈ ಬೆಳೆಗೆ ನೀರು ಇಲ್ಲ ಎಂದು ಗಲಾಟೆ ಮಾಡುತ್ತಾರೆ. ಕೇಂದ್ರದ ಮೇಲೆ ಒತ್ತಡ ತರುತ್ತಾರೆ. ಕೇಂದ್ರ ಸರ್ಕಾರ ಅವರ ಒತ್ತಾಯಕ್ಕೆ ಮಣಿಯುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಹೆಚ್ಚು ನೀರಾವರಿ ಮಾಡುವ ಬಗ್ಗೆಯಾಗಲೀ, ಹೆಚ್ಚಿನ ಭೂಮಿಯನ್ನು ನೀರಾವರಿಗೆ ತರುವುದರಲ್ಲಾಗಲೀ ಯಾವ ಪ್ರಯತ್ನವೂ ಸರ್ಕಾರದಿಂದ ಆಗಿಲ್ಲ. ಯಾವ ಪ್ರಯತ್ನವಾಗಿದೆ ಎಂದು ಸರ್ಕಾರ ಹೇಳಬೇಕು. ಅವರ ಕುರುವೈ ಬೆಳೆಗೆ ನೀರು ಸಿಗುತ್ತದೆ. ಆ ಬೆಳೆಗೆ ನೀರು ಕೇಳುವುದಕ್ಕೆ ತಮಿಳುನಾಡಿನ ಸರ್ಕಾರಕ್ಕೆ ಅಧಿಕಾರವೇ ಇಲ್ಲ. ಆದರೆ ಅವರು ವಿಷಯವನ್ನು ಪೊಲಿಟಿಸೈಸ್ ಮಾಡಿ, ರಾಜಕೀಯವಾಗಿ ಕೇಂದ್ರ ಸರ್ಕಾರದಲ್ಲಿ ಒತ್ತಡ ತಂದು ತಮ್ಮ ಗುರಿ ಸಾಧನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ನಮ್ಮ ರೈತರ ಒಂದು ಬೆಳೆಗೆ ಬೇಕಾಗುವ ನೀರೂ ಸಿಗುತ್ತಾ ಇಲ್ಲ. ಹೀಗಾಗಿ ಸರ್ಕಾರದಿಂದ ಸ್ಪಷ್ಟ ಆಗಬೇಕಾಗುತ್ತದೆ. ತಾವು 3 ವರ್ಷಗಳಲ್ಲಿ ಮಾಡಿದ್ದು ಏನು? ಕೇವಲ ಪೊಳ್ಳು ಘೋಷಣೆ, ಪೊಳ್ಳು ಮಾತುಗಳು. ಇವತ್ತು ನಮ್ಮ ಈ ಸಮಸ್ಯೆಗಳು ಬಗೆಹರಿಯುವುದಕ್ಕೆ ಸಾಕಷ್ಟು ಅವಕಾಶ ಇದೆ. ನಿಮ್ಮದೇ ಸರ್ಕಾರ ಕೇಂದ್ರದಲ್ಲಿ ಇದೆ. ಇಷ್ಟು ದಿವಸ ನಿಮ್ಮ ಸರ್ಕಾರಕ್ಕೆ ಜಯಲಲಿತಾ ಅವರು ಬೆಂಬಲ ಕೊಡುತ್ತಾ ಬಂದಿದ್ದು, ಕಳೆದ 6 ತಿಂಗಳಿಂದ ಬೆಂಬಲ ವಾಪಸ್ಸು ತೆಗೆದುಕೊಂಡಿರಬಹುದು. ಕೇಂದ್ರ ಸರ್ಕಾರದ ಸಹಾಯದಿಂದ ಈ ಸಮಸ್ಯೆಯನ್ನು ಮಾತುಕತೆ ಮೂಲಕ ಬಗೆಹರಿಸುವುದಕ್ಕೆ ಸಾಕಷ್ಟು ಅವಕಾಶ ಸರ್ಕಾರಕ್ಕೆ ಇತ್ತು. ಆದರೆ ಈ ಸರ್ಕಾರ ಯಾವ ಪ್ರಯತ್ನವನ್ನೂ ಮಾಡಿಲ್ಲ. ಆದ್ದರಿಂದ ಈ ಎಲ್ಲಾ ದೃಷ್ಟಿಯಿಂದ ಈ ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ವಿಫಲವಾಗಿದೆ. ಅವತ್ತು 17ನೇ ತಾರೀಖು ಜಯಲಲಿತಾ ಅವರು ಸಡನ್ನಾಗಿ ಒಂದು ಚಿತ್ರದಲ್ಲಿ ಯಾವ ರೀತಿ ಪಾರ್ಟ್ ಮಾಡುತ್ತಾರೋ ಆ ರೀತಿ ಡ್ರಮಟಿಕ್ ಆಗಿ ಹಂಗರ್ ಸ್ಟ್ರೈಕ್ ಶುರು ಮಾಡಿದರು. ಹಾಗೆ ಅವರು ಹಂಗರ್ ಸ್ಟ್ರೈಕ್ ಶುರು ಮಾಡಿದ ನಂತರ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ತನ್ನ ಎಲ್ಲಾ ಮೆಷಿನರಿಯನ್ನು ಗೇರ್‌ಅಪ್ ಮಾಡುತ್ತಾರೆ. ಅವರು ಉಪಯೋಗಿಸಿದ ತಂತ್ರದ ಬಗ್ಗೆ ವಾಟಾಳ್ ನಾಗರಾಜ್ ಅವರು ಹೇಳುತ್ತಾರೆ. ಆ ಪ್ರಕಾರ ಆ ಒಂದು ಹಂಗರ್ ಸ್ಟ್ರೈಕ್ ಕಂಡೆಮ್ ಮಾಡಿ ಒಂದು ರೆಸಲ್ಯೂಷನ್ ಮಾಡಬೇಕಾಗುತ್ತದೆ. ಆ ಒಂದು ಅಧಿಕಾರ ಅವರಿಗೆ ಇಲ್ಲ. ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ತೆಗೆದುಕೊಂಡಾಗ ಸಂವಿಧಾನ ಬದ್ಧವಾಗಿ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುತ್ತೇನೆಂದು ಪ್ರೋತ್ ತೆಗೆದುಕೊಂಡಿರುತ್ತಾರೆ. ಇವತ್ತು ಆ ಒಂದು ಸ್ಟಂಟ್, ಅಂತಹ ನಾಟಕ ಇವತ್ತು ಮಾಡಿ ಯಾವ ಮಟ್ಟಕ್ಕೆ ಈ ದೇಶವನ್ನು, ರಾಜ್ಯವನ್ನು ತೆಗೆದುಕೊಂಡುಹೋಗಲು ಹೊರಟ್ಟಿದ್ದಾರೆ? ಈ ಬಗ್ಗೆ ನಮ್ಮ ಸರ್ಕಾರದಿಂದ ಏನು ಪ್ರೊಟೆಸ್ಟ್ ಆಗಿದೆ? ಮುಖ್ಯಮಂತ್ರಿಗಳಾಗಲೀ ಉಪಮುಖ್ಯಮಂತ್ರಿಗಳಾಗಲೀ ಒಂದು ಚಕಾರದ ಮಾತನ್ನೂ ಈ ಬಗ್ಗೆ ಹೇಳಿಲ್ಲ. ನಿಮಗೆ ಧೈರ್ಯ ಇದ್ದರೆ ಹೇಳಬೇಕಾಗಿತ್ತು. ಇದು ಸ್ಟಂಟ್ ಇದೆ, ಡ್ರಾಮ ಇದೆ ಎಂದು ಜಯಲಲಿತಾ ಅವರಿಗೆ ಹೇಳಬೇಕಾಗಿತ್ತು; ಕೇಂದ್ರ ಸರ್ಕಾರಕ್ಕೆ ಆ ಬಗ್ಗೆ ಹೇಳಿಲ್ಲ. ಪ್ರತಿಯೊಬ್ಬ ಮುಖ್ಯಮಂತ್ರಿಗಳೂ ಈ ರೀತಿ ಅನ್ನಸತ್ಯಾಗ್ರಹ ಮಾಡುತ್ತಾ ಹೋದರೆ ಜನರು ಏನು ಮಾಡಬೇಕು? ಹಾಗಾಗಿ ಜಯಲಲಿತಾರವರು ಇಲ್‌ಲೀಗಲ್ ಆಗಿ, ಅನ್ ಡೆಮಾಕ್ರಟಿಕ್ ಮತ್ತು

ಅನ್‌ಕಾನ್ಸ್ಟಿಟ್ಯುಷನಲ್ ಆಗಿ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಅದರ ಬಗ್ಗೆ ನಾವು ಒಂದು ರೆಸಲ್ಯೂಷನ್ ಮಾಡಬೇಕಾಗುತ್ತದೆ. ಸಭಾನಾಯಕರು ಆ ರೆಸಲ್ಯೂಷನ್ ಮೂವ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದು ಒಂದು ಕಡೆ ಆಯಿತು. ಅದರಿಂದ ಏನಾಯಿತು ಎಂದರೆ ಕೇಂದ್ರಸರ್ಕಾರದ ಪ್ರಧಾನಮಂತ್ರಿಗಳು, ವಾಟರ್ ರಿಸೋರ್ಸ್ ಮಿನಿಸ್ಟರ್ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಶುರು ಮಾಡುತ್ತಾರೆ. ಅಲ್ಲಿಯವರೆಗೆ ಅದರ ಬಗ್ಗೆ ಚಿಂತನೆಯಿಲ್ಲ; ಯಾವುದೇ ವಿಚಾರ ಇಲ್ಲ. ಶ್ರೀ ವಿ.ಸಿ. ಶುಕ್ಲರವರು ಮಧ್ಯರಾತ್ರಿಯಲ್ಲಿ ಸ್ಪೆಷಲ್ ಪ್ಲೇನ್‌ನಲ್ಲಿ ಬರುತ್ತಾರೆ. ಜಯಲಲಿತಾರವರ ಹಂಗರ್‌ಸ್ಟ್ರೈಕ್ ಶುರುವಾದ ನಂತರ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆವಿ.ಸಿ.ಶುಕ್ಲಾರವರು ಪ್ರಧಾನಮಂತ್ರಿಗಳ ಆದೇಶದ ಮೇಲೆ ಮಧ್ಯರಾತ್ರಿಯಲ್ಲಿ ಬರುತ್ತಾರೆ. ಮಧ್ಯರಾತ್ರಿಯಲ್ಲಿ ಬಂದು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತಾರೆ. ಅದರ ನಂತರ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗುತ್ತದೆ, ಅದರ ನಂತರ ಅವರು ತಮಿಳುನಾಡಿಗೆ ಹೋಗುತ್ತಾರೆ. ಅದೇನು ಚರ್ಚೆಯಾಯಿತೋ ನಮಗೆ ಗೊತ್ತಿಲ್ಲ. ಬಹಳ ನೊಂದ ಮನಸ್ಸಿನಿಂದ ನಾನು ಹೇಳುತ್ತಿದ್ದೇನೆ. ಕಾವೇರಿ ವಿಷಯ ಪಕ್ಷಾತೀತವಾದದ್ದು. ಕಾವೇರಿ ನದಿ ನೀರಿನ ಹಂಚಿಕೆಯ ವಿಚಾರ ಕಾಂಗ್ರೆಸ್ ಪಾರ್ಟಿಯ ಮನಾಪಲಿಯಲ್ಲ. ಜನತಾದಳದ ಮನಾಪಲಿಯಲ್ಲ. ಇವತ್ತು ಮುಖ್ಯ ಮಂತ್ರಿಗಳಾಗಲೀ, ಉಪ ಮುಖ್ಯಮಂತ್ರಿಗಳಾಗಲೀ ವಿರೋಧಪಕ್ಷಗಳನ್ನು ಈ ಸಮಸ್ಯೆಯ ಬಗ್ಗೆ ವಿಶ್ವಾಸಕ್ಕೆ ತೆಗೆದುಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇವತ್ತಿನತನಕ ತಾವು ಒಂದು ದಿನವೂ ಬಂದು ನಮ್ಮ ಹತ್ತಿರ ಮಾತನಾಡಿಲ್ಲ. ನಾವು ರಾಜ್ಯಪಾಲರ ಹತ್ತಿರ ಹೋದ ನಂತರ ಅಧಿವೇಶನ ಕರೆದಿದ್ದೀರಿ. ಅದರ ನಂತರ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ ಅದನ್ನು ನಾವು ಬಾಯ್‌ಕಾಟ್ ಮಾಡಿದ್ದೇವೆ. ಆದರೆ ರಾಜ್ಯದ ಹಿತದೃಷ್ಟಿಯಿಂದ ನಾವು ಒಂದಾಗಿ ಹೋಗಬೇಕಾಗುತ್ತದೆಂದು ಹೇಳಿ ನಾವು ಸಭೆಗೆ ಹೋಗಿದ್ದೇವೆ. ಆದರೆ ಯಾವ ಮುಖ್ಯಮಂತ್ರಿಗಳಾಗಲೀ ಈ ತರಹ ಕೆಲಸ ಮಾಡಿಲ್ಲ. ಯಾವಾಗಲೂ ವಿರೋಧಪಕ್ಷಗಳವರನ್ನು ಕರೆಸಿ ಅದರ ಬಗ್ಗೆ ಸಲಹೆ ತೆಗೆದುಕೊಂಡು ಅದಕ್ಕೆ ಒಂದು ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಶುಕ್ಲಾರವರು ಬರುತ್ತಾರೆ ಅವರು ಏನು ಮಾಡುತ್ತಾರೆ? ಅವರು ತಮಿಳುನಾಡಿಗೆ ಹೋಗಿ ಏನು ಮಾಡುತ್ತಾರೆಂದರೆ, ಜಯಲಲಿತಾರವರಿಗೆ ಒಂದು ಗ್ಲಾಸ್ ಜ್ಯೂಸ್ ಕೊಟ್ಟು ಹಂಗರ್‌ಸ್ಟ್ರೈಕ್ ಮುಕ್ತಾಯ ಮಾಡಿಸುತ್ತಾರೆ. ಅಲ್ಲಿ ಏನು ಭರವಸೆ ಯನ್ನು ಕೊಡುತ್ತಾರೆಂದರೆ, ಕಾವೇರಿ ಬಗ್ಗೆ ಟ್ರಿಬ್ಯುನಲ್ ಆವಾರ್ಡ್ ಏನಿದೆ ಅದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಮಾನಿಟರಿಂಗ್ ಕಮಿಟಿ ಅಪಾಯಿಂಟ್‌ಮೆಂಟ್ ಮಾಡುತ್ತಾರೆ. ಅದರ ಬಗ್ಗೆ ಈ ಸರ್ಕಾರದಿಂದ ಯಾವುದೇ ಪ್ರೊಟೆಸ್ಟ್ ಇಲ್ಲ. ಇದು ಆದಮೇಲೆ ಶ್ರೀಮಾನ್ ಶುಕ್ಲಾರವರ ಮತ್ತೊಂದು ಸ್ಟೇಟ್‌ಮೆಂಟ್ ಬರುತ್ತದೆ. ರಾಜ್ಯಸರ್ಕಾರ ಕೊಟ್ಟ ಪತ್ರ ನನ್ನ ಕೈಯಲ್ಲಿದೆ ಮಾನಿಟರಿಂಗ್ ಕಮಿಟಿಗೆ ರಾಜ್ಯಸರ್ಕಾರ ಒಪ್ಪಿಕೊಂಡಿದೆಯೆಂದೂ, ಲಿಖಿತಪತ್ರ ನನ್ನ ಕಡೆ ಇದೆಯೆಂದು ಶುಕ್ಲಾರವರು ಹೇಳುತ್ತಾರೆ. ಅದರ ನಂತರ ಮಾನ್ಯ ನಾಗೇಗೌಡರು ಮತ್ತಿತರರು ಪ್ರೊಟೆಸ್ಟ್ ಮಾಡುತ್ತಾರೆ. ಶುಕ್ಲಾರವರು ಏನು ವಿಚಾರ ಹೇಳುತ್ತಾರೆ ಅದನ್ನು ನಾವು ಒಪ್ಪಿಕೊಂಡಿಲ್ಲ, ಕ್ಯಾಬಿನೆಟ್ ಸಬ್ ಕಮಿಟಿಗೆ ನಾವು ಒಪ್ಪಿಲ್ಲ. ಶುಕ್ಲಾರವರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ಅವರು ರಾಜ್ಯಸರ್ಕಾರದ ಒಂದು ಪತ್ರ ನನ್ನ ಕಡೆಯಿದೆ, ಮಾನಿಟರಿಂಗ್ ಕಮಿಟಿಗೆ ಒಪ್ಪಿಕೊಂಡಿರುವ ಪತ್ರ ನನ್ನ ಕಡೆ ಇದೆಯೆಂದು ಹೇಳುತ್ತಾರೆ. ಆ ಮಾತನ್ನು ಜವಾಬ್ದಾರಿಯಿಂದ ಹೇಳಬೇಕಾದರೆ, ಮುಖ್ಯಮಂತ್ರಿಗಳು ಅಂತಹ ಪತ್ರ ನಾವು ಕೊಟ್ಟಿಲ್ಲವೆಂದು ಹೇಳಿದ್ದಾರೆ. ನಾನು ಅದರ ಬೊನಫೈಡ್‌ನ್ನು ಚಾಲೆಂಜ್ ಮಾಡುವುದಕ್ಕೆ

ಹೋಗುತ್ತಿಲ್ಲ. ಆದರೆ ಸರ್ಕಾರದ ಬೊನಫೈಡನ್ನು ಚಾಲೆಂಜ್ ಮಾಡುವುದಾದರೆ ಇದರಲ್ಲಿ ಸರ್ಕಾರದ ಕೀನ್ ಇಂಟರೆಸ್ಟ್ ಬರಬೇಕಾದರೆ ಈಗ ಸ್ಪಷ್ಟವಾಗಿ ಹೇಳಬೇಕು. ಒಂದು ವೇಳೆ ಪತ್ರ ಕೊಟ್ಟರು ಎಂದರೆ ಯಾರು ಕೊಟ್ಟರು? ಮುಖ್ಯ ಮಂತ್ರಿಗಳು ಪತ್ರ ಕೊಟ್ಟಿದ್ದಾರೆಯೇ? ಉಪಮುಖ್ಯಮಂತ್ರಿಗಳು ಪತ್ರ ಕೊಟ್ಟಿದ್ದಾರೆಯೇ? ರಾಜ್ಯ ನೀರಾವರಿ ಮಂತ್ರಿಗಳು ಪತ್ರ ಕೊಟ್ಟದ್ದಾರೆಯೇ? ಇರಿಗೇಷನ್ ಸೆಕ್ರೆಟರಿಯವರು ಪತ್ರ ಕೊಟ್ಟಿದ್ದಾರೆಯೇ? ಅದು ಗೊತ್ತಾಗಬೇಕಾಗುತ್ತದೆ. ಒಂದು ವೇಳೆ ಮುಖ್ಯಮಂತ್ರಿಗಳು ಆದೇಶ ಕೊಟ್ಟಿದ್ದರೋ ಏನೋ ಗೊತ್ತಿಲ್ಲ. ಶುಕ್ಲಾರವರು ಆದೇಶವನ್ನು ಕೊಡಬಹುದು, ಜಯಲಲಿತಾರವರ ಸಪೋರ್ಟ್ ಬೇಕಾಗಿದೆ, ಆ ಸಮಯದಲ್ಲಿ ಲೋಕಸಭೆಯಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗುತ್ತದೆ. ಮಾನ್ಯ ಪ್ರಧಾನಮಂತ್ರಿಗಳಿಗೆ ತನ್ನದೇ ಆದ ಬಹುಮತ ಇರಲಿಲ್ಲ. ಆ ಸಂದರ್ಭದಲ್ಲಿ ವಿರೋಧ ಪಕ್ಷಗಳನ್ನು ಒಡೆಯುವ ಎಲ್ಲಾ ಪ್ರಯತ್ನಗಳು ಆದುವು. ಆ ಸಮಯದಲ್ಲಿ ಎಐಎಡಿಎಂಕೆಯ 11ಎಂಪಿಗಳ ಸಪೋರ್ಟ್ ಬೇಕು. ಜಯಲಲಿತಾರವರನ್ನು ಪ್ಲೀಸ್ ಮಾಡಲಿಕ್ಕೆ ಅವೊತ್ತು ಸರ್ಕಾರದಿಂದ ಪತ್ರ ತೆಗೆದುಕೊಳ್ಳಲಿಕ್ಕೆ ಸಾಧ್ಯ. ಅವತ್ತಿನ ದಿವಸ ಮಾನ್ಯ ಉಪಮುಖ್ಯಮಂತ್ರಿಯವರಚಕಾರ ಶಬ್ಧವಿಲ್ಲ. ಒಂದು ಮಾತನ್ನು ಹೇಳಿದರು. ಮುಖ್ಯಮಂತ್ರಿಗಳು ಹೇಳಿದ್ದಾರೆ ನಾನು ಇನ್ನೇನು ಹೇಳಬೇಕೆಂದು. ಇಲಾಖೆಯ ಜವಾಬ್ದಾರಿ ನಿಮ್ಮ ಮೇಲಿದೆ. ನೀವು ಹೇಳಬೇಕಾಗುತ್ತದೆ ಆ ತರಹ ಪತ್ರ ನಾನು ಕೊಟ್ಟಿಲ್ಲವೆಂದು. ಇರಿಗೇಷನ್ ಸೆಕ್ರೆಟರಿಯವರು ಹೇಳಬೇಕಾಗುತ್ತದೆ ನಾನು ಪತ್ರ ಕೊಟ್ಟಿಲ್ಲವೆಂದು. ಇವರಲ್ಲಿ ಯಾವ ಟೋನ್ ಇಲ್ಲ. ಹಾಗಾದರೆ ಈ ಸರ್ಕಾರದಲ್ಲಿ ಒಂದು ವಾತಾವರಣ ನಿರ್ಮಾಣವಾಗಿದೆ. ಈ ರಾಜ್ಯ ಸರ್ಕಾರ ಕಾವೇರಿ ಜಲಾನಯನ ಪ್ರದೇಶದ ಜನರ ರೈತರ ವಿರುದ್ಧ ಕೆಲಸ ಮಾಡುತ್ತಿದೆ ಎನ್ನುವ ಭಾವನೆ ಜನರ ಮನಸ್ಸಿನಲ್ಲಿ ಬರುತ್ತಿದೆ. ಮಾನ್ಯ ಅಧ್ಯಕ್ಷರೇ, ಸುಪ್ರೀಂಕೋರ್ಟಿನಲ್ಲಿ ಮೊನ್ನೆ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ವಿಚಾರಣೆಗೆ ಬಂತು. ಯಾವ ರಿಮಾರ್ಕು ಸುಪ್ರೀಂ ಕೋರ್ಟಿನ ಲಾರ್ಡ್‌ಶಿಪ್ ಮಾಡಿದ್ದಾರೆ, ಆ ರಿಮಾರ್ಕ್ಸ್ ನೋಡಿದರೆ ನಾಚಿಕೆಯಿಂದ ನಮ್ಮ ತಲೆಯನ್ನು ಬಗ್ಗಿಸಬೇಕಾಗುತ್ತದೆ. We have to bow our heads in shame ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ನಡೆದಾಗ ತಮಿಳುನಾಡಿನ ಅಡ್ವೊಕೇಟ್ ಅಲ್ಲೇ ಇದ್ದಾರೆ. ಕರ್ನಾಟಕದಿಂದ ಯಾರೂ ಇಲ್ಲ. ಅವರು ನಮಗೆ ನೋಟೀಸು ಕೊಟ್ಟಿಲ್ಲ ಎಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ದೆಹಲಿಯಲ್ಲಿ ಕರ್ನಾಟಕ ಭವನದಲ್ಲಿ ಒಂದು ಸ್ಪೆಷಲ್ ಸೆಲ್‌ನ್ನು ಕಾವೇರಿ ಬಗ್ಗೆ ತೆಗೆದಿರಿ. ಆ ಸೆಲ್ ಏನು ಮಾಡುತ್ತಾ ಇದೆ? ಅಲ್ಲಿನ ನ್ಯಾಯವಾದಿಗಳು ಏನು ಮಾಡುತ್ತಿದ್ದಾರೆ? ಅಲ್ಲಿನ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಬೇಜವಾಬ್ದಾರಿ ಸರ್ಕಾರ, ಬೇಜವಾಬ್ದಾರಿ ವರ್ತನೆ ಮಾಡಿ, ಇವತ್ತು ತಾವು ನಮಗೆ ಗೊತ್ತೇ ಇಲ್ಲ ಎಂದರೆ ನಾವು ಯಾರ ಮಾತನ್ನು ನಂಬಬೇಕು? ನಾಡಿನ ಜನ ಈ ಮಾತನ್ನು ನಂಬಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಎಲ್ಲಾ ದೃಷ್ಟಿಯಿಂದ ತಾವು ಈ ವಿಚಾರದಲ್ಲಿ ದ್ರೋಹ ಮಾಡುತ್ತಾ ಹೋದರೇ ವಿನಃ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ತಮ್ಮ ಕಡೆಯಿಂದ ಯಾವ ಒಂದು ಪ್ರಾಮಾಣಿಕವಾದ ಪ್ರಯತ್ನ ಆಗಿದ್ದು ಕಂಡುಬರುವುದಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ಶುಕ್ಲ ಅವರ ಪತ್ರದ ಬಗ್ಗೆ ಒಂದು ವಿಚಾರ ಹೇಳಿದೆ. ಇವತ್ತು ಇದರ ಬಗ್ಗೆ ಒಂದು ನಿರ್ಣಯ ಆಗಬೇಕಾಗುತ್ತದೆ. ಶುಕ್ಲ ಹೇಳಿದ ಮಾತು ಸತ್ಯವೋ ಅಥವಾ ನಮ್ಮ ಮುಖ್ಯ ಮಂತ್ರಿಗಳು ಹೇಳಿದ ಮಾತು ಸತ್ಯವೋ ಎಂಬುದು ನಿರ್ಣಯ ಆಗಬೇಕು. ಸರ್ಕಾರದಿಂದ ಈ ಬಗ್ಗೆ ಸ್ಪಷ್ಟನೆ ಆಗಬೇಕಾಗಿದೆ. ಒಂದು ವೇಳೆ ಶುಕ್ಲ ಹೇಳಿದ್ದು ಸುಳ್ಳು ಇದ್ದರೆ ಅವರ ವಿರುದ್ಧ ಈ ಶಾಸನ ಸಭೆಯಲ್ಲಿ ಒಂದು ರೆಸಲ್ಯೂಷನ್ ಮಾಡಬೇಕಾಗುತ್ತದೆ. ಇಂತಹ

ಒಂದು ಇಂಪಾರ್ಟೆಂಟ್ ಇರಿಗೇಷನ್ ಪೋರ್ಟ್ ಫೋಲಿಯೋವನ್ನು ಅವರು ತಮ್ಮಲ್ಲಿ ಇಟ್ಟುಕೊಂಡು ಇವತ್ತು ನಮ್ಮ ನಾಡಿನ ಹಿತದ ವಿರುದ್ಧ, ನಮ್ಮ ರೈತರ ಹಿತದ ವಿರುದ್ಧ ಶುಕ್ಲರವರು ಕೆಲಸ ಮಾಡಿದ್ದರ ಅರ್ಥ ಏನೆಂದು ನೋಡಿದರೆ, ಜಗಳ ಹಚ್ಚುವುದು ಅಷ್ಟೇ ಅವರ ಇಚ್ಛೆಯಾಗಿದೆಯೇ ವಿನಃ ಈ ಸಮಸ್ಯೆಯನ್ನು ಬಗೆಹರಿಸುವ ಇಚ್ಛೆ ಶುಕ್ಲರವರಿಗೆ ಇಲ್ಲ ಎಂದು ಸ್ಪಷ್ಟವಾಗಬಹುದು. ಹಾಗಾಗಿ ಇವತ್ತು ನಾವು, ಈ ಸದನ ರೆಸಲ್ಯೂಷನ್ ಮಾಡಬೇಕಾಗುತ್ತದೆ. ತಕ್ಷಣ ನಾವು ಪ್ರಧಾನಿಗೆ ಹೇಳಬೇಕಾಗುತ್ತದೆ. ಶುಕ್ಲ ಅವರ ಇರಿಗೇಷನ್ ಪೋರ್ಟ್‌ಫೋಲಿಯೋ ನೀವು ಛೇಂಜ್ ಮಾಡಬೇಕಾಗುತ್ತದೆ. ಎಲ್ಲಿಯ ತನಕ ಈ ವಾಟರ್ ರಿಸೋರ್ಸ್‌ಸ್ ಪೋರ್ಟ್‌ಫೋಲಿಯೋದಲ್ಲಿ ಶುಕ್ಲ ಅವರು ಇರುತ್ತಾರೋ ಆ ತನಕ ಕರ್ನಾಟಕಕ್ಕೆ ನ್ಯಾಯ ಸಿಗುವುದಿಲ್ಲ. ಹಾಗಾಗಿ ಶುಕ್ಲ ಅವರನ್ನು ಡಿಸ್‌ಮಿಸ್ ಮಾಡಬೇಕು. ಅವರು ಕ್ಯಾಬಿನೆಟ್ಟಿನಲ್ಲಿ ಇರಬೇಕು ಎಂದು ಇದ್ದರೂ ಸಹ ಅವರಿಗೆ ಯಾವ ಪೋರ್ಟ್‌ಫೋಲಿಯೋ ಕೊಡಬೇಕು ಅಥವಾ ಬಿಡಬೇಕು ಎನ್ನುವುದು ಅಧಿಕಾರ ಇದ್ದರೂ ಸಹ ಇವತ್ತು ಶುಕ್ಲರವರು When he has betrayed the interest of Karnataka, when he is against the interests of Karnataka colluding with Tamil Nadu, ಈ ಮನೆಯಲ್ಲಿ ರೆಸಲ್ಯೂಷನ್ ಮಾಡಬೇಕಾಗುತ್ತದೆ. This House has to resolve condemning this and demanding changing of portfolio of Mr. Shukla. ನಮ್ಮ ಇಂಟರೆಸ್ಟಿನಲ್ಲಿ ಹೇಳುವುದಾದರೆ, ಸರ್ಕಾರ ಇದರ ಬಗ್ಗೆ ತನ್ನ ಸ್ಪಷ್ಟನೆ ಕೊಡಬೇಕಾಗುತ್ತದೆ. ಸರ್ಕಾರ ಈ ತರದ ಒಂದು ರೆಸಲ್ಯೂಷನ್ ತೆಗೆದುಕೊಂಡು ಬರಬೇಕಾಗುತ್ತದೆ. ಕಾವೇರಿ ವಿಚಾರದಲ್ಲಿ ಚಿಂತನೆ ಇದ್ದರೆ ಈ ತರಹ ಕ್ರಮ ತಾವು ತೆಗೆದುಕೊಂಡು ಬರಬೇಕಾಗುತ್ತದೆ. ಈಗಾಗಲೇ ಹೇಳಿದಹಾಗೆ ಕಾಂಗ್ರೆಸ್ ಪಕ್ಷದಲ್ಲಿ ಕಚ್ಚಾಟ ಜಗಳ ನಡೆಯುತ್ತಿದೆ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಬಹಳ ಡೀಟೇಲ್ ಆಗಿ ಹೋಗುವುದಿಲ್ಲ. ಅವರ ಈ ಜಗಳ ಇಂಟರ್‌ನಲ್ ಅಫೇರ್ ಆಗಿದ್ದರೂ, ಅವರ ಈ ಜಗಳದಿಂದ ಎಂಟೈರ್ ಸರ್ಕಾರ ನಿಷ್ಕ್ರಿಯವಾಗಿದೆ. ಇಡೀ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆ. ಅದಕ್ಕೆ ಯಾರೂ ಜವಾಬ್ದಾರರೂ ಇಲ್ಲ. ಮಾನ್ಯ ಕೆ.ಹೆಚ್. ರಂಗನಾಥ್‌ರವರು ಹಿರಿಯರು, ನಾನು ಹೇಳುವುದನ್ನು ನೋಡಿ ನಗುತ್ತಾ ಇದ್ದಾರೆ. ಅವರು ನಮ್ಮ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಲಿ, ನಾನು ಒಪ್ಪಿಕೊಳ್ಳುತ್ತೇನೆ.

ಡಾ.ಜೀವರಾಜ ಆಳ್ವ :- ಮಾನ್ಯ ರಂಗನಾಥರವರು ಸರ್ಕಾರ ಇದೆ, ನಿಷ್ಕ್ರಿಯತೆ ಇಲ್ಲ ಎಂದು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ :- ನಾವು ಏನಾದರೂ ಹೇಳಬೇಕಲ್ಲ ಎಂದು ಹೇಳುತ್ತಿದ್ದಾರೆ.

ಎಸ್.ಹೆಚ್. ಕೌಜಲಗಿ :-ರಂಗನಾಥರವರಿಗೆ ಇವತ್ತಿನ ಸಿ.ಎಲ್.ಪಿ. ಮೀಟಿಂಗ್ ಏನು ಆಯಿತು ಅದು ಅವರ ಕಣ್ಣ ಮುಂದೆ ಬರುತ್ತಿದೆ, ಆದಕ್ಕಾಗಿ ಅವರು ನಗುತ್ತಿದ್ದಾರೆ.

ಡಾ. ಜೀವರಾಜ ಆಳ್ವ :- ಸರ್ಕಾರ, ನಾವು ಎಫೆಕ್ಟೀವ್ ಆಗಿ ಕೆಲ್ಸಸ ಮಾಡಿದ್ದೇವೆಂದು ಹಿರಿಯ ಸದಸ್ಯರು ಹೇಳಿದರೆ ನಾವು ಕಿರಿಯರು ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ.ಹೆಚ್.ರಂಗನಾಥ :- ನಾನು ಬಹಳ ಕಾತುರದಿಂದ ಕಾವೇರಿ ವಿಚಾರ ಕೇಳುತ್ತಿದ್ದೇನೆ. ಏಕೆಂದರೆ, ಕಾವೇರಿ ವಿಷಯ ನಮಗೆಲ್ಲ ಅತಿ ಆಸಕ್ತಿ ಇರತಕ್ಕಂತಹ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು. ಏನಾದರೂ ಒಂದು, ಎರಡು, ಮೂರು ಎಂದು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೇನೋ, ನಾವು ನೋಟ್ ಮಾಡಿಕೊಳ್ಳೋಣವೆಂದು ಯೋಚನೆ ಮಾಡುತ್ತಿದ್ದೆ. ಆದರೆ ಅವರು ಸುಮ್ಮನೆ ಪತ್ರಿಕೆಯಲ್ಲಿ ಓದಿ ಶುಕ್ಲ ಅವರುಬಂದರು, ಹೋದರು ಎಂಬು ಹೇಳಿದರು.

ಜಯಲಲಿತ ಅವರು ಉಪವಾಸ ಮಾಡಿದರೆ ಅವರು ಏನು ಮಾಡಬೇಕು ಎಂದು ಹೇಳುವುದಕ್ಕೆ ನಮಗೆ ಏನಾದರೂ ಅಧಿಕಾರ ಇದೆಯೇ ? ಅಂಥಾದ್ದೆಲ್ಲ ನಡೆದಿದೆ. ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗಿದೆ. ಏಕೆಂದರೆ, ತಾವು ದೊಡ್ಡ ಒಂದು ಪ್ರಶ್ನೋತ್ತರ ವೇಳೆಯನ್ನು ಹಿಂದಕ್ಕೆ ಹಾಕಿ ಇದನ್ನು ನಿಲುವಳಿ ಸೂಚನೆ ಮುಖಾಂತರ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಹೆಚ್ಚು ವ್ಯಾಪಕವಾಗಿ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಾಗಿದೆ. ಅದಕ್ಕಾಗಿ ತಾವು 68ನೇ ನಿಯಮದಲ್ಲಿರುವುದನ್ನು ನಿಲುವಳಿ ಸೂಚನೆಯಾಗಿ ಪರಿವರ್ತನೆ ಮಾಡಿದ್ದೀರಿ. ಹೀಗಾಗಿ ನಾನು ವಿಚಾರ ಮಾಡಿದ್ದೆ. ಏನೆಂದರೆ, ಹೆಚ್ಚು ಬೆಳಕನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಚೆಲ್ಲುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಆದರೆ ಅವರು ನಿಷ್ಕ್ರಿಯವಾಗಿದೆ ಎಂದು ಹೇಳಿ, ಸರ್ಕಾರದ ಬಗ್ಗೆ ತತಕ್ಷಣ ಅಲ್ಲಿಗೆ ಬಂದಿದ್ದರಿಂದ ನನಗೇನೋ ಇದರಲ್ಲಿ ಹೂರಣ ಇದ್ದಹಾಗೆ ಕಾಣಿಸಲಿಲ್ಲ. ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿರುವುದರೊಳಗೆ ಏನೂ ಇದ್ದಹಾಗೆ ಕಾಣಲಿಲ್ಲ ಎಂದು ಅಂದುಕೊಂಡು ನಾನು ಸ್ವಲ್ಪ ನಕ್ಕೆ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ :- ಈಗ ಮಾನ್ಯ ಹಿರಿಯ ಸಚಿವರಾದ ರಂಗನಾಥ ಅವರು ನೇರವಾಗಿ ಪ್ರಶ್ನೆ ಮಾಡಿ ಈ ಮಾತನ್ನು ಹೃದಯದಿಂದ ಹೇಳುತ್ತಿದ್ದೀರೋ ಎಂದು ಕೇಳಿದರು. ಹೃದಯದಿಂದ ಹೇಳುತ್ತಿದ್ದಾರಾ ಅಥವಾ ಬಿಟ್ಟಿದ್ದಾರಾ ಎಂದು ಪರಿಶೀಲನೆ ಮಾಡಿ ಚಿಂತನೆ ಮಾಡುವುದಕ್ಕೆ ಅವರೂ ಕೂಡ ಗೊಂದಲದಲ್ಲಿದ್ದಾರೆ. ಅದೇನೆಂದರೆ, ಒಂದು ಕಡೆ ಕಾವೇರಿ, ಇನ್ನೊಂದು ಕಡೆ ಸರ್ಕಾರ, ಮತ್ತೊಂದು ಕಡೆ ಮಂತ್ರಿಮಂಡಲ, ಬೆಳಿಗ್ಗೆ ನಡೆದ ಸಿ.ಎಲ್.ಪಿ. ಸಭೆ ಇವೆಲ್ಲ ಗೊಂದಲದಲ್ಲಿದ್ದಾರೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಕಾವೇರಿ ಬಗ್ಗೆ ಏನೇನು ಹೇಳುತ್ತಿದ್ದಾರೆ ಎಂದು ಬರೆದುಕೊಳ್ಳುವಷ್ಟು ಅಥವಾ ತಮ್ಮ ತಲೆಗೆ ತೆಗೆದುಕೊಳ್ಳುವಷ್ಟು ಸಾವಧಾನ ಇಲ್ಲವೆಂದು ಹೇಳುತ್ತಾ, ನಾನು ಬಹಳ ಎಚ್ಚರಿಕೆಯಿಂದ ಇಬ್ಬರನ್ನೂ ಗಮನಿಸುತ್ತಿದ್ದೇನೆ. ಅಂದರೆ ವಿರೋಧ ಪಕ್ಷದ ನಾಯಕರು ಏನೂ ಹೇಳಿಲ್ಲ ಎನ್ನತಕ್ಕಂಥ ಭಾವನೆಯಿಂದ ಅವರು ಹೇಳತಕ್ಕದ್ದನ್ನು ನಾನು ಒಪ್ಪುತ್ತಿಲ್ಲ. ಬಹುಶಃ ಅವರು ಗೊಂದಲದಲ್ಲಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಹಿರಿಯರಾದ ಶ್ರೀ ರಂಗನಾಥ್ ಅವರು ನನಗೆ ಗೊತ್ತು. ಅವರ ಬಗ್ಗೆ ನನಗೆ ಸಾಕಷ್ಟು ಗೌರವ ಇದೆ, ಅಭಿಮಾನ ಇದೆ. ನಾನು ಹೇಳಿದ ಮನಸ್ಸಿನಿಂದ ಒಪ್ಪಿಕೊಳ್ಳುವುದು ನನಗೆ ಗೊತ್ತು. ಆದರೆ ಅವರು ಅಲ್ಲಿ ಕುಳಿತಿದ್ದಾರೆ. ಹೇಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ ಆಗುತ್ತದೆ. ತಮ್ಮ ತೊಂದರೆಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಆದರೆ ಒಂದು ಮಾತನ್ನು ನಾನು ಹೇಳುತ್ತೇನೆ, ತಾವು ವಿಚಾರ ಮಾಡಿ. ತಮಿಳುನಾಡಿದ ಮುಖ್ಯ ಮಂತ್ರಿಗಳು ಹಂಗರ್‌ಸ್ಟ್ರೈಕ್ ಮಾಡಿದರು. ನಾವೇನು ಮಾಡಬೇಕು ಹಾಗಾದರೆ ? ನಿಮ್ಮಲ್ಲಿ ಧೈರ್ಯ ಇದ್ದರೆ, ಈ ಸರ್ಕಾರದಲ್ಲಿ ಗಟ್ಸ್ ಇದ್ದರೆ, ನೀವು ಪ್ರೊಟೆಸ್ಟ್ ಮಾಡಬೇಕಾಗಿತ್ತು, ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿತ್ತು.

ಶ್ರೀ ಕೆ.ಎಚ್.ರಂಗನಾಥ :- ಏನೆಂದು ಪ್ರೊಟೆಸ್ಟ್ ಮಾಡಬೇಕಾಗಿತ್ತು?

ಶ್ರೀ ಆರ್.ವಿ.ದೇಶಪಾಂಡೆ :- ತಮ್ಮದೇ ಪಕ್ಷ 1992ರಲ್ಲಿ ಕೇಂದ್ರ ಸರ್ಕಾರದಲ್ಲಿದ್ದಾಗ ನೂರಾರು ಜನ ಕರ್ನಾಟಕದಲ್ಲಿ ಸತ್ತರು. ಕೋಟಿಗಟ್ಟಲೆ ಪ್ರಾಪರ್ಟಿ ಲೂಟಿಯಾಯಿತು. ಬೆಂಕಿ ಹಚ್ಚಿದರು. ಕೇಂದ್ರಸರ್ಕಾರದಿಂದ ಯಾರು ಕೇಳುವುದಕ್ಕೆ ಬಂದರು? ನಿಮಗೆ ನಾಚಿಕೆಯಾಗಬೇಕಾಗುತ್ತದೆ. ಇಲ್ಲಿ ಬೆಂಕಿ ಆರಿಸಲಿಕ್ಕೆ ಕೇಂದ್ರ ಸರ್ಕಾರದಿಂದ ಯಾರೂ ಬರಲಿಲ್ಲ.

ಡಾ.ಜೀವರಾಜ ಆಳ್ವ :- ರಾಷ್ಟ್ರೀಯ ವಿಚಾರಗಳ ಬಗ್ಗೆ ಬಾಬಾ ಆಮ್ಟೆಯವರು ಏನಾದರೂ ಇಂಥಾದ್ದು ಮಾಡಿದರೆ ಅವರನ್ನು ಅರೆಸ್ಟ್ ಮಾಡಿಸುತ್ತೀರಿ. ಮೇಧಾಪಾಟ್ಕರ್ ಹೋದರೆ ಅವರನ್ನು ಹೀಗೆ ಮಾಡುತ್ತೀರಿ. ಈ ಜಯಲಲಿತಾ ಅವರು ಉಪವಾಸ ಮಾಡಿದರೆ, ನಿಮಗೆ ಅಷ್ಟು ಕೆಚ್ಚು ಇದ್ದಿದ್ದರೆ ಅವರನ್ನು ಅರೆಸ್ಟ್ ಮಾಡಿಸಬೇಕಿತ್ತು. ಅವರ ವಿಧಾನ ಸಭೆಯನ್ನು ಡಿಸಾಲ್ವ್ ಮಾಡಿಸಬೇಕಿತ್ತು. ಏಕೆಂದರೆ ನೀವು ಬಹಳ ಲಘುವಾಗಿ ತೆಗೆದುಕೊಳ್ಳುತ್ತೀರಿ. ಅಂತಹ ಕೆಚ್ಚು ನಿಮಗೆ ಇದ್ದಿದ್ದರೆ ಅರೆಸ್ಟ್ ಮಾಡಿಸಬೇಕಿತ್ತು. ಮೊನ್ನೆ ಆಲ್‌ಪಾರ್ಟಿ ಮೀಟಿಂಗ್‌ನಲ್ಲಿ ನಾವು ಒಂದು ಬೇಸಿಕ್ ಡಿಮ್ಯಾಂಡ್ ಮಾಡಿದೆವು. ಇಡೀ ಮೀಟಿಂಗ್‌ನಲ್ಲಿ ಒಂದು ರೆಸ್ಯುಲೇಶನ್ ಮಾಡೋಣ. ಶುಕ್ಲಾ ಅವರನ್ನು sack ಮಾಡಿಸೋಣವೆಂದರೆ ನೀವು ಅದಕ್ಕೂ ಒಪ್ಪಲಿಲ್ಲ.

ಶ್ರೀ ಕೆ.ಎಚ್.ರಂಗನಾಥ :- ತಾವು ಇಲ್ಲಿ ಕುಳಿತಿದ್ದರೆ ಅರೆಸ್ಟ್ ಮಾಡಿಸಿ ಎಂದು ಹೇಳುತ್ತಿದ್ದೀರಾ?

ಡಾ. ಜೀವಧಾಜ ಆಳ್ವ :- ಖಂಡಿತ ಮಾಡಿಸುತ್ತಿದ್ದೆವು.

ಶ್ರೀ ಆರ್.ವಿ.ದೇಶಪಾಂಡೆ :- ನಾನು ಕ್ಲಿಯರ್ ಕಟ್ ಆಗಿ ಒಂದು ಸಿಂಪಲ್ ಪ್ರಶ್ನೆ ಕೇಳುತ್ತಿದ್ದೇನೆ. 1992ರಲ್ಲಿ ರಾಜ್ಯದಲ್ಲಿ ಇಷ್ಟೊಂದು ಗಲಾಟೆಯಾಗಿ ನೂರಾರು ಜನ ಸತ್ತರು, ಲೂಟಿಯಾಯಿತು. ಆಗ ಕೇಂದ್ರ ಸರ್ಕಾರದವರು ಏನು ಮಾಡಿದರು? ಯಾರೂ ಬರಲಿಲ್ಲ. ವಿ.ಸಿ.ಶುಕ್ಲಾ ಅವರು ಬರಲಿಲ್ಲ. ಮಾನ್ಯ ನರಸಿಂಹರಾಯರು ಅಥವಾ ಬೇರೆ ಕೇಂದ್ರಸರ್ಕಾರದ ಸಚಿವರು ಯಾರೂ ಬಂದಿಲ್ಲ. ಹೀಗಾಗಿ ನಾನು ಹೇಳಿದೆ ಕೇಂದ್ರಸರ್ಕಾರ ಮಲತಾಯಿ ಧೋರಣೆಯನ್ನು ಕರ್ನಾಟಕದ ಬಗ್ಗೆ ಅಡಾಪ್ಟ್ ಮಾಡಿದೆ ಎಂದು. ಏಕೆಂದರೆ ತಮ್ಮ ಸರ್ಕಾರ your MPs have taken it for granted. ಏಕೆಂದರೆ ಅವರ ಎಂ.ಪಿ.ಗಳು ಮೆಜಾರಿಟಿಯಲ್ಲಿದ್ದಾರೆ. ವಿಪ್ ಕೊಟ್ಟರೆ, ಕೈಮೇಲೆ ಮಾಡುತ್ತಾರೆ. ಅಲ್ಲಿ ನರಸಿಂಹರಾಯರಿಗೆ ಮೆಜಾರಿಟಿ ಬೇಕಾಗಿದೆ. He tried to woe Jayalalitha for 11 MPs. ಏನು ಅವಶ್ಯಕತೆ ಇತ್ತು? ಶುಕ್ಲಾರವರು ಹಂಗರ್‌ಸ್ಟ್ರೈಕ್ ಆದರೆ ಬರುತ್ತಾರೆ. ಕರ್ನಾಟಕದಲ್ಲಿ ಸಮಸ್ಯೆ ಬಂದರೆ ಅವರಿಗೆ ಬರುವುದಕ್ಕೆ ಆಗುವುದಿಲ್ಲ. ಮತ್ತೊಂದು ಮಾತು. ಇಲ್ಲಿ ಶುಕ್ಲಾ ಅವರು ಬಂದಿದ್ದರು. ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ (ಐ) ಕಮಿಟಿ ವರ್ಕರ್ಸ್‌ನ್ನು ಅಡ್ರೆಸ್ ಮಾಡುವಾಗ ಅವರು ಒಂದು ಮಾತನ್ನು ಹೇಳಿದರು. "Interim Award on Cauvery will be implemented" ಎಂದು ಹೇಳಿದರು. ಅದರ ನಂತರ ನಮ್ಮ ಪಕ್ಷದ ಅಧ್ಯಕ್ಷರು, ಲೋಕಸಭಾಸದಸ್ಯರಾದ ಶ್ರೀ ದೇವೇಗೌಡರು ಒಂದು ಪತ್ರವನ್ನು ಬರೆದಿದ್ದಾರೆ. ಈ ಪ್ರಕಾರ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಬಂದಿದೆ, ಏನು

12 ಪಿ.ಎಂ.

ಹೇಳುತ್ತೀರಿ ಎಂದು. ಆಗ ಡಿನ್ಯೈ ಮಾಡಿ, ಈ ಪ್ರಕಾರ ಸ್ಟೇಟ್‌ಮೆಂಟ್ ಕೊಟ್ಟಿಲ್ಲವೆಂದು ಹೇಳಿದರು. ಅದು ಪತ್ರಿಕೆಯಲ್ಲಿ ಬಂದಿದೆ. ಇದಕ್ಕೆ ವಿಟ್‌ನೆಸ್ ಯಾರು ? ಆ ಡಿ.ಸಿ.ಸಿ (ಐ)ವರ್ಕ್‌ರ್ಸ್ ಯಾರು ಆ ಸಭೆಯಲ್ಲಿ ಇದ್ದರೋ ಅವರೇ ಸಾಕ್ಷಿಗಳು. ಅವರು ಬೆಂಗಳೂರಿಗೆ ಬಂದು, ನಮ್ಮ ರಾಜ್ಯದ ಇಂಟ್ರೆಸ್ಟ್ ವಿರುದ್ಧ, ನಮ್ಮ ರಾಜ್ಯದ ರೈತರ ವಿರುದ್ಧ, ಈ ಪ್ರಕಾರ ಸ್ಟೇಟ್‌ಮೆಂಟ್ ಕೊಟ್ಟರೂ ಸಹ ನಿಮ್ಮ ಕಡೆಯಿಂದ, ಶುಕ್ಲಾರವರ ಬಗ್ಗೆ ಪ್ರೊಟೆಸ್ಟ್ ಲಾಡ್ಜ್ ಮಾಡುವುದಿಲ್ಲ. ಅಷ್ಟು ಧೈರ್ಯ ನಿಮಗೆ ಇಲ್ಲ. ಇವತ್ತು ಅಧಿಕಾರದಲ್ಲಿ ನೀವು ಇರಬಹುದು, ನಾಳೆ ನಾವು ಇರಬಹುದು. ಒಳ್ಳೆಯ ಕೆಲಸ ಮಾಡಿದರೆ

ಪುನಃ ತಾವೇ ಬರಬಹುದು. ಆದರೆ, ಈ ರಾಜ್ಯದ ಹಿತ, ನಾಡಿನ ಹಿತ ಸಂರಕ್ಷಣೆ ಮಾಡುವ ಸಲುವಾಗಿ, ನಿಮಗೆ ಶುಕ್ಲಾರವರ ಬಗ್ಗೆ ಒಂದು ಮಾತು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳೇ, ಕೊನೇಪಕ್ಷ ಒಂದು ಪತ್ರವನ್ನು ಪ್ರೊಟೆಸ್ಟ್ ಮಾಡಿ ಬರೆಯುವುದಕ್ಕೆ ಏನು ಕಷ್ಟ, ನಿಮಗೆ ಏನು ತೊಂದರೆ ಇದೆ. ನಿಮಗೇನಾದರೂ ತೊಂದರೆ, ಕಷ್ಟ ಇದ್ದರೆ ನಮಗೆ ಹೇಳಿ. ನಾನು ಇದೇ ಸಮಯದಲ್ಲಿ, ನಮ್ಮ ಉಪನಾಯಕರಾದ ಶ್ರೀಮಾನ್ ಸಿಂಧ್ಯರವರು, ಸಿಪಿಐ, ಸಿಪಿಎಂ ನಾಯಕರು ಕನಕಪುರದ ಸಂಗಮಕ್ಕೆ ಹೋಗಿದ್ದೆವು. ತಮಿಳುನಾಡಿಗೆ ನೀರು ಎಲ್ಲಿಂದ ಹೋಗುತ್ತದೆ ಎಂಬುದನ್ನು ನೋಡಲು ಹೋಗಿದ್ದೆವು. ಇದೇ ಸಮಯದಲ್ಲಿ ಅಂದರೆ, ಸುಮಾರು 20ನೇ ತಾರೀಖು ಹೋಗಿದ್ದೆವು, ನಾವು ಅಲ್ಲಿ ನೋಡಿದ್ದೇವೆ, ಅರ್ಕಾವತಿ ನದಿಯಲ್ಲಿ ಪೂರ್ತಿಯಾಗಿ ನೀರಿಲ್ಲ, ಒಣಗಿ ಹೋಗಿದೆ. ಅಲ್ಲಿಯ ಸ್ಥಳೀಯ ಜನರನ್ನು ಏನು ಪರಿಸ್ಥಿತಿ ಇದೆ ಎಂದು ಕೇಳಿದೆ. ಅದಕ್ಕೆ ಅವರು ಇದಕ್ಕಿಂತ ಹೆಚ್ಚಿನ ನೀರು ತಮಿಳುನಾಡಿಗೆ ಹರಿಯುತ್ತಿತ್ತು, ಈ ದಿನವೂ ಹರಿಯುತ್ತಿದೆ ಎಂದು ಹೇಳಿದರು. ಹಾಗಾಗಿ ನೀರು ಎಲ್ಲಿಂದ ಬರಬೇಕು, ಕಬಿನಿಯಿಂದ ಬರಬೇಕೋ, ಹಾರಂಗಿಯಿಂದ ಬರಬೇಕೋ ಎಂದು ಸರ್ಕಾರ ಸ್ಪಷ್ಟಮಾಡಬೇಕಾಗುತ್ತದೆ. ಜುಲೈ 16-17ನೇ ತಾರೀಖಿನಿಂದ, 23-24ನೇ ತಾರೀಖಿನವರೆಗೆ ಈ ಮೂರು ರಿಸರ್ವಾಯರ್‌ಗಳಲ್ಲಿದ್ದ ನೀರು ಏನಾಯಿತು. ಮತ್ತು ರಿಸರ್ವಾಯರ್ ಲೆವಲ್ 24-25ನೇ ತಾರಿಖಿಗೆ ಏನಿತ್ತು, ಮಳೆ ಎಷ್ಟಾಯಿತು ಎಂದು ಹೇಳಬೇಕಾಗುತ್ತದೆ. ಅಲ್ಲಿ ನೀರು ಹೋಗುವುದನ್ನು ನಾವು ಕಣ್ಣಾರೆ ನೋಡಿದ್ದೇವೆ. ಕೇಂದ್ರ ಸರ್ಕಾರದ ಆದೇಶದ ಮೇರೆಗೆ, ಕರ್ನಾಟಕದ ಇಂಟ್ರೆಸ್ಟ್‌ನ್ನು ಮಾರ್ಟ್‌ಗೇಜ್ ಇಟ್ಟು, ನರಸಿಂಹರಾಯರ ಸರ್ಕಾರ ಉಳಿಯಬೇಕು ಎನ್ನುವ ಗುರಿಯನ್ನು ಕಣ್ಮುಂದೆ ಇಟ್ಟುಕೊಂಡು ತಾವು ನೀರು ಬಿಟ್ಟಿದ್ದೀರಿ. ನಾನು ಒಪ್ಪಿಕೊಳ್ಳುತ್ತೇನೆ, ನಮ್ಮ ಸರ್ಕಾರ ಇದ್ದಾಗಲೂ ಸಹ ತಮಿಳುನಾಡಿಗೆ, ಬೆಳೆ ಹಾಳಾಗುತ್ತದೆಂದು ನೀರು ಬಿಟ್ಟಿದ್ದೇವೆ. ಅವರು ಕಷ್ಟದಲ್ಲಿದ್ದೇವೆಂದು ಹೇಳಿದಾಗ, ನಾವೂ ಕೂಡ ನೀರು ಬಿಟ್ಟಿದ್ದೇವೆ, ಇಲ್ಲವೆಂದಲ್ಲ. ನಾವು ತಮಿಳುನಾಡಿನ ರೈತರ ವಿರುದ್ಧ ಇಲ್ಲ, ಅವರಿಗೆ ನೀರು ಬೇಡ ಎಂದು ಹೇಳುತ್ತಿಲ್ಲ. ಅವರಿಗೆ ನೀರಾವರಿ ಆಗಬಾರದು ಎಂದು ಹೇಳುತ್ತಿಲ್ಲ. ಆದರೆ, ನಾವು ಸ್ಯಾಕ್ರಿಫೈಸ್ ಮಾಡಿ, ನಮ್ಮ ರೈತರು ಸ್ಯಾಕ್ರಿಫೈಸ್ ಮಾಡಿ, ನಮ್ಮ ರೈತರನ್ನು ಕಡೆಗಣಿಸಿ ನೀರು ಬಿಡುವುದಕ್ಕೆ ಸಾಧ್ಯವಿಲ್ಲ. ಈ ತರಹ ಸ್ಟಾಂಡಿಂಗ್ ಇರಬೇಕಾಗುತ್ತದೆ. ರೈತ ಎಂದರೆ, ರೈತ. ತಾವು ವಿರೋಧಪಕ್ಷದವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ ಅಥವಾ ಏನು ಮಾಡುತ್ತೀರಿ ಎನ್ನುವುದನ್ನೂ ಹೇಳುವುದಿಲ್ಲ. ನಿಮ್ಮಲ್ಲಿ ಯಾವುದಕ್ಕೂ ಸ್ಪಷ್ಟವಾದ ನೀತಿ ಇಲ್ಲ. ಹಾಗಾಗಿ ಒಂದುಕಡೆ ತಮಿಳುನಾಡಿಗೆ ನೀರಾವರಿ ಭೂಮಿಯನ್ನು ಬೆಳೆಸುತ್ತಿದ್ದೀರಿ, ಅವರು ಹೆಚ್ಚು ಹೆಚ್ಚು ಬೆಳೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಇಲ್ಲಿಯ ಸರ್ಕಾರದಿಂದ ಯಾವುದೇ ಕಾರ್ಯಕ್ರಮ ಇಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಲೋಕಸಭಾ ಸದಸ್ಯರು ಡೆಲ್ಲಿಯಲ್ಲಿ ಪ್ರಧಾನ ಮಂತ್ರಿಗಳಿಗೆ ಮೆಮೋರ್ಯಾಂಡಂ ಕೊಟ್ಟರು. ನಮ್ಮ ಹಿತ ಸಂರಕ್ಷಣೆಯಾಗಬೇಕು, ಕಾವೇರಿ ವಿಚಾರದಲ್ಲಿಮಾತುಕತೆಯಾಗಬೇಕು ಮತ್ತು ಇಂಟೀರಿಂ ಅವಾರ್ಡ್ ಏನಿದೆ, ಅದರ ಮೇಲೆ ಮಾನಿಟರಿಂಗ್ ಕಮಿಟಿ ಮಾಡಬಾರದು ಎಂದು ಮೆಮೊರ್ಯಾಂಡಂ ಕೊಟ್ಟರು. ಈ ಮೆಮೊರ್ಯಾಂಡಂ ಕೊಟ್ಟನಂತರ ಏನಾಗಿದೆ ಎಂದರೆ ಲೋಕಸಭೆಯಲ್ಲಿ ನೀರಾವರಿ ಸಚಿವರಾದ ಶ್ರೀ P.K Thungon ಎಂಬುವರು ಏನು ಹೇಳುತ್ತಾರೆ, Cauvery flow yet to be monitored. ನೀವು ಮೆಮೊರ್ಯಾಂಡಂ

ಕೊಟ್ಟನಂತರ, ಲೋಕಸಭೆಯಲ್ಲಿ ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳು, ನಾವು ಮಾನಿಟರಿಂಗ್ ಕಮಿಟಿ ಮಾಡುತ್ತೇವೆ ಎಂದು ಹೇಳುತ್ತಾರೆ. ಇದನ್ನು ಹೇಳಿದನಂತರ ನೀವೇನು ಮಾಡಿದ್ದೀರಿ? ನೀವು ಪ್ರೊಟೆಸ್ಟ್ 'ಲೆಟರ್ ಕಳುಹಿಸಿದ್ದೀರಾ, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಪ್ರೊಟೆಸ್ಟ್ ಮಾಡಿ ಸ್ಟೇಟ್‌ಮಂಟ್ ಕೊಟ್ಟಿದ್ದೀರಾ? ನಿಮಗೆ ಏನಾಗಿದೆ ಎಂದು ನಾನು ಕೇಳುತ್ತಿದ್ದೇನೆ. ಪತ್ರಕರ್ತರು ನಿಮ್ಮ ಕಡೆ ಬರುತ್ತಿಲ್ಲವೇ. ನೀವು ಹೇಳಿಕೆ ಕೊಡುತ್ತಿದ್ದರೂ, ಅವರು ಬರೆಯುತ್ತಾ ಇಲ್ಲವೇ? ನಿಮಗೆ ಏನಾಗಿದೆ? ಪ್ರತಿ ದಿನವೂ ಪತ್ರಿಕೆಯಲ್ಲಿ ನಿಮ್ಮ ಕಚ್ಚಾಟವೇ ಬರುತ್ತಿದೆ, ಅದನ್ನು ನಾವು ನೋಡುತ್ತಿದ್ದೇವೆ. ಹೀಗೆ ಮಾಡಿದರೆ ನಾವು ಹಾಳಾಗುತ್ತೇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾದ ಬುದ್ಧಿಯೂ ನಿಮಗೆ ಇಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ನಾವೂ ಜಗಳ ಮಾಡಿ ಇಲ್ಲಿ ಬಂದಿದ್ದೇವೆ. ನಾನು ಪ್ರಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಹೌದು ನಾವು ಜಗಳ ಮಾಡಿ ಇಲ್ಲಿ ಬಂದಿದ್ದೇವೆ. ಆದರೆ ನೀವು ಇಲ್ಲಿ ಬರುವುದಕ್ಕೆ ಯಾವ ಸಂದೇಹವೂ ಇಲ್ಲ. ನಾವು ಅಲ್ಲಿ ಹೋಗುತ್ತೇವೆ ನೀವು ಇಲ್ಲಿ ಬರುತ್ತೀರಿ. ಹಾಗಾಗಿ ಇವತ್ತು ಈ ಸ್ಟೇಟ್‌ಮೆಂಟ್ ಬಗ್ಗೆ ಸರ್ಕಾರದ ನೀತಿ ಏನಿದೆ? ಇವರ ಬಗ್ಗೆ ನೀವು ಏತಕ್ಕೆ ಪ್ರೊಟೆಸ್ಟ್ ಮಾಡಿಲ್ಲ. ಒಬ್ಬ ಕೇಂದ್ರದ ಸಚಿವರು ಪ್ರಧಾನ ಮಂತ್ರಿಗಳಿಗೆ ಮೆಮೋರಾಂಡಂ ಕೊಟ್ಟ ನಂತರ ಪುನಃ ತಮಿಳುನಾಡಿನ ಪರವಾಗಿ ಮಾತನಾಡುತ್ತಾರೆ. ಪುನಃ ಶುಕ್ಲರವರು ಹೇಳಿದ ಸ್ಟೇಟ್‌ಮೆಂಟ್‌ನ್ನು ರಿಗ್ರೆಟ್ ಮಾಡುತ್ತಾರೆ. ನಮ್ಮ ಸರ್ಕಾರದಿಂದ ಯಾವ ಪ್ರೊಟೆಸ್ಟ್ ಇಲ್ಲ. ಮಾನ್ಯ ಅಧ್ಯಕ್ಷರೇ, ಟ್ರಿಬ್ಯುನಲ್‌ನಲ್ಲಿ ಇಂಟಿರಿಯಂ ಅವಾರ್ಡ್ ಆದ ನಂತರ ನಾವು ಯೂನಾನಿಮಸ್ ಆಗಿ ರೆಜಲ್ಯೂಷನ್ ಮಾಡಿದ್ದೇವೆ. ಅದು ನಮಗೆ ಬೈಂಡಿಂಗ್ಸ್ ಅಲ್ಲ ಎಂದು. ಮತ್ತೆ ಅದರ ಮೇಲೆ ಕರ್ನಾಟಕ ರಿವ್ಯೂ ಪಿಟೀಶನ್ ಹಾಕಿದ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ಆರ್ಡರ್ ಮಾಡಿದರು. ಏನು ಆರ್ಡರ್ ಮಾಡಿದರುಎಂದರೆ Any party in the changed circumstances can approach us ಎಂದು. ಹಾಗಾಗಿ ಇವತ್ತು ತಮಿಳುನಾಡಿಗೆ ಕೇಂದ್ರ ಸರ್ಕಾರ ಹೋಗುವ ಅಧಿಕಾರ ಏನಿದೆ? ಇವತ್ತು ನಾವು ಮಾನಿಟರಿಂಗ್ ಕಮಿಟಿ ಮಾಡುತ್ತೇವೆಂದು ಹೇಳುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಏನಿದೆ? ಇವತ್ತು ನಾವು ಬೈಂಡಿಂಗ್ಸ್ ಇಲ್ಲ ಎಂದು ಹೇಳಿದ್ದೇವೆ. ಒಂದು ವೇಳೆ ತಮಿಳುನಾಡಿಗೆ ಗ್ರಿವೆನ್ಸ್‌ಸ್ ಏನಾದರೂ ಇದ್ದರೆ ನಮಗೆ ನೀರು ಸಿಗುತ್ತಿಲ್ಲ ಎಂದು ಹೇಳಬಹುದು. Tamilnadu can only approach the Tribunal. Government of India should have straight away said:ಇದರಲ್ಲಿ ನಾವು ಇಂಟರ್‌ಫಿಯರ್ ಆಗುವುದಿಲ್ಲ. ಇದರಲ್ಲಿ ನಾವು ಕಮಿಟಿ ಮಾನಿಟರಿಂಗ್ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು; ಲೋಕಸಭೆಯಲ್ಲಿ ಹೇಳಬೇಕಾಗಿತ್ತು; ಪತ್ರಿಕೆಗಳಲ್ಲಿ ಹೇಳಬೇಕಾಗಿತ್ತು. ತಮಿಳುನಾಡಿಗೆ ಡೈರೆಕ್ಷನ್ ಕೊಡಬೇಕಾಗಿತ್ತು Go and approach the Tribunal, ಎಂದು. ಆದರೆ ಕೇಂದ್ರ ಸರ್ಕಾರಕ್ಕೂ ಸಹ ಇವತ್ತು ತಮಿಳುನಾಡಿಗೆ ಸಹಾಯ ಮಾಡುವ ಇಚ್ಛೆ ಇದೆ. ಆ ದೃಷ್ಟಿಯಿಂದ ಇವತ್ತು ನಾನು ಏನು ಹೇಳುತ್ತಿದ್ದೇನೆಂದರೆ, ಕಾವೇರಿ ವಿಚಾರದಲ್ಲಿ ಕಾವೇರಿ ಬೇಸಿನ್‌ನ ರೈತರಿಗೆ ಸರ್ಕಾರ ವಿಶ್ವಾಸ ದ್ರೋಹ ಮಾಡಿದೆ. ಆದ್ದರಿಂದ ಈ ಸರ್ಕಾರ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಇರುವ ಅಧಿಕಾರ ಇಲ್ಲ. They have no right, legal or moral. They have bartered the interests of Karnataka. They have sold the interests of Karnataka. ಹಾಗಾಗಿ ಇವತ್ತು ಈ ಒಂದು ವಿಚಾರದಲ್ಲಿ ಮತ್ತೊಂದು ಕೊನೆಯ ಮಾತನ್ನು ನಾನು ಹೇಳಬೇಕಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳ ಬಗ್ಗೆ

ನನಗೆ ಗೌರವ ಇದೆ. ಅವರು ನಾವು ಹೇಳುವುದನ್ನೆಲ್ಲಾ ಲಾಲಿಸುತ್ತಿದ್ದಾರೆ. ಅವರು ಕಾವೇರಿ ಬೇಸಿನ್‌ನಿಂದ ಬರುತ್ತಿದ್ದಾರೆ, ಅವರಿಗೆ ಸಾಕಷ್ಟು ಅನುಭವ ಇದೆ. ಆ ಅನುಭವದ ಲಾಭ ನಮಗೆ ಮಾಡಿ ಕೊಡಬೇಕಾಗುತ್ತದೆ. ಕಾವೇರಿ ರೈತರ ಬಗ್ಗೆ ನಮಗೆಲ್ಲರಿಗಿಂತ ಹೆಚ್ಚು ಚಿಂತನೆ ನಿಮಗೆ ಇರಬೇಕಾಗುತ್ತದೆ. ಅದರಲ್ಲಿಯೂ ಅಂತಹ ಒಂದು ಮುಖ್ಯವಾದ ಖಾತೆಯನ್ನು ತಾವು ಹೊಂದಿದ್ದೀರಿ. ತಮ್ಮಿಂದ ಹೆಚ್ಚಿನ ನ್ಯಾಯ ನಮಗೆ ದೊರಕಿಸಿಕೊಡಬೇಕಾಗುತ್ತದೆ. ಯಾವ ಹೋರಾಟಕ್ಕೂ ತಾವು ಸಿದ್ಧವಾಗಬೇಕಾಗುತ್ತದೆ, ಅಧಿಕಾರ ತ್ಯಾಗ ಮಾಡುವುದಕ್ಕೂ ತಾವು ಸಿದ್ಧರಾಗಬೇಕಾಗುತ್ತದೆ. ನಿಮ್ಮ ಬಗ್ಗೆ ನನಗೆ ಗೌರವ ಇದೆ ಎಂದು ನಾನು ಮೊದಲೇ ಹೇಳಿದ್ದೇನೆ. ಇದರ ಬಗ್ಗೆ ತಾವು ಏನೂ ಮಾತನಾಡಿಲ್ಲ; ಒಂದು ಮಾತೂ ಹೇಳಿಲ್ಲ. ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತಾರೆ, ಯಾರೋ ಸ್ಟೇಟ್‌ಮೆಂಟ್ ಕೊಡುತ್ತಾರೆಯೇ ವಿನಃ ಈ ವಿಚಾರದಲ್ಲಿ ಶುಕ್ಲರವರ ಎಂಟ್ರಿ ಬಗ್ಗೆ ಆಗಲಿ ಅಥವಾ ತುಂಗನ್ ಸ್ಟೇಟ್‌ಮೆಂಟ್ ಬಗ್ಗೆ ಆಗಲಿ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಬಗ್ಗೆ ಆಗಲಿ, ಸುಪ್ರಿಂ ಕೋರ್ಟಿನಲ್ಲಿ ಮೊನ್ನೆ ಆದ ಸಮಸ್ಯೆ ಬಗ್ಗೆ ಆಗಲಿ ನಿಮ್ಮಿಂದ ಯಾವ ತರಹದ ಸ್ಟೇಟ್‌ಮೆಂಟ್ ಇಲ್ಲ. ನಿಮಗೆ ಏನು ತೊಂದರೆ ಇದೆ?ಹೀಗಾಗಿ ನಿಮ್ಮ ಕಾಂಡಕ್ಟ್ ಬಗ್ಗೆ ನಮ್ಮಲ್ಲಿ ಸಸ್‌ಪಿಷಿಯನ್‌ಗೆದ ನಿರ್ಮಾಣ ಮಾಡಿದೆ. ನಿಮ್ಮ ನಿಮ್ಮ ಜಗಳದಿಂದ ಇವತ್ತು ಕಾವೇರಿ ರೈತರಿಗೆ ದ್ರೋಹ ಮಾಡುತ್ತಿದ್ದೀರಿ. ಹೀಗಾಗಿ ನಿಮ್ಮ ನಿಮ್ಮ ಇಂಟರ್‌ನಲ್, ನಿಮ್ಮ ನಿಮ್ಮ ಸಮಸ್ಯೆಗಳು ಏನಿವೆ ಅವುಗಳನ್ನು ಸ್ಕ್ರೋರ್ ಮಾಡಿ ಕಾವೇರಿಯನ್ನು, ಕಾವೇರಿ ರೈತರನ್ನು ಬಲಿ ಕೊಡಬೇಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಮಗೆ ಏನು ಅನುಭವ ಇದೆ ಆ ಅನುಭವದ ಲಾಭ ನಮಗೆ ಬೇಕಾಗಿದೆ, ಸದನಕ್ಕೆ ಬೇಕಾಗಿದೆ, ರಾಜ್ಯಕ್ಕೆ ಬೇಕಾಗಿದೆ, ರಾಜ್ಯದ ರೈತರಿಗೆ ಬೇಕಾಗಿದೆ. ನಾನು ನಿಮ್ಮ ರಾಜೀನಾಮೆಯನ್ನು ಕೇಳುವುದಕ್ಕೆ ಹೋಗುವುದಿಲ್ಲ. ತಾವು ಸಂಪೂರ್ಣವಾಗಿ ವಿಫಲರಾಗಿದ್ದರೂ ಸಹ ಈ ವಿಚಾರದಲ್ಲಿ ಇರಿಗೇಷನ್ ಮಿನಿಸ್ಟರ್ ಆಗಿ ಕಾವೇರಿ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದರೂ ಸಹ ನಿಮ್ಮ ರಾಜಿನಾಮೆಯನ್ನು ನಾನು ಕೇಳುವುದಿಲ್ಲ. ನಾನು ರಾಜಿನಾಮೆಯನ್ನು ಸರ್ಕಾರದಿಂದ ಕೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳುತ್ತೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಹಂತದಲ್ಲಿ, ಇವತ್ತು ಕಾವೇರಿ ವಿಚಾರದಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ಇವತ್ತು ನಾನು ಈ ಸಂದರ್ಭದಲ್ಲಿ ಇಷ್ಟು ಹೇಳಬಹುದು. ಕಾವೇರಿ ಅಥವಾ ಕೃಷ್ಣಾ ಇರಬಹುದು, ಎಲ್ಲಿಯತನಕ ನಾವು ನಮ್ಮ ಪಾಲಿನ ನೀರನ್ನು ನಮ್ಮ ರೈತರ ಸಲುವಾಗಿ ಉಪಯೋಗ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ನಮ್ಮ ರಾಜ್ಯದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ನಾನು ಯಾವ ಮಟ್ಟಕ್ಕೆ ಹೋಗುವುದಕ್ಕೂ ಸಿದ್ಧವಾಗಿದ್ದೇವೆಂದು ವಿರೋಧಪಕ್ಷದ ವತಿಯಿಂದ ಭರವಸೆ ಕೊಡುತ್ತೇನೆ. ನಾವು ಯಾವ ತ್ಯಾಗಕ್ಕೂ ತಯಾರಾಗಿದ್ದೇವೆ. ನಾವು ನಿಮ್ಮ ಜೊತೆಯಲ್ಲಿ ಬರುವುದಕ್ಕೆ ಸಿದ್ಧವಾಗಿದ್ದೇವೆ. ಇದರ ಬಗ್ಗೆ ಪಕ್ಷಾತೀತವಾಗಿ ಹೋರಾಟ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ ನಿಮ್ಮ ನೀತಿ ಸ್ಪಷ್ಟವಾಗಿರಲಿ. ಇವತ್ತು ಏನು ಘಟನೆ ನಡೆದಿದೆ ಅದರ ಬಗ್ಗೆ ಸರಿಯಾದ ಬೆಳಕು ಚೆಲ್ಲುವ ಜವಾಬ್ದಾರಿ ನಿಮ್ಮ ಮೇಲಿದೆ. ಆ ದೃಷ್ಟಿಯಿಂದ ನೀವು ಕ್ರಮ ತೆಗೆದುಕೊಳ್ಳಬೇಕು, ಎನ್ನುವ ಮಾತನ್ನು ಹೇಳುತ್ತೇನೆ. ಈಗಾಗಲೇ ನಾನು ಹೇಳಿದ ಹಾಗೆ, ಈ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ. ಆದ್ದರಿಂದ ಸರ್ಕಾರ ರಾಜೀನಾಮೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- (ಶಿಕಾರಿಪುರ) ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿ ಈ ನಾಡಿನ ನಾಲ್ಕುವರೆ ಕೋಟಿ ಜನಗಳಿಗೆ ಸಂಬಂಧಪಟ್ಟ ಈ ಕಾವೇರಿ ಜಲ ವಿವಾದದ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ. ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಬಹಳ ವರ್ಷಗಳಿಂದ ಈ ಸದನದಲ್ಲಿ ಕಾವೇರಿ ಜಲವಿವಾದದ ಬಗ್ಗೆ ಗಂಟೆಗಟ್ಟಲೆ ಚರ್ಚೆಗಳು ನಡೆದಿವೆ. ಆದರೆ ಬಹುಶಃ ಸರ್ಕಾರ ಈ ಕಾವೇರಿ ಜಲವಿವಾದವನ್ನು ಬಗೆಹರಿಸಿ ಆ ಜಲಾನಯನ ಪ್ರದೇಶದ ರೈತರಿಗೆ ನೀರನ್ನು ಕೊಟ್ಟು ಮುಂದೆ ತಲೆ ತಲಾಂತರವಾಗಿ ಆಗುವಂತಹ ಅನ್ಯಾಯವನ್ನು ತಡೆಗಟ್ಟುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಈ ಕಾವೇರಿ ಟ್ರಿಬ್ಯುನಲ್ ಮುಂದೆ ಯಾವುದೇ ಕಾರಣಕ್ಕೆ ನಾವು ಹೋಗುವುದು ಬೇಡ, ಈ ನದಿ ನೀರನ್ನು ಹಂಚಿಕೊಳ್ಳುವುದರ ಬಗ್ಗೆ ರಾಷ್ಟ್ರೀಯ ಜಲನೀತಿಯನ್ನು ಮಾಡುವ ನಿರ್ಧಾರವನ್ನು ಕೇಂದ್ರಸರ್ಕಾರ ಮಾಡುವುದಕ್ಕಿಂತ ಮುಂಚಿತವಾಗಿ ನಾವು ಹೋದರೆ ಅನ್ಯಾಯವಾಗುತ್ತದೆ, ಅದೇ ಪಟ್ಟನ್ನು ನಾವು ಹಿಡಿಯೋಣ ಎನ್ನುವ ಮಾತನ್ನು ವಿರೋಧಪಕ್ಷದ ನಾಯಕರಸಭೆಯನ್ನು ಕರೆದಾಗ ಅವತ್ತು ನಾವು ಭಾರತೀಯ ಜನತಾ ಪಾರ್ಟಿ ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಅವತ್ತು ಇವರು ಹೇಳಿ ಕೊಳ್ಳುವಂತಹ ಇವರ ಲೀಗಲ್ ಅಡ್ವೈಜರ್ಸ್, ಎಕ್ಸಪರ್ಟ್ಸ್ ಜೊತೆಯಲ್ಲಿ ಚರ್ಚೆ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟರು. ನಾವು ಟ್ರಿಬ್ಯುನಲ್ ಮುಂದೆ ನಮ್ಮ ನ್ಯಾಯಯುತವಾದ ಬೇಡಿಕೆಯನ್ನು ಇಡೋಣ, ಅಂಕಿಅಂಶಗಳನ್ನು ಇಡೋಣ, ನಮಗೆ ನ್ಯಾಯ ಸಿಗುತ್ತದೆ, ಯಾವುದೇ ಕಾರಣಕ್ಕೂ ಮಧ್ಯಂತರ ಆಜ್ಞೆ ಬರುವುದಿಲ್ಲ, ಕೊಡುವುದಿಲ್ಲ, ಅದನ್ನು ಕೊಡುವುದಕ್ಕೆ ಅವರಿಗೆ ಹಕ್ಕು ಇಲ್ಲ ಎನ್ನುವ ಮಾತನ್ನು ಹೇಳಿ ವಿರೋಧಪಕ್ಷದ ನಾಯಕರಿಗೆ ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಭರವಸೆ ಕೊಟ್ಟರು. ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆ ಕಡೆ ಕುಳಿತುಕೊಂಡು ಈ ನಾಡಿನ ಜನರ ಪ್ರತಿನಿಧಿಗಳಾಗಿ ಸರ್ಕಾರವನ್ನು ನಡೆಸುತ್ತಿರುವಂತಹವರ ಮೇಲೆ ಅನುಮಾನ ಬರುತ್ತಿದೆ. ನೀವು ತಮಿಳುನಾಡಿನ ಪರವಾಗಿ ವಾದ ಮಾಡುತ್ತಿದ್ದೀರೋ ಅಥವಾ ಟ್ರಿಬ್ಯುನಲ್ ಮುಂದೆ ಕರ್ನಾಟಕ ರಾಜ್ಯದ ಜನರ ಪರವಾಗಿ ವಾದ ಮಾಡುತ್ತಿದ್ದೀರೋ ಎಂದು ಅನುಮಾನ ಬರುವ ರೀತಿಯಲ್ಲಿ ನಿಮ್ಮ ವರ್ತನೆ ಬರುತ್ತಿದೆ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಯಾವ ಟ್ರಿಬ್ಯುನಲ್ಗೆ ಇಂಟಿರಿಯಂ ಆರ್ಡರ್ ಕೊಡುವುದಕ್ಕೆ ನಿಮಗೆ ಅವಕಾಶ ಇಲ್ಲ ಅಧಿಕಾರ ಇಲ್ಲ ಎಂದು ಹೇಳಿದಾಗ ಸುಪ್ರೀಂ ಕೋರ್ಟ್‌ಗೆ ತಮಿಳುನಾಡು ಮೇಲ್ಮನವಿ ಸಲ್ಲಿಸಿದ ಸಂದರ್ಭದಲ್ಲಿ ಮೇರಿಟ್ ಆಧಾರದ ಮೇಲೆ ಇಂಟಿರಿಯಂ ಆರ್ಡರ್ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ ಎಂದು ನಿಮ್ಮ ಅಡ್ವೋಕೇಟ್ಸ್ ಲಿಖಿತ ಮೂಲಕ ಸುಪ್ರೀಂ ಕೋರ್ಟ್‌ಗೆ ಬರೆದು ಕೊಟ್ಟಿದ್ದು ನಿಜ ತಾನೆ?ಅಂದರೆ ಟ್ರಿಬ್ಯುನಲ್‌ನ ಇಂಟಿರಿಯಂ ಆರ್ಡರ್ ಪಾಪದ ಕೂಸಿಗೆ ನೀವು ಜವಾಬ್ದಾರರು; ಅಲ್ಲಿ ಕುಳಿತಿರುವಂತಹವರು ಜವಾಬ್ದಾರರು. ಈ ಒಂದು ನದಿ ನೀರಿನ ವಿವಾದವನ್ನು ಪ್ರಾಮಾಣಿಕವಾಗಿ ಬಗೆಹರಿಸಿ ನೀರನ್ನು ಒದಗಿಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿರುವ ನಿಮಗೆ ಅಧಿಕಾರದಲ್ಲಿ ಒಂದು ಕ್ಷಣವೂ ಸಹ ಉಳಿಯುವುದಕ್ಕೆ ನೈತಿಕ ಹಕ್ಕು ಇಲ್ಲ. ಈ ನಾಡಿನ ಜನರ ಪರವಾಗಿ ವಿನಂತಿ ಮಾಡುತ್ತೇನೆ. ನಿಮ್ಮಲ್ಲಿ ಆದಂತಹ ಬಡಿದಾಟ, ಒಳಜಗಳಗಳಲ್ಲಿ ನೀವು ತಲ್ಲೀನರಾಗಿರುವಂತಹ

ಸಂದರ್ಭದಲ್ಲಿ ನಿಮಗೆ ಇವತ್ತು ಭರವಸೆ ಬಂದಿದೆನಾವು ನ್ಯಾಯವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಂತಹ ಸಂದರ್ಭದಲ್ಲಿ ನೈತಿಕ ಹೊಣೆ ಹೊತ್ತು ಕಾವೇರಿ ಜಲವಿವಾದ ಇನ್ನೂ ಹೆಚ್ಚು ಉಲ್ಬಣಗೊಳ್ಳುವುದಕ್ಕೆ ಈ ನಾಡಿನ ಜನಗಳಿಗೆ ಅನ್ಯಾಯ ಮಾಡಲಿಕ್ಕೆ ಕಾರಣಕರ್ತರಾಗಿರುವ ನೀವು ನಿಮ್ಮ ಪಾಪಕ್ಕೆ ಪ್ರಾಯಶ್ಚಿತ್ತ ಎಂದು ಹೇಳಿ ವಿಧಾನ ಸಭೆಯನ್ನು ವಿಸರ್ಜನೆ ಮಾಡಿ, ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದು ಈ ನಾಡಿನ ಜನರ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಏಕೆ ಈ ಚರ್ಚೆ ಪ್ರಾರಂಭವಾಗಿದೆ? ಇವತ್ತು ವಿಧಾನ ಸಭೆಯ ವಿಶೇಷ ಅಧಿವೇಶನ ಏಕೆ ಪ್ರಾರಂಭ ಆಯಿತು? ಇವತ್ತು ಯಾವ ಕೇಂದ್ರ ಸರ್ಕಾರದ ಅಲ್ಲಿನ ಮಂತ್ರಿಗಳಾದ ವಿ.ಸಿ. ಶುಕ್ಲಾರವರು ರಾತ್ರೋರಾತ್ರಿ ಬೆಂಗಳೂರಿಗೆ ಬಂದು, ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರು ಆಮರಣಾಂತರ ಉಪವಾಸ ಸತ್ಯಾಗ್ರಹ ಮಾಡಿದ್ದು ಸರಿಯೋ ತಪ್ಪೋ ಅದು ಅವರಿಗೆ ಬಿಟ್ಟಿದ್ದು; ಆ ರಾಜ್ಯದ ಜನಗಳಿಗೆ ಬಿಟ್ಟಿದ್ದು. ನಾನು ತಮ್ಮನ್ನು ಕೇಳುತ್ತೇನೆ. ಆದರೆ ನೀವು ಏನು ಮಾಡಿದಿರಿ ಎಂದು ನಾನು ಕೇಳುತ್ತೇನೆ. ರಾತ್ರೋರಾತ್ರಿ ವಿಶೇಷ ವಿಮಾನದಲ್ಲಿ ಬಂದಾಗ, ಸಂಬಂಧಪಟ್ಟಂಥ ಸಚಿವರಾದ ಮಾನ್ಯ ಕೃಷ್ಣರವರು, ಈ ರಾಜ್ಯದ ಮುಖ್ಯಮಂತ್ರಿಯವರು, ಕೃಷ್ಣ ಕಚೇರಿಯಲ್ಲಿ ಚರ್ಚೆ ಮಾಡಿದ್ದೀರಲ್ಲ, ಅಲ್ಲಿ ಏನು ಚರ್ಚೆ ನಡೆಯಿತು? ಅಲ್ಲಿ ಏನು ಭರವಸೆಯನ್ನು ಕೊಟ್ಟಿದ್ದೀರಿ? ನೀವು ಯಾವುದೇ ಭರವಸೆಯನ್ನು ಕೊಡದಿದ್ದರೆ, ಅದನ್ನು ಲಿಖಿತ ಮೂಲಕವಾಗಿ ಕೊಟ್ಟಿದ್ದೀರೋ, ಮೌಖಿಕವಾಗಿ ಕೊಟ್ಟಿದ್ದೀರೋ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, ನಿಮ್ಮ ಕಾಂಗ್ರೆಸ್‌ನವರ ಒಳಗುಟ್ಟನ್ನು ಸ್ವಾತಂತ್ರ್ಯ ಬಂದು 46 ವರ್ಷಗಳಾದರೂ ಕೂಡ ನಮಗೆ ಯಾರಿಗೂ ತಿಳಿಯುವುದಕ್ಕೆ ಆಗಿಲ್ಲ. ವಿರೋಧ ಪಕ್ಷದಲ್ಲಿದ್ದ ನಮಗೂ ಕೂಡ ತಿಳಿಯುವುದಕ್ಕೆ ಆಗಿಲ್ಲ.ಅವಶ್ಯಕತೆ ಬಿದ್ದಾಗ ಅನುಕೂಲ ಸಿಂಧು ರಾಜಕಾರಣವನ್ನು ಮಾಡತಕ್ಕಂಥವರು ನೀವು. ನಾನು ತಮ್ಮಲ್ಲಿ ಕೇಳಿ ಕೊಳ್ಳುವುದೇನೆಂದರೆ, ಕೇಂದ್ರದ ಜಲಸಂಪನ್ಮೂಲ ಸಚಿವರಾದ ಮಾನ್ಯ ಶುಕ್ಲರವರು ತಮಿಳುನಾಡಿಗೆ ಹೋಗಿ ಉಸ್ತುವಾರಿ ಸಮಿತಿಯನ್ನು ರಚನೆ ಮಾಡುವುದಕ್ಕೆ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆಂದು ಹೇಳಿದ್ದಾರಲ್ಲ? ಅದು ಸುಳ್ಳೋ? ಆ ಬಗ್ಗೆ ತಾವುಗಳು ಏನು ಹೇಳುತ್ತೀರಿ? ಹಾಗಾದರೆ ನಿಜ ಯಾವುದು? ಇದಕ್ಕೆ ಸಂಬಂಧಪಟ್ಟಂಥ ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕಾವೇರಿ ಜಲಾನಯನ ಪ್ರದೇಶದಿಂದ ಬಂದಿರತಕ್ಕಂಥವರು. ತಾವು ಈ ಹೋರಾಟದಲ್ಲಿ ಅಧಿಕಾರದ ಬಗ್ಗೆ ಚಿಂತೆ ಮಾಡದೇ ಪಾಲ್ಗೊಂಡವರು. ಈ ವ್ಯವಹಾರ ನಡೆದಾಗ, ನಿಮ್ಮ ಮುಖ್ಯಮಂತ್ರಿಯವರು ಈ ರೀತಿಯ ಪತ್ರವನ್ನು ಬರೆದಾಗ, ಈ ರೀತಿಯ ಪತ್ರ ವ್ಯವಹಾರ ನಡೆದಾಗ ಅದನ್ನು ಬಹಿರಂಗ ಪಡಿಸಲು ತಾವು ಏಕೆ ಹಿಂದುಮುಂದು ನೋಡುತ್ತಾ ಇದ್ದೀರಿ? ನಾನು ಇದುವರೆಗೂ ನಮ್ಮ ರಾಜ್ಯದ ಉಪಮುಖ್ಯಮಂತ್ರಿಯವರು ಈ ಸಂಬಂಧವಾಗಿ ನಡೆದಂಥ ಸತ್ಯವಿಚಾರಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ ಎಂದು ಅಂದುಕೊಂಡಿದ್ದೇನೆ. ಯಾವುದೋ ಕಾರಣಕ್ಕಾಗಿ ತಾವು ಹೇಳದೆ ಇರಬಹುದಿತ್ತು. ಆದರೆ ಸಮಯ ಬಂದಾಗ ನೀವು ಸತ್ಯವನ್ನು ಹೇಳುತ್ತೀರಿ ಎಂಬ ವಿಶ್ವಾಸವು ನನಗೆ ಇನ್ನೂ ಇದೆ. ನಾನು ನಿಮ್ಮ ಜಿಲ್ಲೆಯವನು. ಹಾಗಾಗಿ ನಾನು ಈ ಸದನದ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಖುರ್ಚಿಗಿಂತ ಈ ನಾಡಿನ ಜನರ ಹಿತ ಮುಖ್ಯವಾಗಿದೆ. ಯಾವುದೇ ಪತ್ರವನ್ನು ಬರೆದಂಥ ವಿಚಾರ ಇರಬಹುದು.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ನಮ್ಮ ಮಂಡ್ಯ ಜಿಲ್ಲೆಯಿಂದ ಉದ್ಭವಿಸಿದ ಮಾನ್ಯ ಯಡಿಯೂರಪ್ಪನವರು ವಿಚಾರಗಳನ್ನು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ವಸ್ತುಸ್ಥಿತಿಗೆ ತೀರಾ ವಿಭಿನ್ನವಾದಂಥ ವಿಚಾರಗಳನ್ನು ಉದಹರಿಸಿ ಅದರ ಮೇಲೆ ತಮ್ಮ ತರ್ಕವನ್ನು ಬೆಳೆಸುವ ಪ್ರಯತ್ನದಲ್ಲಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಮಾನಿಟರಿಂಗ್ ಕಮಿಟಿ ವಿಚಾರದಲ್ಲಿ ಯಾವುದೇ ಪತ್ರವನ್ನು ನಾವು ಕೇಂದ್ರ ಸರಕಾರದವರಿಗಾಗಲೀ, ಮಾನ್ಯ ಶುಕ್ಲಾರವರಿಗಾಗಲೀ, ನಾವು ಕೊಟ್ಟಿಲ್ಲ. ಮೌಖಿಕವಾಗಿಯೂ ಕೊಟ್ಟಿಲ್ಲ, ಬರವಣಿಗೆ ಮೂಲಕವೂ ಕೊಟ್ಟಿಲ್ಲ-ಎನ್ನತಕ್ಕಂಥ ವಿಚಾರವನ್ನು ಈಗಾಗಲೇ ಅವರು ಅಧಿಕೃತವಾಗಿ ಕರ್ನಾಟಕ ರಾಜ್ಯಸರಕಾರದ ಮುಖವಾಣಿಯಾಗಿ ಹೇಳಿದ ಮೇಲೆಯೂ ಕೂಡ ಅದರ ಮೇಲೆ ಜಿಜ್ಞಾಸೆಯನ್ನು ಮಾಡುತ್ತಾಹೋಗತಕ್ಕಂಥಾದ್ದು ಸಾಧುವೇ ಎನ್ನತಕ್ಕಂಥಾದ್ದನ್ನು ಯಡಿಯೂರಪ್ಪನವರು ವಿಚಾರ ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ:- ತಾವು ಇದನ್ನು ಮುಂಚೆಯೇ ಹೇಳಬೇಕಾಗಿತ್ತು. ರಾಜ್ಯದ ಮುಖವಾಣಿ ಮಾನ್ಯ ಮುಖ್ಯಮಂತ್ರಿಯವರು ಎಂದು ತಾವು ಇವೊತ್ತು ಹೇಳಿದ್ದೀರಿ. ಆದರೆ ಇವೊತ್ತಿನ ವರೆಗೂ ತಮ್ಮಕಡೆಯಿಂದ ಈ ಬಗ್ಗೆ ಯಾವುದೇ ಡಿನಾಯಲ್ ಬಂದಿಲ್ಲ. ಅದು ರಿಕಾರ್ಡ್‌ನಲ್ಲಿದೆ. ಕೇಂದ್ರ ಸರಕಾರದವರು ಮಾನಿಟರಿಂಗ್ ಕಮಿಟಿಯನ್ನು ಅಪಾಯಿಂಟ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಶ್ರೀ ತುಂಗನ್‌ರವರು ಈ ಮಾತನ್ನು ಹೇಳಿದ್ದಾರೆ. ತಾವು ಇದರ ಬಗ್ಗೆ ಪ್ರೊಟೆಸ್ಟ್ ಮಾಡಿದ್ದೀರಾ? ಒಂದು ವೇಳೆ ಮಾಡಿದರೆ, ಫಿಸಿಕಲೀ ಈ ಸರಕಾರಕ್ಕೆ ಅದನ್ನು ನಿಲ್ಲಿಸುವ ಶಕ್ತಿ ಇದೆಯೇ ಎಂಬುವುದನ್ನು ನಾನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ:- ಕಾವೇರಿ ವಿಚಾರದಲ್ಲಿ ಈ ಸರಕಾರಕ್ಕೆ ಇರುವುದು ಒಂದೇ ಒಂದು ಮುಖವಾಣಿ. ಅದು ಮುಖ್ಯಮಂತ್ರಿಗಳ ಮುಖವಾಣಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ರಾಜ್ಯದ ಜನರ ಪ್ರತಿಸಿಧಿಯಾಗಿ ನಿಮ್ಮ ಮುಖ್ಯ ಮಂತ್ರಿಗಳು ಹಾಗೂ ನೀವು ಹೇಳಿದಂಥ ಮಾತುಗಳನ್ನು ನಾನು ಅಲ್ಲಗಳೆಯುವುದಿಲ್ಲ. ಈಗ ನಿಮ್ಮದೇ ಕೇಂದ್ರ ಸರಕಾರವಿದೆ. ಒಬ್ಬ ಜವಾಬ್ದಾರಿ ಇರುವಂಥ ಪ್ರಧಾನಿಯವರು ಈ ವಿವಾದವನ್ನು ಬಗೆಹರಿಸುವುದಕ್ಕೆ ಮತ್ತು ಅಲ್ಲಿ ನಡೆಯುತ್ತಿದ್ದ ಉಪವಾಸ ಸತ್ಯಾಗ್ರಹವನ್ನು ಬಗೆಹರಿಸಿ, ಅಣ್ಣತಮ್ಮಂದಿರಂತೆ ಬಗೆಹರಿಸಿಕೊಳ್ಳುವುದಕ್ಕೆ ಶುಕ್ಲರವರನ್ನು ಕಳುಹಿಸಿಕೊಟ್ಟಿದ್ದರು. ಈ ರೀತಿಯಾಗಿ ಮುಖ್ಯಮಂತ್ರಿಯವರು ಲಿಖಿತ ಮೂಲಕ ಉಸ್ತುವಾರಿ ಸಮಿತಿಯನ್ನು ರಚನೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಲೋಕ ಸಭೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಸ್.ಎಂ.ಕೃಷ್ಣ:- ಇಲ್ಲ, ಇಲ್ಲ, ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದು ಸುಳ್ಳು, ಸುಳ್ಳು, ಸುಳ್ಳು. ಏಕೆಂದರೆ ಅದರ ಬಗ್ಗೆ ನಾನು ದಾಖಲೆಗಳನ್ನು ಬೇಕಾದರೆ ಕೊಡುತ್ತೇನೆ. ಬಹುಶಃ ನಮಗೆ ಅನುಮಾನ ಬರುತ್ತದೆ, ನಮ್ಮ ಉಪಮುಖ್ಯಮಂತ್ರಿಗಳಾದ ಶ್ರೀ ಕೃಷ್ಣ ಅವರು ಹೇಳುವ ಮಾತನ್ನು ನಾವೂ ನೀವೂ ಮುಚ್ಚಿಡಬಹುದು. ಆದರೆ ಈ ನಾಡಿನ 80-85 ಕೋಟಿ ಜನರಿಗೆ ಸತ್ಯವಾದ ಸಂಗತಿಯನ್ನು ವರದಿ ಮಾಡುವಂತಹ, ನಮ್ಮ ನಿಮ್ಮ ಬಣ್ಣವನ್ನು ಬಯಲು ಮಾಡುವಂತಹ ಎಲ್ಲ ಪತ್ರಿಕೆಯವರೂ ಬರೆದಿದ್ದಾರೆ. ಅದನ್ನು ನೀವು

ನಂಬುವುದಿಲ್ಲವೇನು? ಸ್ವಾಮಿ, ನಿಮಗೆ ದಾಖಲೆ ಕೊಡುತ್ತೇನೆ. ಸನ್ಮಾನ್ಯ ವಿ.ಸಿ. ಶುಕ್ಲ ಅವರು ರಾತ್ರೋರಾತ್ರಿ ಇಲ್ಲಿಗೆ ಬಂದು ನಿಮ್ಮ ಜೊತೆ ಚರ್ಚೆ ಮಾಡಿ ಆ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಕನ್ವಿನ್ಸ್‌ಮಾಡಿ, ಉಸ್ತುವಾರಿ ಸಮಿತಿಯನ್ನು ರಚನೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆಂದು ಹೇಳಿ, ಅದರ ಆಧಾರದ ಮೇಲೆ ಆ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದರು ಅನ್ನುವುದಕ್ಕೆ ನನ್ನ ಹತ್ತಿರ ಸಾಕ್ಷ್ಯಾಧಾರಗಳಿವೆ. ಇದು ನಂಬರ್ ಒನ್. ನಂಬರ್ ಟು, ಇವತ್ತು ಲೋಕಸಭೆಯಲ್ಲಿ, ವಿ.ಸಿ. ಶುಕ್ಲ ಅವರು ಸುಳ್ಳು ಹೇಳಿರಬೇಕು ಅಥವಾ ನಿಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೋಸ್ಕರ ಈ ರಾಜ್ಯದ ಮುಖ್ಯಮಂತ್ರಿಗಳು ಸುಳು ಹೇಳಿರಬೇಕು. ಅದಕ್ಕೆ ನಾನು ಹೇಳುತ್ತೇನೆ, ನಿಮ್ಮ ಮಾತು ಸತ್ಯ ಎನ್ನುವುದಾದರೆ ಸನ್ಮಾನ್ಯ ವಿ.ಸಿ.ಶುಕ್ಲ ಒಬ್ಬ ಕೇಂದ್ರದ ಸಚಿವರಾಗಿ, ಯಾವುದೋ ಒಂದು ರಾಜ್ಯದವರನ್ನು ತೃಪ್ತಿಪಡಿಸಿಸುವುದಕ್ಕಾಗಿ ಈ ದೇಶದ 85 ಕೋಟಿ ಜನರಿಗೆ ನ್ಯಾಯ ಒದಗಿಸಿಕೊಡಬೇಕಾದ ವ್ಯಕ್ತಿ ತಪ್ಪು ಮಾಹಿತಿಯನ್ನು, ಸತ್ಯಕ್ಕೆ ಅಪಚಾರ ಮಾಡುವ ಕೆಲಸವನ್ನು ಮಾಡಿರಬೇಕಾದರೆ ಈ ಸದನದಲ್ಲಿ ಇಂತಹ ಬೇಜವಾಬ್ದಾರಿ ಮಂತ್ರಿ ಕೇಂದ್ರದಲ್ಲಿ ಸಚಿವಸ್ಥಾನದಲ್ಲಿ ಮುಂದುವರೆಯಬಾರದು ಎಂದು ರೆಸಲ್ಯೂಷನ್ ಮಾಡುತ್ತೀರಾ ನಾವು ದಾಖಲೆಗಳನ್ನು ಕೊಟ್ಟರೆ. ಅವರು ಹೇಳಿಕೆ ಕೊಟ್ಟರು ಎನ್ನುವುದಕ್ಕೆ, ನಾವು ದಾಖಲೆ ಕೊಟ್ಟರೆ ತಾವು ತಮ್ಮ ಪಕ್ಷ, ಪಂಗಡ-ಇವನ್ನು ಬಿಟ್ಟು ಅದಕ್ಕಿಂತ ಮೇಲೆದ್ದು ಈ ನಾಡಿನ ಹಿತದೃಷ್ಟಿಯಿಂದ ಆ ರೀತಿ ತೀರ್ಮಾನ ಮಾಡಲು ಸಿದ್ಧರಿದ್ದೀರಾ?ಅಧ್ಯಕ್ಷರೇ, ಸನ್ಮಾನ್ಯ ವಿ.ಸಿ.ಶುಕ್ಲ ಅವರು ಲೋಕಸಭೆಯಲ್ಲಿ ಉಸ್ತುವಾರಿ ಸಮಿತಿ ಮಾಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ ಎಂದು ಹೇಳಿ ಸ್ಟೇಟ್‌ಮೆಂಟ್ ಮಾಡಿರುವ ಕಾಪಿಯನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಎರಡನೆಯದು; ರಾಜ್ಯಸಭೆಯಲ್ಲಿ ಸಂಬಂಧಪಟ್ಟ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ಒಂದು ಸಭೆಯನ್ನು ಕರೆಯುತ್ತಿದ್ದೇನೆ ಎಂದು ಸ್ಟೇಟ್‌ಮೆಂಟ್ ಮಾಡಿದರು; ಏಕೆ? ಈ ಉಸ್ತುವಾರಿ ಸಮಿತಿಯನ್ನು ನೇಮಕ ಮಾಡುವುದಕ್ಕಾಗಿ, ಟ್ರಿಬ್ಯೂನಲ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರಫಾಲೊಅಪ್‌ಆಕ್ಷನ್ ತಾನೇ ಆ ಸ್ಟೇಟ್‌ಮೆಂಟ್. ಹಾಗಾದರೆ ರಾಜ್ಯಸಭೆಯಲ್ಲಿ ವಿ.ಸಿ.ಶುಕ್ಲ ಅವರ ಸ್ಟೇಟ್‌ಮೆಂಟನ್ನು ಡಿನ್ಯೈ ಮಾಡ್ತೀರಿ? ಸ್ವಾಮಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಅನುಕೂಲಸಿಂಧು ರಾಜಕಾರಣ ಏನು ಮಾಡಿಕೊಂಡುಹೋಗುತ್ತಿದ್ದೀರಿ ಅದರ ಪರಿಣಾಮ ಈ ನಾಡಿನ ಜನ ಕಣ್ಣೀರು ಹಾಕುತ್ತಿದ್ದಾರೆ. ಇವತ್ತು ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗಾದರೆ ಅವತ್ತು ಯಾರು ನೀರಾವರಿ ಸಚಿವರಾಗಿದ್ದರು ಎನ್ನುವುದು ಮುಖ್ಯವಾದ ಸಂಗತಿಯಲ್ಲ. ಟ್ರಿಬ್ಯೂನಲ್ ತನಗೆ ಇಂಟರಿಂ ಆರ್ಡರ್ ಕೊಡಲು ಅಧಿಕಾರ ಇಲ್ಲ ಎಂದು ಹೇಳಿತೋ, ಯಾವ ಟ್ರಿಬ್ಯೂನಲ್ ಇಂಟರಿಂ ಆರ್ಡರ್ ಕೊಡಬಾರದು ಎಂದು ನಾವು ಹೋರಾಟ ಮಾಡಿಕೊಂಡು ಬಂದೆವೋ, ತಮಿಳುನಾಡಿನ ಏಜೆಂಟರಂತೆ, ಕರ್ನಾಟಕ ರಾಜ್ಯದ ಹಿತವನ್ನು ಮರೆತು ಸುಪ್ರೀಂ ಕೋರ್ಟಿನಲ್ಲಿ ಮೆರಿಟ್ ಆಧಾರದ ಮೇಲೆ ಅದು ಇಂಟರಿಂ ಆರ್ಡರನ್ನು ಕೊಡಬಹುದು ಎಂದು ನಿಮ್ಮ ಕೌನ್ಸಿಲ್ ಲಿಖಿತ ಮೂಲಕ ಕೊಡಬೇಕಾದರೆ ನೀವು ಕಣ್ಮುಚ್ಚಿಕೊಂಡು ಕುಳಿತಿದ್ದಿರೇನು? ಜನರ ಬಗ್ಗೆ ಕಳಕಳಿ ಇರುವಂತಹ, ಯಾವುದಾದರೂ ಜವಾಬ್ದಾರಿ ಇರುವ ಸರ್ಕಾರ, ಯಾರೇ ಇರಬಹುದು, ಆ ಸಮಯದಲ್ಲಿ, ಯಾರು ಮುಖ್ಯಮಂತ್ರಿ ಇದ್ದರು, ಯಾರು ನೀರಾವರಿ ಸಚಿವರಿದ್ದರು ಇದು ಮುಖ್ಯವಾದ ಸಂಗತಿಯಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನಿಮ್ಮ ನಡವಳಿಕೆಯಿಂದ, ನಿಮ್ಮ ಬೇಜಾವಾಬ್ದಾರಿಯಿಂದ ಟ್ರಿಬ್ಯೂನಲ್ ಮುಂದೆ ನಮಗೆ ಯಾವರೀತಿ

ಅನ್ಯಾಯವಾಗುತ್ತಿದೆ ಎಂದು ಅಂಕಿಅಂಶಗಳನ್ನು ಇಡುವುದಕ್ಕೆ ವಿಫಲವಾದ ಪರಿಣಾಮ ಇವತ್ತು ಸುಪ್ರೀಂ ಕೋರ್ಟ್ ನಮಗೆ ಛೀಮಾರಿ ಹಾಕುವಂತಹ ಪರಿಸ್ಥಿತಿ ಬಂತು, ನಾವೇನೋ ಟ್ರಿಬ್ಯೂನಲ್ ಮುಂದೆ, ಸುಪ್ರೀಂ ಕೋರ್ಟ್ ಮುಂದೆ ವಾದ ಮಾಡುವುದಕ್ಕೋಸ್ಕರ ಅಡ್ವೋಕೇಟ್ಸನ್ನು ಇಟ್ಟಿದ್ದೇವೆ ಎಷ್ಟು ಕೋಟಿ ಖರ್ಚು ಮಾಡಿದ್ದಾರೆ, ಅದರ ವಿವರವನ್ನು ಕೊಡಿ ಸ್ವಾಮಿ. ನಿಮ್ಮ ಅಡ್ವೋಕೇಟ್ಸ್ ಏನು ಮಾಡುತ್ತಿದ್ದರು? ಏಕೆ ಅಲ್ಲಿ ಹೋಗಲಿಲ್ಲ, ಏಕೆ ಅಂಕಿಅಂಶ ಕೊಡಲಿ. ಅಕಸ್ಮಾತ್ ನೀವೂ ಹೇಳದೆ ನಮ್ಮ ಅಡ್ವೋಕೇಟ್ಸ್ ಮೆರಿಟ್ ಆಧಾರದ ಮೇಲೆ ಟ್ರಿಬ್ಯೂನಲ್ ಇಂಟೆರಿಂ ಆರ್ಡರ್ ಕೊಡಬಹುದು ಎಂದು ಹೇಳಿದರೇನು? ಆ ರೀತಿ ನಮ್ಮ ಅಡ್ವೋಕೇಟ್ಸನ್ನು ತಮಿಳುನಾಡಿನ ಪರವಾಗಿ ಕೆಲಸ ಮಾಡಲು ನೀವು ಕಳಿಸಿಕೊಟ್ಟಿದ್ದೀರೇನು? ಅಧ್ಯಕ್ಷರೇ, ಕಣ್ಣಲ್ಲಿ ನೀರು ಬರುತ್ತದೆ. ಇವತ್ತು ನಾವಿಲ್ಲಿ ನಮ್ಮ ರಾಜಕೀಯದ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕಾಗಿ ಅಲ್ಲಗಳೆಯಬಹುದು. ಅಥವಾ ಕೇಂದ್ರದಲ್ಲಿ ನಿಮ್ಮದೇಸರ್ಕಾರ ಇದೆ ಎಂದು ಅವರ ತಪ್ಪನ್ನು ಮುಚ್ಚಿಹಾಕುವುದಕ್ಕೆ ನೀವು ಬೇಕಾದ್ದನ್ನು ಹೇಳಬಹುದು ಅಥವಾ ಇಷ್ಟು ಅಜೀರ್ಣವಾಗುವಂತಹ ಬಹುಮತ ಇದೆಯೆಂದು ಹೇಳಿ ನೀವು ಹೇಳಿದ್ದೇ ಸರಿ ಎಂದು ನೂರು ಬಾರಿ ಸಾಬೀತು ಮಾಡುವುದಕ್ಕೆ ಹೊರಡಬಹುದು. ಆದರೆ ನಾನು ಕೇಳುತ್ತೇನೆ, ಇವತ್ತು ಏನು ಉಳಿದಿದೆ ಕಾವೇರಿ ಜಲವಾದದಲ್ಲಿ? ಇನ್ನೇನು ಉಳಿದಿದೆ? ಟ್ರಿಬ್ಯೂನಲ್ ಇಂಟೆರಿಂ ಆರ್ಡರ್ ಕೊಟ್ಟಾಯಿತು, ಸುಪ್ರೀಂ ಕೋರ್ಟ್‌ನಿಮಗೆ ಛೀಮಾರಿ ಹಾಕಿಯಾಯಿತು, ನಮ್ಮ ತಪ್ಪಿನಿಂದ, ಇವತ್ತು ಯಾವುದೇ ಅಂಕಿಅಂಶಗಳನ್ನು ನಾವು ಕೊಡದೇ ಇದ್ದುದನ್ನು ಬೇಜವಾಬ್ದಾರಿ ಎಂದು ಅವರು ಹೇಳಿಯಾಯಿತು, ಇವತ್ತು ಕೇಂದ್ರಸರ್ಕಾರ ನಮ್ಮ ವಿರುದ್ಧ ತಿರುಗಿಬಿದ್ದಿದೆ. ಟ್ರಿಬ್ಯುನಲ್ ನಮ್ಮ ವಿರುದ್ಧ ತಿರುಗಿಬಿದ್ದಿದೆ. ಸುಪ್ರೀಂ ಕೋರ್ಟ್ ನಮ್ಮ ನಡವಳಿಕೆಯಿಂದ ನಮ್ಮದು ಯಾವುದೇ ವಾದವನ್ನು ಕೇಳುವುದಕ್ಕೆ ಸಿದ್ಧವಿಲ್ಲದೆ ಇವತ್ತು ತೀರ್ಮಾನವನ್ನು ಕೊಡುವಂತಹ ಮಟ್ಟಕ್ಕೆ ಬಂದಿದೆ. ಈ ರೀತಿ ಎಲ್ಲಾ ಹಂತದಲ್ಲಿ ಈ ನಾಡಿನ ರೈತ ಸಮೂಹಕ್ಕೆ ಅನ್ಯಾಯವಾಗುವಂತೆ ನಡೆದುಕೊಂಡಿದ್ದೀರಿ. ನೀವು ಏನೋ ಹೇಳಬಹುದು. ಇಲ್ಲಿ ನಾವು ಕುಳಿತುಕೊಂಡು ಸ್ವಾಮಿ ಯಾವ ಟ್ರಿಬ್ಯುನಲ್ ಕೊಟ್ಟಿರುವಂತಹ ಇಂಟೆರಿಂ ಆರ್ಡರ್ ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲವೋ, ಅದನ್ನು ಆಜ್ಞೆಯೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲವೋ, ನಮ್ಮ ಬೇಸಿನ್‌ನಲ್ಲಿ ನೀರು ಇಲ್ಲದೆ ಇರುವಾಗ ಎಲ್ಲಿಂದ ಕೊಡೋಣ. ನಾವು ಜಲಾನಯನದಲ್ಲಿ ಪ್ರಾಜೆಕ್ಟನ್ನು ಕಟ್ಟಿ ನೀರನ್ನು ತಡೆದು ಅವರಿಗೆ ಕೊಟ್ಟು ನಮ್ಮ ಬೆಳೆ ಹಾಳು ಮಾಡಿಕೊಳ್ಳುವುದಕ್ಕೆ ಇದ್ದೇವೆಯೇ ಎಂದು ವಾದ ಮಾಡುವುದಕ್ಕೆ ಚೆನ್ನಾಗಿದೆ. ಹಾಗೆ ಮುಂದೆ 10-20 ವರ್ಷಗಳಾದ ಮೇಲೆ ಸುಪ್ರೀಂ ಕೋರ್ಟಿನ ಆರ್ಡರನ್ನು ಕೈಯಲ್ಲಿ ಇಟ್ಟುಕೊಂಡು ನಾಳೆ ಆ ಜನ ನಮ್ಮ ಹಕ್ಕು ಬೇಕೆಂದು ಕೇಳಿದಾಗ ಏನು ಹೇಳುತ್ತೀರಿ ಸ್ವಾಮಿ. ಇನ್ನೊಂದು ವಿಷಯವನ್ನು ನಾನು ಹೇಳುತ್ತೇನೆ. ಇದನ್ನು ಹಿರಿಯ ಉಪಮುಖ್ಯಮಂತ್ರಿಗಳಾದ ಮಾನ್ಯ ಕೃಷ್ಣಾರವರು ಡಿನೈ ಮಾಡುತ್ತಾರೆಯೇ? ನಿಮ್ಮ ಸರ್ಕಾರ ನ್ಯಾಯ ಮಂಡಲಿಯ ಮುಂದೆ ಮಧ್ಯಂತರ ಆಜ್ಞೆಯನ್ನು ಪೂರ್ಣವಾಗಿ ಜಾರಿಗೊಳಿಸಿರುವುದಾಗಿ ಕರ್ನಾಟಕ ಕಾವೇರಿ ನ್ಯಾಯ ಮಂಡಳಿಗೆ ನೀವು ತಿಳಿಸಿದ್ದೀರಿ. ಯಾವಾಗ? ಅಂದರೆ ''ಮಧ್ಯಂತರ ಆಜ್ಞೆಯ ಅನ್ವಯ ನೀರು ಹಂಚಿಕೆಯ ಪ್ರಮಾಣವನ್ನು ನಿಗದಿ ಮಾಡಿ ಪ್ರಸಕ್ತ ವರ್ಷದ ಏಪ್ರಿಲ್ ತಿಂಗಳಿನಲ್ಲಿ ನ್ಯಾಯ ಮಂಡಳಿ ಸೂಚನೆ ನೀಡಿತ್ತು, ಅದರ ಅನುಸಾರ ನೀರು ಬಿಡುಗಡೆ ಮಾಡಲಾಗಿದೆ. ಜುಲೈ 15ರವರೆಗಿನ ಲೆಕ್ಕದಂತೆ ಕರ್ನಾಟಕವು ತಮಿಳುನಾಡಿಗೆ ಬಿಡುಗಡೆ ಮಾಡಲು ಬಾಕಿ ಉಳಿದಿದ್ದ ಕೇವಲ 3.74 ಟಿ.ಎಂ.ಸಿ ನೀರು ಮುಂಬರುವ ವಾರಗಳಲ್ಲಿ ಬಾಕಿ

ಇರುವ ನೀರನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು'' ಎಂದು ನಿಮ್ಮ ಸರ್ಕಾರದಿಂದ ಟ್ರಿಬ್ಯುನಲ್‌ಗೆ ಬರವಣಿಗೆಯನ್ನು ಕಳುಹಿಸಿಕೊಟ್ಟಿಲ್ಲವೇ? ಅದರ ದಾಖಲೆಯನ್ನು ನಾನು ಕೊಡಲೇ, ಕೊಟ್ಟರೆ ರಾಜೀನಾಮೆಯನ್ನು ಕೊಡುವುದಕ್ಕೆ ನೀವು ಸಿದ್ಧರಾಗುತ್ತೀರಾ? ಅಂದರೆ ಇನ್‌ಡೈರೆಕ್ಟ್ಲಿ ಟ್ರಿಬ್ಯುನಲ್ ಇಂಟಿರಿಂ ಆರ್ಡರನ್ನು ನೀವು ಇಂಪ್ಲಿಮೆಂಟ್ ಮಾಡುತ್ತಿದ್ದೀರಿ. ಜನರಿಗೆ ತೋರಿಸುವುದಕ್ಕೋಸ್ಕರ ನಾವು ಇದನ್ನು ಹೇಳಿಲ್ಲ; ನಾವು ಇಂಪ್ಲಿಮೆಂಟ್ ಮಾಡುತ್ತಿಲ್ಲ, ಇದು ಸಾಧ್ಯವಿಲ್ಲ, ಎಂಬ ಮಾತನ್ನು ಹೇಳುತ್ತಾ, ಪ್ರತಿಯೊಂದು ಸಂದರ್ಭದಲ್ಲಿ ಈ ರಾಜ್ಯದ ಜನರಿಗೆ ದ್ರೋಹ ಮಾಡುತ್ತಿದ್ದೀರಿ. ಅದು ದಾಖಲೆಗೆ ಹೋಗಲಿ. ಎರಡು ಸಂಗತಿಯನ್ನು ನಾನು ನಿಮಗೆ ಹೇಳುತ್ತೇನೆ. ಈ ರೀತಿ ಇಲ್ಲಿಂದ ಪತ್ರ ಹೋಗಿದ್ದು ನಿಜವಾಗಿದ್ದರೆ, ಈ ರೀತಿ ನಿಮ್ಮ ವಿ.ಸಿ. ಶುಕ್ಲರವರು ಲೋಕಸಭೆಯೊಳಗೆ, ರಾಜ್ಯ ಸಭೆಯೊಳಗೆ, ಉಸ್ತುವಾರಿ ಸಮಿತಿಯನ್ನು ರಚನೆ ಮಾಡುವುದಕ್ಕೋಸ್ಕರ ರಾಜ್ಯ ಸರ್ಕಾರ ಒಪ್ಪಿಕೊಂಡಿದೆ ಎಂದು ಹೇಳಿದಂತಹ ಸ್ಟೇಟ್‌ಮೆಂಟ್‌ನ ಅಧಿಕೃತ ದಾಖಲೆಗಳನ್ನು ನಾನು ನಿಮಗೆ ಕೊಟ್ಟರೆ, ಇಲ್ಲಿ ಕೊನೆಯ ಪಕ್ಷ ಈ ಬೇಜವಾಬ್ದಾರಿ ಸಾಬೀತಾದರೆ ಅಂತಹ ಮಂತ್ರಿಯನ್ನು ವಜಾ ಮಾಡಬೇಕೆಂದು ನಿರ್ಣಯ ಮಾಡುವುದಕ್ಕೆ ತಾವು ಮುಂದೆ ಬರುತ್ತೀರಾ? ಇವತ್ತು ಬಹಳ ಪ್ರಮುಖವಾದಂತಹ ಸಂಗತಿ ಇದಲ್ಲ. ನಾನು ಮಾತನಾಡಬೇಕಾದರೆ ಒಂದು ಕ್ಷಣ, ತಮಿಳುನಾಡು-ಕರ್ನಾಟಕ ಎನ್ನುವುದನ್ನು ಮರೆತು ಬಿಡೋಣ. ಹಿಂದೆ ಇದೆಲ್ಲ ಒಂದೇ ರಾಜ್ಯ ಆಗಿತ್ತು. ಆಗ ಯಾವರೀತಿ ನಾವು ವ್ಯವಹರಿಸುತ್ತಿದ್ದೆವು. ಹಿಂದೆ ಇದ್ದವರು ಅಗತ್ಯವಿದ್ದಾಗ ಸ್ವಲ್ಪ ನೀರನ್ನು ಬಿಟ್ಟು ಒಂದು ಸೌಹಾರ್ದಯುತವಾದಂತಹ ವಾತಾವರಣವನ್ನು ಮಾಡುತ್ತಿದ್ದರೋ ಇಲ್ಲವೋ? ಏಕೆ ಈ ಸಮಸ್ಯೆ ಉದ್ಭವವಾಯಿತು, ಎನ್ನುವ ಬಗ್ಗೆ ಮೂಲ ಯೋಚನೆ ಮಾಡೋಣ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಯಾಗಿದ್ದಾಗ ಮಾಡಿದಂತಹ ಸ್ಟೇಟ್‌ಮೆಂಟನ್ನು ನಿಮಗೆ ನಾನು ಕೊಡುತ್ತೇನೆ. ಅವರು ಮುಖ್ಯಮಂತ್ರಿಗಳಾಗಿದ್ದಾಗ ಹೇಳಿದಂತಹ ಮಾತು. ಮಾಜಿ ಮುಖ್ಯಮಂತ್ರಿಗಳು ಇದೇ ಸದನದ ಸದಸ್ಯರಾಗಿ ಹೇಳಿದಂತಹ ಮಾತು. ಏನು ಅದು? ಏತಕ್ಕೆ ಈ ಉದ್ಭವವಾಯಿತು? ಕಾವೇರಿ ಸಮಸ್ಯೆ ಬಂದಾಗ, ತಮಿಳುನಾಡಿಗೆ ನೀರು ಬೇಕು ಅಂದಾಗ, ನಮ್ಮಲ್ಲಿ ಜಲಾಶಯ ತುಂಬಿದ್ದಾಗ, ಯಾವುದೇ ಭೇದ ಭಾವನೆಯನ್ನು ಮಾಡದೆ ನೀರನ್ನು ಬಿಟ್ಟುಕೊಂಡು ಬಂದಂತಹ ಸಂಪ್ರದಾಯ ನಮ್ಮಲ್ಲಿ ಇತ್ತು. ಒಂದು ಸಂದರ್ಭದಲ್ಲಿ 5 ಟಿ.ಎಂ.ಸಿ ನೀರನ್ನು ಕೇಳಿದಾಗ ಒಂದು ಹನಿ ನೀರನ್ನು ಕೊಡುವುದಿಲ್ಲ ಎಂದು ಹೇಳಿ, ಆ ಟ್ರಿಬ್ಯುನಲ್ ಮುಂದೆ ವಾದ ಮಾಡುವುದಕ್ಕೆ ಹೋಗಿ ಕೈಕಟ್ಟಿಸಿಕೊಂಡು ಟ್ರಿಬ್ಯುನಲ್ ಇಂಟಿರಿಂ ಆರ್ಡರ್ ಬರುವುದಕ್ಕೆ ಕಾರಣಕರ್ತರುಹಿಂದಿನ ನಿಮ್ಮ ಸರ್ಕಾರ. ನಿಮ್ಮ ಹಿಂದಿನ ಮುಖ್ಯ ಮಂತ್ರಿಗಳು ಹೇಳಿದ ಮಾತು. ಇದನ್ನು ನಾನು ಹೇಳುತ್ತಿಲ್ಲ. ದಾಖಲೆಗಳನ್ನು ಕೊಡುತ್ತೇವೆ. ಅವತ್ತಿನ ಸೌಹಾರ್ದಯುತವಾದಂತಹ ವಾತಾವರಣ ಮೂಡುವುದಕ್ಕೆ ಅವಕಾಶವಾಗಿದ್ದರೆ 5 ಟಿ.ಎಂ.ಸಿ ಅಗತ್ಯವಾದಂತಹ ನೀರನ್ನು ಕೊಟ್ಟಿದ್ದಿದ್ದರೆ ಇವತ್ತು ಈ ಸಮಸ್ಯೆ ಉಲ್ಬಣಗೊಳ್ಳುತ್ತಿರಲಿಲ್ಲ. ಇವತ್ತು ದೇಶದಲ್ಲಿ ಏನಾಗಿದೆ ಅಂದರೆ, ಕಾವೇರಿ ಜಲ ವಿವಾದದಲ್ಲಿ ಕರ್ನಾಟಕ ರಾಜ್ಯ ನ್ಯಾಯವಾದಂತಹ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ, ಸಮರ್ಪಕವಾಗಿ ನೀರನ್ನು ಬಿಡುತ್ತಿಲ್ಲ, ತಮಿಳುನಾಡಿಗೆ, ಇತರೆ ರಾಜ್ಯಕ್ಕೆ ದ್ರೋಹ ಮಾಡುತ್ತಿದೆ ಅನ್ನುವಂತಹ ಭಾವನೆಯನ್ನು ಇಡಿ ದೇಶದಲ್ಲಿ ಮೂಡುವುದಕ್ಕೆ ನಿಮ್ಮ ಬೇಜವಾಬ್ದಾರಿ ಸರ್ಕಾರ ಕಾರಣ. ನಾನು ಹೇಳುತ್ತಿಲ್ಲ. ನಿಮ್ಮ ವರಿಷ್ಠರು ನೀವು ದೆಹಲಿಗೆ ಹೋದಾಗ

ನಿಮ್ಮ ನಡವಳಿಕೆ ಬಗ್ಗೆ, ವರ್ತನೆ ಬಗ್ಗೆ, ತೀರ್ಮಾನಗಳೇನು ಅನ್ನುವ ಬಗ್ಗೆ ಛೀಮಾರಿ ಹಾಕಿ ಕಳುಹಿಸಿದ್ದಾರೆ. ಹಾಗಾದರೆ ಈಗ ಏನು ಮಾಡಬೇಕು? ಸ್ವಾಮಿ ನಾನು ನಿಮ್ಮನ್ನು ಕೇಳುತ್ತೇನೆ. ಇವತ್ತು ಈ ರಾಜಕಾರಣದಲ್ಲಿ ದೊಂಬರಾಟ ಏತಕ್ಕೆ? ಕೇಂದ್ರದಲ್ಲಿ ಯಾರೇ ಪ್ರಧಾನಿ ಇರಲಿ, ಯಾವುದೇ ಸರ್ಕಾರ ಇರಲಿ, ಇಡೀ ದೇಶದ ಜನರ ಒಂದು ಮುಖವಾಣಿಯಾಗಿ ಎರಡು ಕಣ್ಣು ತಮ್ಮದೇ ಎನ್ನುವ ರೀತಿಯಲ್ಲಿ ನ್ಯಾಯವನ್ನುಒದಗಿಸಿಕೊಡುವಂತಹ ಪ್ರಾಮಾಣಿಕ ಪ್ರಯತ್ನ ನಡೆಯಿತೇ? ಆ ರೀತಿ ಕರೆದು ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಹಿಂದಿನ ಮಾಜಿ ಮುಖ್ಯಮಂತ್ರಿಗಳು, ಇಲ್ಲಿ ಮುಖ್ಯಮಂತ್ರಿಯಾಗಿದ್ದಂಥವರು ನೀವು ಏನು ಪ್ರಾಮಾಣಿಕ ಪ್ರಯತ್ನ ಮಾಡಿದಿರಿ?

12.30ಪಿ.ಎಂ.

ಪ್ರಧಾನಿಯವರನ್ನು ಭೇಟಿ ಮಾಡಿದ್ದೀರಾ? ಪ್ರಧಾನಿಯವರನ್ನು ಕನ್‌ವಿನ್ಸ್ ಮಾಡುವುದರಲ್ಲಿ ಯಶಸ್ವಿಯಾದಿರಾ? ಟ್ರಿಬ್ಯುನಲ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ, ವಾರಕ್ಕೆ ಇಷ್ಟಿಷ್ಟು ನೀರು ಕೊಡಬೇಕೆಂದರೆ ಮಳೆ ಬಾರದಿದ್ದರೆ ಎಲ್ಲಿಂದ ನೀರನ್ನು ತಂದುಕೊಡೋಣ ಎಂದು ಕನ್‌ವಿನ್ಸ್ ಮಾಡುವುದರಲ್ಲಿ ವಿಫಲರಾಗಿದ್ದೀರಿ. ಹಿಂದೆ ವೀರೇಂದ್ರ ಪಾಟೀಲರು ಹೇಳಿದ್ದು ನನಗೆ ಜ್ಞಾಪಕ ಇದೆ. ಯಡಿಯೂರಪ್ಪನವರೆ, ಇಲ್ಲಿ ಏತಕ್ಕೆ ಧರಣಿ ಕುಳಿತುಕೊಳ್ಳುತ್ತೀರಿ, ಅಲ್ಲಿ ವಿ.ಪಿ.ಸಿಂಗ್ ಇದ್ದಾರೆ, ನಿಮ್ಮ ಸರ್ಕಾರ ಅವರಿಗೆ ಬೆಂಬಲ ಕೊಡುತ್ತಿದೆ, ಅಲ್ಲಿ ಹೋಗಿ ಧರಣಿ ಕುಳಿತುಕೊಳ್ಳಿ ಎಂದು ವೀರೇಂದ್ರ ಪಾಟೀಲರು ಹೇಳಿದ್ದರು, ಚಂದ್ರೇಗೌಡರೆ. ಈಗ ನಾನು ನಿಮ್ಮನ್ನು ಕೇಳುತ್ತೇನೆ, ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇರತಕ್ಕ ಸಂದರ್ಭದಲ್ಲಿ ಇವತ್ತು ಟ್ರಿಬ್ಯುನಲ್‌ಗೆ ಕನ್‌ವಿನ್ಸ್ ಮಾಡುವ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ಸುಪ್ರೀಂ ಕೋರ್ಟ್‌ಗೆ ಕನ್‌ವಿನ್ಸ್ ಮಾಡುವ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ಪ್ರಧಾನಿಯರನ್ನು, ಕೇಂದ್ರ ಸರ್ಕಾರವನ್ನುನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ಕನ್‌ವಿನ್ಸ್ ಮಾಡುವುದರಲ್ಲಿ ವಿಫಲರಾಗಿದ್ದೀರಿ ಎನ್ನುವುದಾದರೆ ನಿಮ್ಮ ಹತ್ತಿರ ಅಂಕಿಅಂಶಗಳು ಇಲ್ಲವೋ ಅಥವಾ ಅದನ್ನು ಪ್ರಾಮಾಣಿಕವಾಗಿ ಬಗೆಹರಿಸುವುದಕ್ಕೆ ಬಿಡುವು ಇಲ್ಲವೋ? ನಿಮಗೆ ಸ್ಥಾನಮಾನ, ಖುರ್ಚಿ ಇದೇ ಮುಖ್ಯವೋ? ಇದನ್ನು ಈ ನಾಡಿನ ಜನರು ಪ್ರಶ್ನೆ ಮಾಡುತ್ತಿದ್ದಾರೆ, ಎಡಿಯೂರಪ್ಪ ಅಲ್ಲ. ನೀವು 3 ದಿವಸ ಚರ್ಚೆ ಮಾಡಿದರೂ ಸಹ ಏನು ಅನ್ಯಾಯ ಆಗಬೇಕೋ ಅದು ಆಗಿದೆ. ಪತ್ರಿಕೆಗಳಲ್ಲಿ ಕಾವೇರಿ ಜಲ ವಿವಾದದ ಬಗ್ಗೆ ವಿಶೇಷ ಅಧಿವೇಶನ ಕರೆದರು, ಚರ್ಚೆಯಾಯಿತು ಎಂದು ಬಂದರೆ ಅಷ್ಟರಲ್ಲೇ ನಮ್ಮ ರಾಜ್ಯದ ರೈತರು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ತಾವು ಮಂಡ್ಯದ ಸಭೆಯಲ್ಲಿ ಕುಳಿತಿದ್ದೀರಿ, ನಾನು ನಿಮ್ಮ ಜೊತೆ ಬಂದಿದ್ದೆ. ವಿರೋಧ ಪಕ್ಷದವರ ಪರವಾಗಿ ನಾನು ನಿಮ್ಮನ್ನು ಕೇಳುತ್ತೇನೆ. ಯಾವುದಾದರೂ ಒಂದು ಸಂದರ್ಭದಲ್ಲಿ ಈ ಕಾವೇರಿ ಜಲ ವಿವಾದದಲ್ಲಿ ಈ ಕಡೆ ಕುಳಿತಿರತಕ್ಕವರು ರಾಜಕಾರಣ ಮಾಡಿಲ್ಲವೇ? ಎಲ್ಲಾ ರೀತಿಯ ಸಹಕಾರ ಕೊಟ್ಟೆವು. ಅಗತ್ಯ ಬಿದ್ದರೆ ಲೋಕಸಭಾ ಸದಸ್ಯರು ರಾಜೀನಾಮೆ ಕೊಡೋಣ, ಎಲ್ಲ ಎಂ.ಎಲ್.ಎ.ಗಳು ರಾಜೀನಾಮೆ ಕೊಡೋಣ. ಯಾವ ಕಾರಣಕ್ಕೂ ಸಹ ಇಂಟಿರಿಂ ಆರ್ಡರ್ ಇಂಪ್ಲಿಮೆಂಟ್ ಮಾಡುವುದಕ್ಕೆ ಬಿಡಬೇಡಿ; ಟ್ರಿಬ್ಯೂನಲ್ ಮುಂದೆ ಹೋಗಬೇಡಿ; ಇದನ್ನು ಹೇಳಿಕೊಂಡು ಬಂದರೆ ಯಾವ ಸಂದರ್ಭದಲ್ಲೂನಮ್ಮ ಮಾತನ್ನು ಕೇಳಲಿಲ್ಲ. ನೇರವಾಗಿ ಅಂಕಿಅಂಶಗಳನ್ನು ಕೊಟ್ಟು ನಮಗೆ ಯಾವ ರೀತಿ ಅನ್ಯಾಯವಾಗಿದೆ ಎಂಬುದನ್ನು ತಿಳಿಸುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಈಗಿರುವ ಒಂದೇ ಮಾರ್ಗ ಅಂದರೆ, ಯಾವ

ಕಾರಣಕ್ಕೂ ಸಹ ರಾಷ್ಟ್ರೀಯ ಜಲ ನೀತಿ ಇಡೀ ದೇಶಕ್ಕೆ ಅನ್ವಯವಾಗುವ ರೀತಿಯಲ್ಲಿ ಕೇಂದ್ರ ಸರ್ಕಾರ ಅನುಷ್ಠಾನ ಮಾಡುವವರೆಗೆ ಈ ಟ್ರಿಬ್ಯುನಲ್ ಅನ್ನು ಬಾಯ್‌ಕಾಟ್ ಮಾಡಿ. ಈ ಟ್ರಿಬ್ಯುನಲ್ ಕೆಲಸ ಮಾಡಬಾರದೆಂಬ ಆದೇಶ ಕೊಡುವುದಕ್ಕೆ ನಿಮ್ಮ ಕೇಂದ್ರದ ವರಿಷ್ಠರ ಮನಸ್ಸನ್ನು ಒಲಿಸುವ ಪ್ರಯತ್ನ ಮಾಡಿ. ಅಲ್ಲಿಯವರೆಗೆ ಏನು ಮಾಡಬೇಕೆಂದರೆ, ಇವತ್ತು ಜಲಾಶಯದಲ್ಲಿ ಎಷ್ಟು ನೀರಿದೆ, ಎಷ್ಟು ಮಳೆ ಆಗಿದೆ ಎಂಬುದನ್ನು ನೋಡಿ ಅದರ ಆಧಾರದ ಮೇಲೆ ನಾವು ಕಲ್ಟಿವೇಟ್ ಮಾಡಿರುವಂತಹ ಜಮೀನಿಗೆ ನೀರನ್ನು ಉಪಯೋಗ ಮಾಡಿಕೊಂಡು ಉಳಿದ ನೀರನ್ನು ಬಿಡುವುದಕ್ಕೆ ನಮ್ಮ ಅಭ್ಯಂತರವಿಲ್ಲ- ಈ ಮಾತನ್ನು ನೇರವಾಗಿ ಹೇಳಬೇಕಾಗುತ್ತದೆ. ಇವತ್ತು ಟ್ರಿಬ್ಯುನಲ್ ಮುಂದೆ ಯಾರಿದ್ದಾರೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್? ಜಲಾಶಯದಲ್ಲಿ ಎಷ್ಟು ನೀರಿಗೆ, ಎಷ್ಟು ಬಿಡಬೇಕೆಂಬುದು ಅವರಿಗೆ ಏನು ಗೊತ್ತಿದೆ? ಅದಕ್ಕೆ ಆಧಾರವೇನು? ಇವತ್ತು ಟ್ರಿಬ್ಯುನಲ್‌ಗೆ ಹೇಳಿ, ಇಂಟರ್‌ನ್ಯಾಷನಲ್ ಎಕ್ಸ್‌ಪರ್ಟ್ಸ್? ಇನ್ ಹೈಡ್ರಾಲಜಿ ಅಂಡ್ ಹೈಡ್ರಾಲಿಕ್ಸ್ ಅವರ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಒಬ್ಬರನ್ನು ನೇಮಕ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಿ. ಟ್ರಿಬ್ಯುನಲ್‌ಗೆ ಅವರು ಬರಲಿ, ಬಂದು ಸ್ಟಡಿ ಮಾಡಲಿ. ಆವರೇಜ್ ಎಷ್ಟೆಷ್ಟು ನೀರು ಬಂದಿದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿ. ಅದರ ಆಧಾರದ ಮೇಲೆ ಅವರು ನಿಶ್ಚಯ ಮಾಡಿದ್ದಕ್ಕೆ ನಾವು ಒಪ್ಪಿಕೊಳ್ಳುತ್ತೇವೆಂಬ ಪ್ರಾಮಾಣಿಕ ಪ್ರಯತ್ನ ಮಾಡಿ. ಆ ರೀತಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ, ಟ್ರಿಬ್ಯುನಲ್ ಅನ್ನು ತಾತ್ಕಾಲಿಕವಾಗಿ ಬದಿಗೊತ್ತುವಂಥ ವ್ಯವಸ್ಥೆ ಮಾಡುವುದರ ಬಗ್ಗೆ ಯೋಚನೆ ಮಾಡಿ. ಇನ್ನೊಂದು ಪ್ರಮುಖ ಸಂಗತಿ ಅಂದರೆ, ಟ್ರಿಬ್ಯುನಲ್ ಮುಂದೆ ತಮಿಳ್ನಾಡಿನವರು ಅಂಕಿಅಂಶಗಳನ್ನು ತಿರುಚಿ ಹೇಳುತ್ತಿರತಕ್ಕದ್ದು ನಡೆದಿದೆ. ಯಾವುದೇ ಸಂದರ್ಭದಲ್ಲಿ ಅವರು ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ನೀರಾವರಿ ಆಗಿದೆ ಎಂದು ಹೇಳುವುದಿಲ್ಲ. ಸರಿಯಾದ ಅಂಕಿಅಂಶಗಳನ್ನು ಕೊಡುತ್ತಿಲ್ಲ. ಅದಕ್ಕೆ ನಾನು ತಮ್ಮಲ್ಲಿ ಒತ್ತಾಯ ಮಾಡುವುದು ಏನೆಂದರೆ, ಒಬ್ಬ ಇಂಟರ್‌ನ್ಯಾಷನಲ್ ಎಕ್ಸ್‌ಪರ್ಟ್ ಅನ್ನು ಇಲ್ಲಿ ತರುವಂಥ ಪ್ರಯತ್ನ ಮಾಡಿ. ಪ್ರತಿಯೊಂದು ರಾಜ್ಯದಲ್ಲೂ ಸಹ ಭೂಮಿಗೆ ಅನುಗುಣವಾಗಿ ನೀರನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಒಂದು ಟಿ.ಎಂ.ಸಿ. ನೀರಿನಲ್ಲಿ ಎಷ್ಟು ಬೆಳೆ ಬೆಳೆಯಬಹುದು ಆ ಭೂಮಿಗನುಗುಣವಾಗಿ ಮತ್ತು ನಮ್ಮ ರಾಜ್ಯದ ಭೂಮಿಗನುಗುಣವಾಗಿ ಎಂಬುದರ ಆಧಾರದ ಮೇಲೆ ಅವರಿಗೆ ಎಷ್ಟು ಟಿ.ಎಂ.ಸಿ. ನೀರಿನ ಅಗತ್ಯ ಇದೆ, ನಮಗೆ ಎಷ್ಟು ಟಿ.ಎಂ.ಸಿ. ನೀರಿನ ಅಗತ್ಯ ಇದೆ ಎಂಬುದನ್ನು ಯೋಚನೆ ಮಾಡುವುದಕ್ಕೆ ಆ ಒಂದು ಇಂಟರ್‌ನ್ಯಾಷನಲ್ ಎಕ್ಸ್‌ಪರ್ಟ್ಸ್ ಅನ್ನು ನೇಮಕ ಮಾಡುವುದಕ್ಕೆ ವಿಶೇಷ ಗಮನ ಕೊಡುತ್ತೀರಾ? ಆ ಬಗ್ಗೆ ನನಗೆ ಗೊತ್ತಿಲ್ಲ; ನೀವು ಅದರಲ್ಲಿ ಸಾಕಷ್ಟು ತಜ್ಞರಿದ್ದೀರಿ. ಇಂಟರ್‌ನ್ಯಾಷನಲ್ ನಾರ್ಮ್ಸ್ ಪ್ರಕಾರ ಒಂದು ಟಿ.ಎಂ.ಸಿ.ಗೆ 16 ಸಾವಿರ ಎಕರೆ ಜಮೀನನ್ನು ಕಲ್ಟಿವೇಟ್ ಮಾಡಬಹುದೆಂದು ಇದೆ. ಆದರೆ ಇವತ್ತು ತಮಿಳ್ನಾಡಿನವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಕೇವಲ 6 ಸಾವಿರ ಎಕರೆಗಳಿಗೆ ಒಂದು ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬಹುದೆಂದು ಹೇಳುತ್ತಿದ್ದಾರೆ. ಅವರು ಆ ರೀತಿ ಟ್ರಿಬ್ಯುನಲ್ ಮುಂದೆ ಅಂಕಿಅಂಶಗಳನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ಮ್ಯಾಥಮ್ಯಾಟಿಕಲ್ ಎರರ್ ಆಗಿದೆ. ಟ್ರಿಬ್ಯುನಲ್ ಇಂಟರಿಂ ಆರ್ಡರ್ ಕೊಡುವ ಸಂದರ್ಭದಲ್ಲಿ ವ್ಯತ್ಯಾಸವಾಗಿದೆ. ಇದನ್ನು ರೆಕ್ಟಿಫೈ ಮಾಡಿಕೊಳ್ಳುವುದಕ್ಕೆ ಇದುವರೆಗೆ ನೀವು ಅಪ್ಲಿಕೇಷನ್ ಹಾಕಲಿಲ್ಲ.

ಸುಪ್ರೀಂ ಕೋರ್ಟ್ ಮುಂದೆ ಅಪ್ಲಿಕೇಷನ್ ಹಾಕಿದ್ದೀರಾ? ಟ್ರಿಬ್ಯುನಲ್ ಮುಂದೆ ನೀವು ಕೊಟ್ಟ ತೀರ್ಮಾನ ಸರಿಯಿಲ್ಲ, ಇಂಟರಿಂ ಆರ್ಡರ್‌ನಲ್ಲಿ ಎರಡು ಸಾರಿ ನೀವು ತೀರ್ಮಾನ ಕೊಟ್ಟಾಗ ನೀವು ಕೊಟ್ಟ ಅಂಕಿಅಂಶ ಸರಿಯಿಲ್ಲ, ಮ್ಯಾಥಮ್ಯಾಟಿಕಲ್ ಎರರ್, ಸರಿ ಮಾಡಿಕೊಳ್ಳಿ ಎಂದು ಈ ನಿಮಿಷದವರೆಗೆ ಅಪ್ಲಿಕೇಷನ್ ಹಾಕಲಿಲ್ಲ. ಹಾಕಿದ್ದರೆ ಆ ದಾಖಲೆಗಳನ್ನು ಕೊಡಿ. ನಾನು ಏತಕ್ಕೆ ಈ ಮಾತನ್ನು ಸನ್ಮಾನ್ಯ ಹಿರಿಯ ಸಚಿವರಾದ ಉಪ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ ಎಂದರೆ ನಿಮಗೆ ಬಿಡುವು ಇಲ್ಲ. ಶಕ್ತಿ ಇಲ್ಲ ಎಂದಲ್ಲ, ಮಾನಸಿಕವಾಗಿ ರಾಜಕೀಯ ಗೊಂದಲದಲ್ಲಿ ಸಿಕ್ಕಿಕೊಂಡು ಬೇಸರದಿಂದ ಇವತ್ತು ಕೆಲಸ ಮಾಡುವಂತಹ ಮಾನಸಿಕ ಸ್ಥಿತಿ, ನಿಮಗೆ ಇಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೂ ಇಲ್ಲ. ಇದು ಬಹಳ ಮುಖ್ಯವಾಗಿ ಇರತಕ್ಕಂತಹದು. ಇಲ್ಲದೇ ಇದ್ದರೆ ಇವತ್ತು ಕೇಂದ್ರದ ಒಬ್ಬ ಜವಾಬ್ದಾರಿ ಇರುವಂತಹ ಹಿರಿಯ ಸಚಿವರು ಬಂದು ಈ ರೀತಿ ಗೊಂದಲ ಉಂಟು ಮಾಡಿ ಈ ವಿಶೇಷ ಅಧಿವೇಶನವನ್ನು ಕರೆದು ಇಲ್ಲಿ ಚರ್ಚೆ ಮಾಡುವಂತಹ ಒಂದು ವಿಶೇಷವಾದ ಪರಿಸ್ಥಿತಿ ಇವತ್ತು ಬರುತ್ತಾ ಇರಲಿಲ್ಲ. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಯಾವುದೇ ಕಾರಣಕ್ಕೂ ಸಹ ನೀವು ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡಬಹುದು ಎನ್ನುವಂತಹ ವಿಶ್ವಾಸ ನಮಗೆ ಯಾರಿಗೂ ಇಲ್ಲ, ಈ ನಾಡಿನ ಜನರಿಗೂ ಇಲ್ಲ, ನಿಮಗೂ ಇಲ್ಲ. ಇಂತಹ ಒಂದು ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಇದೆ. ಅದಕ್ಕೆ ನಾನು ಇವತ್ತು ನಾಡಿನ ಜನರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಈ ರೀತಿಯ ಗೊಂದಲದಿಂದ, ಕಚ್ಚಾಟದಿಂದ ಬಡಿದಾಟದಿಂದ ಈ ನಾಡಿನ ನಾಲ್ಕೂವರೆ ಕೋಟಿ ಜನರಿಗೆ ದ್ರೋಹ ಮಾಡುವುದರ ಬದಲಾಗಿ, ಅನ್ಯಾಯ ಮಾಡುವುದರ ಬದಲಾಗಿ ದಯಮಾಡಿ ವಿಧಾನ ಸಭೆಯನ್ನು ವಿಸರ್ಜನೆ ಮಾಡಿ ರಾಜೀನಾಮೆ ಕೊಟ್ಟು ಮನೆಗೆ ಹೋಗಿ. ಯಾರಾದರೂ ಜನ ಅವರಿಗೆ ಬೇಕಾದಂತಹ ಒಂದು ಸರ್ಕಾರವನ್ನು ಆಯ್ಕೆ ಮಾಡಿಕೊಂಡು ಕಾವೇರಿ ಜಲಾನಯನ ಪ್ರದೇಶದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವಕಾಶ ಮಾಡುವಂತಹ ಕೃಪೆಯನ್ನು ತಾವು ಮಾಡಬೇಕು. ಇದರಲ್ಲಿ ತಾವು ಮೊದಲಿಗರಾಗಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ ಕಾಂಗ್ರೆಸ್ ಪಕ್ಷದವರು ವಿಧಾನ ಸಭೆಯನ್ನು ವಿಸರ್ಜನೆ ಮಾಡಿರುವ ನಿದರ್ಶನ ಎಲ್ಲಾದರೂ ಇದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗ ಏನು ಆಗಿದೆ ಎಂದರೆ ಖಾಯಿಲೆ ಉಲ್ಬಣಗೊಂಡಿದೆ. ಅವರಿಗೇ ಕ್ಷೇಮ ವಿಧಾನಸಭೆಯನ್ನು ವಿಸರ್ಜನೆ ಮಾಡುವುದು. ಏಕೆಂದರೆ, ಏನಾದರೂ ಅಲ್ಪಸ್ವಲ್ಪ ಜೀವ ಉಳಿಯಬೇಕು ಎಂದರೆ ವಿಧಾನಸಭೆಯನ್ನು ವಿಸರ್ಜನೆ ಮಾಡುವುದು ಬಿಟ್ಟು ಬೇರೆ ಮಾರ್ಗನೇ ಇಲ್ಲ. ಇಲ್ಲದಿದ್ದರೆ ಸರ್ವನಾಶ ಆಗುತ್ತದೆ ಎನ್ನುವ ಅರಿವು ಅವರಿಗೆ ಆಗಿದೆ. ಅದಕ್ಕಾಗಿ ಕೊನೆಯಪಕ್ಷ ನಿಮ್ಮ ಪಕ್ಷ ಇರುತ್ತದೋ ಯಾರು ಅಧಿಕಾರಕ್ಕೆ ಬರುತ್ತಾರೋ, ಹೋಗುತ್ತಾರೋ ಅದು ಮುಖ್ಯ ಅಲ್ಲ. ಕಾವೇರಿ ಜಲಾನಯನ ಪ್ರದೇಶದ ಜನರಿಗೆ ನ್ಯಾಯ ಒದಗಿಸಿಕೊಡುವುದಕ್ಕೆ ನಿಮ್ಮಲ್ಲಿ ಬಿಡುವು ಇಲ್ಲ, ಅವಕಾಶಗಳೂ ಇಲ್ಲದೇ ಇರುವಂತಹ ಈ ಸಂದರ್ಭದಲ್ಲಿ ಇವತ್ತು ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವರಾದ ಶ್ರೀ ಶುಕ್ಲಾ ಅವರು ಈ ರೀತಿಯಬಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನನಗಂತೂ ಅನಿಸುತ್ತದೆ. ಇವತ್ತಲ್ಲ ನಾಳೆ ಸತ್ಯ ಬಯಲಾಗುತ್ತದೆ. ರಾಜ್ಯದ ನೀರಾವರಿ ಸಚಿವರು ಸತ್ಯವನ್ನು ಮುಚ್ಚಿಡುತ್ತಿದ್ದಾರೆ ಎಂದು ನಾನು ನೇರವಾಗಿ ಜವಾಬ್ದಾರಿಯುತವಾದ, ಗುರುತರವಾದ ಆರೋಪವನ್ನು ಮಾಡುತ್ತಿದ್ದೇನೆ. ಸತ್ಯ ಇವತ್ತಲ್ಲ ನಾಳೆ ಬೆಳಕಿಗೆ ಬರುತ್ತದೆ. ನೀವು ನಿಶ್ಚಿತವಾಗಿ ನಿಮ್ಮ

ಕೇಂದ್ರ ಸರ್ಕಾರದ ಸಚಿವರಿಗೆ ಪತ್ರ ಕೊಟ್ಟಿರುವುದು ನಿಜ. ಶ್ರೀಮತಿ ಜಯಲಲಿತಾ ಅವರು ಆಮರಣಾಂತ ಉಪವಾಸ ಮಾಡುವುದು ನಿಲ್ಲಲಿ, ಬೀಸುವ ದೊಣ್ಣೆ ತಪ್ಪಲಿ ಎಂದು ಸಿಕ್ಕಿಕೊಂಡು ಇವತ್ತು ನೀವು ಅವರೂ ಒಂದು ಪಕ್ಷದಲ್ಲಿ ಇದ್ದು ಇಲ್ಲಿ ಇಲ್ಲ ಎಂದು ಒಂದು ತರಹ ಹೇಳಿಕೆ ಕೊಟ್ಟು ಒಂದು ನಾಟಕ ಆಡುವಂತಹ ಪ್ರಯತ್ನ ಆಗುತ್ತಿದೆ. ಟ್ರಿಬ್ಯುನಲ್ ಒಂದು ಕಡೆ ಇದೆ. ಹೇಳಿಕೆ ಕೊಟ್ಟಿದ್ದು ನಿಜ ಎಂದು ರಾಜ್ಯ ಸಭೆಯೊಳಗೆ ಲೋಕಸಭೆಯೊಳಗೆ ಹೇಳಿಕೆ ಮಾಡುವಂತಹ ಒಂದು ಸಂದರ್ಭ ನಡೆಯುತ್ತಿದೆ. ಈ ರೀತಿ ನಾಡಿನ ಜನರಿಗೆ ಸಂಪೂರ್ಣ ದ್ರೋಹ ಮಾಡಿರುವಂತಹ ನೀವು ಕಾವೇರಿ ಜಲಾನಯದ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಆಗಿಲ್ಲ. ಇವತ್ತು ಏನು ಅಭಿವೃದ್ಧಿ ಕಾರ್ಯ ನಡೆಯುತ್ತಿದೆ? ಒಂದು ಕಡೆ ಟ್ರಿಬ್ಯುನಲ್‌ನ ಇಂಟಿರಿಮ್ ಆರ್ಡರ್‌ನ ಕೂಗಾಟ. ಏನು ಒಂದುಅಭಿವೃದ್ಧಿ ಕಾರ್ಯ ಆಗುತ್ತಿದೆ ? ಅಭಿವೃದ್ಧಿ ಕಾರ್ಯ ಆಗುತ್ತಾ ಇಲ್ಲ. ಆ ಬೇಸಿನ್‌ನಲ್ಲಿ ಸುಮಾರು ಹತ್ತು-ಹತ್ತೂವರೆ ಕೋಟಿ ರೂಪಾಯಿ ಆಗಿರುವ ಕೆಲಸಕ್ಕೆ ಕಂಟ್ರಾಕ್ಟರ್ ಬಿಲ್ ಪಾವತಿ ಮಾಡಿಲ್ಲ. ಇದು ನಿಜ ತಾನೇ? ಅಂದರೆ ನೀವು ಕಾವೇರಿ, ಟ್ರಿಬ್ಯುನಲ್ ಇಂಟಿರಿಮ್ ಆರ್ಡರ್ ಕಥೆ ಹೇಳಿಕೊಂಡು ಆ ಒಂದು ನೀರಾವರಿ ಇಲಾಖೆಗೆ ಬೇಕಾದಂತಹ ಹಣವನ್ನು ತೆಗೆದುಕೊಂಡು ಅಲ್ಲಿ ಒಂದು ನೀರಾವರಿ ಅಭಿವೃದ್ಧಿ ಕಾರ್ಯ ಆಗುವುದಕ್ಕೆ ಯಾವುದೇ ಸಂದರ್ಭದಲ್ಲಿ ನೀವು ಇವತ್ತು ಪ್ರಯತ್ನ ಮಾಡುತ್ತಾ ಇಲ್ಲ. ಇವತ್ತು ಟ್ರಿಬ್ಯುನಲ್ ಇಂತಹ ಒಂದು ವಿಚಿತ್ರವಾದ ಮೂರ್ಖತನದ ತೀರ್ಮಾನ ತೆಗೆದುಕೊಳ್ಳುತ್ತದೆ. 11.02 ಲಕ್ಷ ಎಕರೆಗಿಂತ ಹೆಚ್ಚು ನೀರಾವರಿ ಮಾಡಕೂಡದು ಎನ್ನುವ ಒಂದು ಷರತ್ತನ್ನು ಹಾಕುತ್ತದೆ. ಜಲಾಶಯದಲ್ಲಿ ನೀರು ಇರಲಿ ಇಲ್ಲದೇ ಇರಲಿ ಇಷ್ಟು ನೀರನ್ನು ಕೊಡಬೇಕು ಎಂದು ಹೇಳುತ್ತದೆ. ಅಂದ ಮೇಲೆ ನಿಮ್ಮ ಕೌನ್ಸಿಲ್ ವಾದ ಮಾಡುವುದರಲ್ಲಿ ವಿಫಲ ಆಯಿತು ತಾನೇ? ಸಂಬಂಧಪಟ್ಟ ನ್ಯಾಯಾಧೀಶರು ಇಲ್ಲಿ ಬಂದಾಗ ಅವರನ್ನು ನೋಡಿ ನಮ್ಮ ಸಮಸ್ಯೆಗಳನ್ನು ಹೇಳುವುದಕ್ಕೆ ನಿಮ್ಮದೇ ಸರ್ಕಾರ ಇದ್ದಾಗಲೂ ಸಹ ಅವತ್ತಿನ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ವಿಫಲರಾದರು. ಈ ರೀತಿ ಟ್ರಿಬ್ಯೂನಲ್‌ನವರು ಬಂದಾಗ ವಿಷಯವನ್ನು ಹೇಳಬಹುದಿತ್ತು. ನಾನು ನ್ಯಾಯಧೀಶರನ್ನು ನಿಂದನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ, ಟ್ರಿಬ್ಯುನಲ್ ಅನ್ನು ನಿಂದನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಟ್ರಿಬ್ಯುನಲ್‌ನ ಮುಂದೆ ನಮ್ಮ ವಾದವನ್ನು ಮಂಡನೆ ಮಾಡಿ ಅಂಕಿ ಅಂಶಗಳನ್ನು ತಿಳಿಸಿ ನಮಗೆ ನ್ಯಾಯ ಒದಗಿಸಿಕೊಡುವುದರಲ್ಲಿ ಸಂಪೂರ್ಣ ವಿಫಲವಾದಂತಹ ಸರ್ಕಾರ, ನೀವು ಒಂದು ಕ್ಷಣ ಅಧಿಕಾರದಲ್ಲಿ ಮುಂದುವರಿಯುವಂತಹ ನೈತಿಕ ಹಕ್ಕು ಇಲ್ಲ. ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಈ ನಾಡಿನ ಜನರಿಗೆ ಈಗಾಗಲೇ ಕರೆ ಕೊಟ್ಟಿದ್ದೀರಿ. ನೀವೇ ಹೇಳಿದ್ದೀರಿ. ನಿಮ್ಮಿಂದ ಈ ವಿವಾದವನ್ನು ಬಗೆಹರಿಸುವುದಕ್ಕೆ ಸಾಧ್ಯ ಇಲ್ಲ. ಜನ ಬೀದಿಗೆ ಇಳಿಯುವಂತಹ ಒಂದು ಅನಿವಾರ್ಯ ಪ್ರಸಂಗ ಬಂದಿದೆ. ಅವರ ರಕ್ಷಣೆ ಮಾಡಿಕೊಳ್ಳುವುದಕ್ಕೆ ಚುನಾಯಿತ ಪ್ರತಿನಿಧಿಗಳು ಮಾಡಬಹುದು ಎಂದು ಹೇಳಿ ಅಜೀರ್ಣ ಆಗುವಷ್ಟು ಬಹುಮತವನ್ನು ನಿಮಗೆ ಕೊಟ್ಟು ಜನ ಪಶ್ಚಾತ್ತಾಪವನ್ನು ಪಡುತ್ತಿದ್ದಾರೆ. ಆದಕ್ಕಾಗಿ ನಾನು ಏನು ಹೇಳುತ್ತೇನೆ ಎಂದರೆ, ನೀವು ಅವರ ಋಣದಿಂದ ಇಷ್ಟು ದಿನ ಅಧಿಕಾರ ನಡೆಸಿದ್ದೀರಿ. ಕೊನೆಯ ಪಕ್ಷ ಇನ್ನೂ ಒಂದು ವರ್ಷ ಅಧಿಕಾರದಲ್ಲಿ ಮುಂದುವರಿಯಬೇಕು ಎನ್ನುವ ಭ್ರಮೆಯಲ್ಲಿ ಈ ರೀತಿಯ ಒಂದು ಅನ್ಯಾಯ ಮಾಡುವುದಕ್ಕೆ ಬಿಡದಲೇ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎನ್ನುವ ಒಂದು

ಮಾತನ್ನು ಹೇಳುತ್ತೇನೆ. ಈ ಅಧಿವೇಶನದಲ್ಲಿ ನೀರಾವರಿ ಸಚಿವರು ಈ ರೀತಿಯ ಒಂದು ಬೇಜವಾಬ್ದಾರಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಉಸ್ತುವಾರಿ ಸಮಿತಿಯನ್ನು ರಚಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಂದು ಅವರು ಹೇಳಿರುವುದಕ್ಕೆ ಅವರನ್ನು ಕೇಂದ್ರ ಸರ್ಕಾರದ ಸಚಿವ ಸಂಪುಟದಿಂದ ತೆಗೆದುಹಾಕಬೇಕೆಂಬ ನಿರ್ಣಯವನ್ನು ಈ ಸದನದಲ್ಲಿ ಮಾಡಬೇಕು. ಇಲ್ಲದಿದ್ದರೆ, ರಾಜ್ಯದ ಮುಖ್ಯಮಂತ್ರಿಗಳೂ ಸಹ ಇದರಲ್ಲಿ ಪಾಲುದಾರರು, ಇದಕ್ಕೆಲ್ಲಾ ಅವರೇ ಜವಾಬ್ದಾರರು ಎನ್ನುವ ಮಾತನ್ನು ಹೇಳುತ್ತಾ, ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ(ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಈ ದಿನ ಕಾವೇರಿ ನೀರನ್ನು ಈ ರಾಜ್ಯದ ಜನತೆಗೆ ಉಳಿಸಿಕೊಳ್ಳುವುದರಲ್ಲಿ ಅದಕ್ಕಿಂತ ಹೆಚ್ಚಾಗಿ ನಾನು ಒತ್ತು ಕೊಡುವುದು ಆ ನೀರನ್ನು ಬಳಸಿಕೊಳ್ಳುವುದರಲ್ಲಿ. ಆ ಪದವನ್ನು ಅತ್ಯಂತ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಉಳಿಸಿಕೊಳ್ಳುವುದಕ್ಕೆ ನಡೆಯುತ್ತಿರುವಂಥ ಹೋರಾಟ, ಅದು ಶತಮಾನದ ಚರಿತ್ರೆ. ಆದರೆ, ಆ ನೀರನ್ನು ಬಳಸಿಕೊಳ್ಳುವುದಕ್ಕೆ ಮಾಡಿರುವಂಥ ಪ್ರಯತ್ನ ಅದೊಂದು ಅನ್ಯಾಯದ ಪರಂಪರೆ. ಮುಖ್ಯಮಂತ್ರಿಗಳು ಈಗ ಸದನದಲ್ಲಿದ್ದಿದ್ದರೆ 'ಪರಂಪರೆ' ಎನ್ನುವ ಪದ ಅವರಿಗೆ ಅಪ್ಯಾಯಮಾನವಾಗಿರುತ್ತಿತ್ತು. ನೀರನ್ನು ಉಳಿಸಿ ಕೊಳ್ಳುವುದರಲ್ಲಿ ನಮ್ಮ ಹೋರಾಟ, ನೀರಿಗಾಗಿ ಶತಮಾನದ ತೀರದ ಬವಣೆ- ಇವುಗಳನ್ನು ಅವರೇ ಹೇಳಿರುವುದು. ಇದರ ಜೊತೆಗೆ ಇರುವಂಥ ನೀರನ್ನು ಉಳಿಸಿಕೊಂಡು ಈ, ಬವಣೆಯನ್ನು ನೀಗುವುದರಲ್ಲಿ ನಮ್ಮದು ಅನ್ಯಾಯದ ಒಂದು ಪರಂಪರೆ. ಸನ್ಮಾನ್ಯ ಅಧ್ಯಕ್ಷರೆ, ವೈಯಕ್ತಿಕವಾಗಿ ನಾನು ಏನು ಮಾಡಿದರೆ ನೀರಾವರಿ ಬಗ್ಗೆ ಈ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಸಾಧ್ಯ ಎನ್ನುವುದು ನನಗೆ ಗೊತ್ತಿಲ್ಲ. ನಾನು ರೋಸಿ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಚಿಕ್ಕ ಹುಡುಗನಾಗಿದ್ದಾಗ ನಮ್ಮ ಪ್ರದೇಶದಲ್ಲಿ ಮುತ್ತುರಾಯನಕೆರೆ ಎಂದು ಒಂದು ಕೆರೆ ಕಟ್ಟಿದರು. ಆಗಿನ ಬೇಸಿಗೆ ಕಾಲದಲ್ಲಿ ಹುಡುಗರನ್ನೆಲ್ಲಾ ಹೊರಗೆ ಮಲಗಿಕೊಳ್ಳಲು ಬಿಡುತ್ತಿರಲಿಲ್ಲ. ಏಕೆಂದರೆ, ಈ ಹೊಸ ಕೆರೆ ಕಟ್ಟುವಾಗ ಕೆರೆಯ ಕೋಡಿ, ತೂಬು, ಏರಿ ನಿಲ್ಲಬೇಕಾದರೆ ಯಾರನ್ನಾದರೂ ಬಲಿ ಕೊಡಬೇಕೆಂಬ ಪ್ರತೀತಿ ನಮ್ಮಲ್ಲಿತ್ತು. ನಮ್ಮ ಕಡೆ ಕಟ್ಟಿರುವ ಚೋಳನಕೆರೆಯನ್ನು ಹಿಂದೆ ಕಟ್ಟಿ ಅದರ ಕೋಡಿ ನಿಲ್ಲದೆ ಹೋದಾಗ ಆಗಿನ ಗೌಡ ತನ್ನ ತುಂಬು ಗರ್ಭಿಣಿ ಸೊಸೆಯನ್ನು ಆ ಕೆರೆಯ ತೂಬಿಗೆ ಬಲಿ ಕೊಟ್ಟ. ಮಾನ್ಯ ಅಧ್ಯಕ್ಷರೆ, ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸರ್ಕಾರವನ್ನು ಎಚ್ಚರಗೊಳಿಸ ಬೇಕಾದರೆ, ಈ ರಾಜ್ಯದ ರೈತರು ನೀರಿಗಾಗಿ ಬವಣೆ ಪಡುತ್ತಿರುವುದನ್ನು ಈ ಸರ್ಕಾರದ ಗಮನಕ್ಕೆ ತರಬೇಕಾದರೆ, ಇವರು ತಮ್ಮ ಕಿತ್ತಾಟ ಬಿಟ್ಟು ಜನರ ಸಮಸ್ಯೆಗೆ ಸ್ಪಂದಿಸುವ ರೀತಿ ಮಾಡ ಬೇಕಾದರೆ ನಾವು ಯಾರನ್ನು ಬಲಿ ಕೊಡಬೇಕೆಂದು ಕೇಳುತ್ತಿದ್ದೇನೆ. ಸನ್ಮಾನ್ಯ ನೀರಾವರಿ ಮಂತ್ರಿಗಳೆ, ನನಗಂತೂ ತುಂಬು ಗರ್ಭಿಣಿ ಸೊಸೆ ಇಲ್ಲ. ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ಕೊಡಬೇಕಾದರೆ ಈ ಶರೀರದ ಬಲಿ ಅವಶ್ಯಕತೆ ಇದ್ದರೆ ಕೊಡುತ್ತೇನೆ, ತೆಗೆದುಕೊಳ್ಳಿ. ಎಷ್ಟು ಸಾರಿ ನಿಮಗೆ ನಾವು ಹೇಳಬೇಕು? ಒಬ್ಬ ಶಾಸಕನ, ಮಂತ್ರಿಯ ಮದುವೆಗೆ ಹೋಗವುದಕ್ಕೆ ನಿಮಗೆ ಹೆಲಿಕಾಪ್ಟರ್ ಇದೆ. ಒಬ್ಬ ಶಾಸಕ ನಿಮ್ಮ ಪರವಾಗಿ ಬರುತ್ತಾರೆಂದರೆ ನೀವು ನಾಲ್ಕು ರಾತ್ರಿ ಕಾಲ ಕಳೆಯುತ್ತೀರಿ. ಆದರೆ, ಹೇಮಾವತಿ ನದಿಯ ಕಾಮಗಾರಿಯನ್ನು ನಲವತ್ತು ನಿಮಿಷ

ಬಂದು ನೋಡುವುದಕ್ಕೆ ನಿಮ್ಮ ಮುಖ್ಯಮಂತ್ರಿಗಳಿಗೆ ವ್ಯವಧಾನವಿಲ್ಲವೇ? ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾವು ಏನು ಮಾಡಬೇಕು? ಏನು ಮಾಡಿದರೆ ನೀವು ತೃಪ್ತಿಯಾಗುತ್ತೀರಿ? ಯಾವ ಬಲಿ ಕೊಟ್ಟರೆ ತೃಪ್ತಿಯಾಗುತ್ತೀರಿ? ಯಾವ ತ್ಯಾಗ ಮಾಡಿದರೆ ನಿಮ್ಮ ಗಮನ ಸೆಳೆಯುತ್ತದೆ? ದಯವಿಟ್ಟು ಹೇಳಿ. ನನ್ನ ಬಲಿ ಬೇಕೆ? ಅವಶ್ಯಕತೆಯಿದ್ದರೆ ಬಾಗೂರು-ನವಿಲೆ ಟನಲ್ ಹತ್ತಿರ ನನ್ನನ್ನು ಕಡಿಯಿರಿ, ನೀರನ್ನು ಕೊಡಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನೀರನ್ನು ಉಳಿಸಿಕೊಳ್ಳುವುದಕ್ಕೆ ನಾವು ಮಾಡುತ್ತಿರುವಂಥ ಹೋರಾಟ ಏನಿದೆ,

ಅದು ಇವೊತ್ತು ನಿನ್ನೆಯದಲ್ಲ? ಇದು ಶತಮಾನದ ಹೋರಾಟವಾಗಿದೆ. ಈ ಹೋರಾಟ ಇವೊತ್ತಿಗೆ ಮುಗಿಯುವುದಿಲ್ಲ. ಸೇನ್ಮಾನ್ಯ ವೀರಪ್ಪ ಮೊಯಿಲಿಯವರಂಥ ಸಚಿವರಾದಂಥ ಸನ್ಮಾನ್ಯ ಕೃಷ್ಣರವರಂಥ ಹತ್ತು ಜನ ಮಂತ್ರಿಗಳು ಬಂದರೂ ಈ ಹೋರಾಟ ಮುಂದುವರಿಯುತ್ತಲೇ ಇರುತ್ತದೆ, ಈ ಸಮಸ್ಯೆ ಇಲ್ಲಿಗೇ ಬಗೆಹರಿಯುವುದಿಲ್ಲ.

ಡಾ : ಎನ್.ಬಿ.ನಂಜಪ್ಪ: ಮಾನ್ಯ ರಾಮಯ್ಯನವರೇ, ಈಗಾಗಲೇ ಹದಿನಾಲ್ಕು ಸಾವಿರ ತೆಂಗಿನ ಗಿಡಗಳನ್ನು, ಒಂದೂವರೆ ಸಾವಿರ ಕುಟುಂಬಗಳನ್ನು ನೀರು ಕೊಡುವುದಕ್ಕೋಸ್ಕರ ಬಲಿ ಕೊಟ್ಟಾಗಿದೆ.

ಶ್ರೀ ವೈ.ಕೆ. ರಾಮಯ್ಯ : ನೀರಾವರಿ ವಿಷಯ ಬಂದಾಗ ನನ್ನ ಸ್ನೇಹಿತರು ಉದ್ವಿಗ್ನರಾಗುತ್ತಾರೆ. ಇನ್ನೇನು ಆಗಬೇಕು ಹೇಳಿ? What else I should do ? ಅಳಬೇಕೆ? ಬಾಯಿ ಬಡಿದುಕೊಳ್ಳಬೇಕೆ? ಪ್ರಾಣ ಬಿಡಬೇಕೆ? ನಾಲ್ಕು ಲಕ್ಷ ಎಕರೆಗಳಿಗಾಗುವಷ್ಟು ನೀರು ಹೇಮಾವತಿ ಜಲಾಶಯದಲ್ಲಿ ತುಂಬಿ ನಿಂತಿದೆ. ಆದರೆ, ತುಮಕೂರಿನಲ್ಲಿರುವ ಬೆಳೆ ಒಣಗಿ ನಿಂತಿದೆ, ಯಾವ ಪಾಪಕ್ಕೆ? ಕೆರೆಯಲ್ಲಿರುವ ನೀರನ್ನು ಕಾಲುವೆ ಮಾಡಿ ಹೊಲಕ್ಕೆ ಕೊಡುವುದಕ್ಕೆ ಯೋಗ್ಯತೆ ಇಲ್ಲದಂಥ ಸರ್ಕಾರಗಳನ್ನು ನಾವೂ ನಡೆಸಿದ್ದೇವೆ, ಇವೊತ್ತು ನೀವೂ ನಡೆಸುತ್ತಿದ್ದೀರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಾವೇರಿ ನೀರನ್ನು ಉಳಿಸಿಕೊಳ್ಳುವುದಕ್ಕೆ ನಡೆದಿರುವ ಚರ್ಚೆ.ಅಂದರೆ ಈಗಿನ ಮದ್ರಾಸ್ ಅಂದು ತಮಿಳುನಾಡು ಎಂದು ಕರೆಯಲಾಗುತ್ತಿತ್ತು. ಅದು ಬ್ರಿಟೀಷರ ಆಡಳಿತದಲ್ಲಿ ಇತ್ತು. Interference ಅಥವಾ ಅನ್ಯಾಯದ ಪರಂಪರೆಯು ಇವತ್ತು ಪ್ರಾರಂಭವಾಗಿಲ್ಲ, ಒಂದು ದಶಕದ ಹಿಂದೆ ಪ್ರಾರಂಭವಾಗಿಲ್ಲ, ಈ ಅನ್ಯಾಯದ ಪರಂಪರೆಯು ಪ್ರಾರಂಭವಾಗಿ ಒಂದು ಶತಮಾನವೇ ಮುಗಿದುಹೋಗಿದೆ. ಆವತ್ತಿನ peoples Representative Assembly ಯಿಂದ ಹಿಡಿದು ಇವತ್ತಿನ ಈ ಸದನದಲ್ಲಿ ನಡೆಯುತ್ತಿರತಕ್ಕ ಚರ್ಚೆಯವರೆಗೂ ಸಹ ಎಲ್ಲಾ ವಿಧವಾದಂಥ ಚರ್ಚೆಯು ನಡೆದುಹೋಗಿದೆ. ಅದು ವಿಧಾನ ಸಭೆಯಲ್ಲಿ, ಹೊರಗಡೆ ನ್ಯಾಯಾಲಯದಲ್ಲಿ ಮತ್ತು ಸಿಂಪೋಸಿಯಂಗಳಲ್ಲಿ ನಡೆದು ಹೋಗಿದೆ. ಆದರೂ ಕೂಡ ಈ ಸಮಸ್ಯೆ ಬಗೆಹರಿದಿಲ್ಲ; ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ, ಇದಕ್ಕೆ ಕಾರಣವೇನೆಂದರೆ, ನಮಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ, ನಮಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ. ಕೃಷ್ಣ ಮತ್ತು ಕಾವೇರಿಗಳೆರಡೂ ಸಹ ಈ ರಾಜ್ಯದ ಎರಡು ಕಣ್ಣುಗಳಿದ್ದಂತೆ. ನಾವು ನಿರೀಕ್ಷೆ ಮಾಡಿದ್ದು ಏನೆಂದರೆ, ಆ ಎರಡು ಕಣ್ಣುಗಳಿಂದ ಆನಂದಬಾಷ್ಪ ಸುರಿದು, ಅದರಿಂದ ನಮ್ಮ ಭೂತಾಯಿಯು ಒದ್ದೆಯಾಗಿ, ಆ ಒದ್ದೆಯಲ್ಲಿ ಈ ರಾಜ್ಯದ ಎಲ್ಲಾ ಜನರ ಅಭ್ಯುದಯವಾಗುತ್ತದೆಂದು. ಆದರೆ ದುರದೃಷ್ಟವಶಾತ್ ಆ ಎರಡು ಕಣ್ಣುಗಳಿಂದ ಆನಂದ ಬಾಷ್ಪದ ಬದಲಾಗಿ ನೋವಿನ ಕಣ್ಣೀರು ಸುರಿಯುತ್ತಿದೆ. ಅದಕ್ಕೆ ಕಾರಣವನ್ನು ಇಲ್ಲಿ ಪ್ರಸ್ತುತವಲ್ಲದಿದ್ದರೂ ಕೂಡ

ನಾನು ಪ್ರಸ್ತಾಪ ಮಾಡಬೇಕಾಗಿದೆ. ಅದರಲ್ಲಿ ಒಂದು, ಕೃಷ್ಣಮೇಲ್ದಂಡೆ ಯೋಜನೆಯ ಕೆಲಸವನ್ನು ಮಾಡುವುದು. ಆ ಕಣ್ಣಿನಲ್ಲಿಯೂ ರಕ್ತ ಸುರಿಯುತ್ತಿದೆ. ಕಾರಣವೇನೆಂದರೆ, ಎರಡುಸಾವಿರ ಇಸವಿಯೊಳಗೆ ಆ ಮೂರೂ ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯಕವಾಗಿ ಬೇಕಾಗಿರುವ ನೀರನ್ನು ಕೊಡತಕ್ಕ ಕೆಲಸವನ್ನು ಸರ್ಕಾರ, ನಾವು ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಆ ಭಾಗಕ್ಕೆ ಹೋದಾಗ ಎರಡುಸಾವಿರ ಇಸವಿಯೊಳಗೆ ನೀರು ಬರುತ್ತದೆ ಎಂದು ಹೇಳಿ ಬರುತ್ತಾರೆ. ಯಾವ ಬಾಯಿಯಲ್ಲಿ ಆ ರೀತಿ ಹೇಳುತ್ತಾರೋ ನನಗಂತೂ ಗೊತ್ತಾಗುವುದಿಲ್ಲ. ಈ ಮುಖ್ಯಮಂತ್ರಿಯಲ್ಲ ಆ ದೇವರೇ ಬಂದರೂ ಸಹ ಎರಡುಸಾವಿರ ಇಸವಿಯೊಳಗಾಗಿ ಆ ಭಾಗಕ್ಕೆ ನೀರನ್ನು ಕೊಡಲು ಸಾಧ್ಯವಾಗುವುದಿಲ್ಲ. ನಾನೇ ಮುಖ್ಯಮಂತ್ರಿಯಾದರೂ ಕೂಡ ಅಥವಾ ಬೇರೆ ಯಾರೇ ಮುಖ್ಯಮಂತ್ರಿಯಾದರೂ ಕೂಡ ಆ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಇದು ಸೂರ್ಯ ಚಂದ್ರರ ಬೆಳಕಿನಷ್ಟೇ ಸತ್ಯವಾಗಿದ್ದರೂ ಸಹ, ಸ್ಪಷ್ಟವಾಗಿದ್ದರೂ ಸಹ ಆ ರೀತಿ ಹಸಿ ಸುಳ್ಳನ್ನು ಏಕೆ ಹೇಳಿ ಜನರನ್ನು ಮೋಸ ಮಾಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ. ಎರಡುಸಾವಿರ ಇಸವಿಯೊಳಗೆ ನೀರನ್ನು ಉಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ ಎನ್ನತಕ್ಕ ನಿತ್ಯ ಸತ್ಯವನ್ನು ಕಂಡಿದ್ದರೂ ಸಹ ಅದಕ್ಕೆ ಬದಲಾಗಿ, ಅದಕ್ಕೆ ಪರ್ಯಾಯವಾಗಿ ಒಂದು ದಾರಿಯನ್ನು ನಾವುಗಳು ಕಂಡುಕೊಳ್ಳ ಬೇಕಾಗಿದೆ. ನಮ್ಮ ವಿರೋಧಪಕ್ಷದ ನಾಯಕರ ಸಭೆಯನ್ನು ಕರೆದಾಗ ಮುಖ್ಯಮಂತ್ರಿಯವರು ಎರಡುಸಾವಿರ ಇಸವಿಯೊಳಗೆ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗದಿದ್ದರೂ ಕೂಡ 'ಬಚಾವತ್ ತೀರ್ಮಾನದ ಪ್ರಕಾರ' ನಮ್ಮ ನೀರಿನ ಹಕ್ಕನ್ನು ನಾವು ಉಳಿಸಿಕೊಳ್ಳಬಹುದು ಎಂದು ಹೇಳಿದರು. I am extremely sorry ಇದನ್ನು ಮುಖ್ಯಮಂತ್ರಿಯವರ ದಡ್ಡತನವೆಂದು ಭಾವಿಸುವುದಿಲ್ಲ. Because he himself is an advocate, I know.

ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಇದು ಒಂದು ದೊಂಬರಾಟವಾಡಿದಂತೆ ಆಗಿದೆ. ಎರಡುಸಾವಿರ ಇಸವಿಯೊಳಗೆ ನೀರನ್ನು ಉಪಯೋಗ ಮಾಡಿಕೊಳ್ಳಲು ಆಗುವುದಿಲ್ಲವೆಂದು ಇವರಿಗೆ ಗೊತ್ತಿದೆ. ಆ ಸಂದರ್ಭದಲ್ಲಿ ಇದಕ್ಕೆ ಪರ್ಯಾಯವಾದ ವ್ಯವಸ್ಥೆ ಏನು ಮಾಡಬೇಕು? ಇದಕ್ಕೆ ಪರ್ಯಾಯವಾಗಿ ಏನು ಚಿಂತನೆ ಮಾಡಬೇಕು? ಎಂದು ಕೇಳಿದಾಗ ಅವರು, ಇಲ್ಲ ಇಲ್ಲ ಎರಡುಸಾವಿರ ಇಸವಿಯೊಳಗೆ ನೀರನ್ನು ಉಪಯೋಗಿಸಿಕೊಳ್ಳಲು ಆಗದಿದ್ದರೂ ಸಹ ನಮ್ಮ ನೀರಿನ ಹಕ್ಕು ಹೋಗವುದಿಲ್ಲವೆಂದು ಹೇಳಿದರು. If this Government do not make use of the water before 2000 A.D. whether the right will be extinguished or not, may I request the Hon'ble Chief Minister to get the opinion from the Law Department? I know, B.V. Acharya is one of my good friends. Let me say about it. I argue and I tell firmly that our right will be extinguished if we do not use the water before 2000 A.D. If my opinion is contradicted by your Law Department, I am going to resign from this House . ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರಲ್ಲಿ ಕೇಳಿಕೊಳ್ಳುವುದೇನೆಂದರೆ, ಎರಡುಸಾವಿರ ಇಸವಿಯೊಳಗೆ ನಮ್ಮ ಕರ್ನಾಟಕರಾಜ್ಯ ತನ್ನ ಪಾಲಿನ

ನೀರನ್ನು ಉಪಯೋಗ ಮಾಡಿಕೊಳ್ಳದಿದ್ದರೆ ನಮಗೆ ಇರತಕ್ಕ ನೀರಿನ ಹಕ್ಕು ನಾಶವಾಗುತ್ತದೆ, ನಶಿಸಿ ಹೋಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಇದಕ್ಕೆ ವಿಭಿನ್ನವಾದ ಅಭಿಪ್ರಾಯವನ್ನು ನಿಮ್ಮ ಅಡ್ವೊಕೇಟ್ ಜನರಲ್ ಕೊಡುವುದಾದರೆ, ನಿಮ್ಮ ಕಾನೂನಿನ ತಜ್ಞರು ಕೊಡುವುದಾದರೆ ನಾನು ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ತಾವು ಆ ರಿಪೋರ್ಟ್‌ನ್ನು ಪರಿಶೀಲನೆ ಮಾಡಿ ನಂತರ ಹೇಳಿ. ಮಾನ್ಯ ಯಡಿಯೂರಪ್ಪನವರು ಹೇಳಿದಂತೆ, ಈ ರೀತಿಯಾದ ನಿತ್ಯ ಸತ್ಯ ನಮ್ಮ ಕಣ್ಣುಮುಂದೆ ಇದ್ದರೂ ಕೂಡ ಕೃಷ್ಣ ನೀರಿನ ಬಗ್ಗೆ ದೊಂಬರಾಟ ಆಡುತ್ತಿದ್ದಾರೆ. ಎರಡುಸಾವಿರ ಇಸವಿಯೊಳಗೆ ಆ ನೀರನ್ನು ಉಪಯೋಗ ಮಾಡಲು ಸಾಧ್ಯವಿಲ್ಲ. ಆದ್ದರಿಂದ ನಾನು ಕೃಷ್ಣ ನೀರಿನ ಬಗ್ಗೆ ಇಲ್ಲಿಗೇ ನಿಲ್ಲಿಸುತ್ತೇನೆ. ಈ ಮೂರು ಜಿಲ್ಲೆಯ ಅಭ್ಯುದಯದ ದೃಷ್ಟಿಯಿಂದ 2000ದ ಇಸವಿಯೊಳಗೆ ನೀರು ಕೊಡಲಿಕ್ಕೆ ಸಾಧ್ಯವಿಲ್ಲದೇ ಇರುವುಂತಹ ಪರಿಸ್ಥಿತಿಯನ್ನು ಒಪ್ಪಿಕೊಂಡು ಅದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಮಾಡುವ ಚಿಂತನೆಯನ್ನು ಸರಕಾರ ಮಾಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಕೃಷ್ಣ ನದಿ ನೀರಿನ ಬವಣೆ ಇದಾದರೆ ಕಾವೇರಿ ನೀರಿನ ಬವಣೆ ಇದಕ್ಕಿಂತ ವಿಭಿನ್ನವಾದುದೇನೂ ಅಲ್ಲ. ಕಾವೇರಿ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ತಾವು ಮಾಡುವಂತಹ ಎಲ್ಲಾ ಪ್ರಯತ್ನದಲ್ಲೂ ಕೂಡ ತಮಿಳುನಾಡಿನವರು ನಮಗೆ ಕೊಟ್ಟಿರುವಂತಹ ತೊಂದರೆ ಕಿರುಕುಳದ ಕಥೆಯನ್ನು ನೆನೆಸಿಕೊಳ್ಳಬೇಕಾಗುತ್ತದೆ. 1911ನೇ ಇಸವಿಯಲ್ಲಿ ಕೃಷ್ಣರಾಜ ಸಾಗರದ ಕೆಲಸ ಪ್ರಾರಂಭವಾದಾಗಲೇ ಶುರುವಾಯಿತು. 1911 ರಲ್ಲಿ ಮೊದಲು ಏನು ಕೆಲಸ ನಡೆಯಿತು ಅದಕ್ಕೂ ಕೂಡ ಅಡ್ಡಿ ಬಂದರು ಅದನ್ನು ಬಗೆಹರಿಸಿ 24ಕ್ಕೆ ಅದರ ಕೆಲಸ ಮುಗಿಸಲಾಯಿತು. ಆಗಲೂ ಕೂಡ ತಮಿಳುನಾಡಿನವರು ತೊಂದರೆ ಕೊಟ್ಟರು. ಹೇಮಾವತಿ ಕೆಲಸ ತೆಗೆದುಕೊಂಡಾಗ ಕೂಡ ತೊಂದರೆಯಾಯಿತು. ಮೊನ್ನೆ ಪ್ರಜಾವಾಣಿಯಲ್ಲಿ 25 ವರ್ಷಗಳ ಹಿಂದೆ ಎಂದು ಒಂದು ಬಾಕ್ಸ್ ಐಟಂನಲ್ಲಿ ಅಂಕಣದಲ್ಲಿ ಬಂದಿತ್ತು. ಆಗಲೂ ತಮಿಳುನಾಡು ಸರಕಾರದವರು ಕೇಂದ್ರಸರ್ಕಾರಕ್ಕೆ ದೂರು ಕೊಡುತ್ತಾರೆ. 25 ವರ್ಷದ ಹಿಂದೆ ಆಗಲೂ ತಮಿಳುವನಾಡಿನವರು ತೊಂದರೆ ಕೊಟ್ಟರು ಆದರೆ ಅದನ್ನು ಬಗೆಹರಿಸಿದರು. ಆವತ್ತು ಅಧಿಕಾರದಲ್ಲಿದ್ದ ಮಂತ್ರಿಮಂಡಲವನ್ನು, ಮುಖ್ಯ ಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಕೇಂದ್ರ ಸರಕಾರ ಹಣವಿಲ್ಲವೆಂದು ಹೇಳಿದಾಗ ಆ ಕೆಲಸವನ್ನು ಮೊದಲು ಮಾಡಿ ಈ ರಾಜ್ಯದ ಜನರಿಗೆ ನೀರು ಕೊಡುವ ಪ್ರಯತ್ನ ಮಾಡಿದ್ದು ಅವರ ಒಂದು ದೊಡ್ಡ ಕೆಲಸವಾಗಿದೆ. ನನ್ನ ಮಾತನ್ನು ಶುರು ಮಾಡುವಾಗ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದರಲ್ಲಿ ನಮ್ಮದು ಒಂದು ಅನ್ಯಾಯದ ಪರಂಪರೆ, ಆ ಅನ್ಯಾಯದ ಪರಂಪರೆಯನ್ನು ಈಗಿನ ಸರಕಾರವೂ ಕೂಡ ಅನೂಚಾನವಾಗಿ ಮುಂದುವರಿಸಿಕೊಂಡು ಹೋಗುತ್ತಿದೆ ಎಂಬ ಮಾತನ್ನು ಹೇಳಿದ್ದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ನೀರಿನ ಹಂಚಿಕೆ ಬಗ್ಗೆ ವಿವಾದವೇನಿದೆ ಈ ವಿವಾದವನ್ನು ಬಗೆಹರಿಸಬೇಕು ಎನ್ನುವ ವಿಷಯದಲ್ಲಿ ತಮಿಳುನಾಡಿನ ಸರಕಾರ ಅಲ್ಲ, ರೈತರು ಈ ರಾಷ್ಟ್ರದ ಉಚ್ಚ ನ್ಯಾಯಾಲಯದಲ್ಲಿ ಏನು ವಾದವನ್ನು ಹೂಡುತ್ತಾರೆ ಎಂದರೆ, ಕರ್ನಾಟಕ ರಾಜ್ಯಕ್ಕೆ ನೀವು ನಿರ್ದೇಶನ ಕೊಡಿ ಇಂತಿಷ್ಟು ನೀರನ್ನು ಬಿಟ್ಟುಕೊಡಬೇಕು ಎಂದು. ತೀರ್ಮಾನ ಮಾಡಲಿಕ್ಕೆ ನಿರ್ದೇಶನ ಕೊಡಿ ಎಂದು ವಾದವನ್ನು ಹೂಡುತ್ತಾರೆ. ಇದನ್ನಾಧರಿಸಿ ಉಚ್ಛ ನ್ಯಾಯಾಲಯ ಕೇಂದ್ರ ಸರಕಾರಕ್ಕೆ ನಿರ್ದೇಶನ ಕೊಡುತ್ತದೆ ಈ

ವಿಷಯವನ್ನು, ಈ ವಿವಾದವನ್ನು ತೀರ್ಮಾನಮಾಡಲಿಕ್ಕೆ ನೀವು ಒಂದು ಟ್ರಿಬ್ಯುನಲ್ ಅನ್ನು ಕಾನ್ಸ್ಟಿಟ್ಯೂಟ್ ಮಾಡಿ ಒಂದು ಆಯೋಗ ರಚಿಸಿ ಎಂದು. ಅದರ ಆಧಾರದ ಮೇಲೆ ಆಯೋಗ ರಚನೆಯಾಗುತ್ತದೆ. ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಒಂದು ತೀರ್ಮಾನ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದ ರೈತರು ಈ ವಿವಾದದಲ್ಲಿ ನಮ್ಮನ್ನೂ ಕೂಡ ಭಾಗಸ್ಥರನ್ನಾಗಿ ಮಾಡಿಕೊಳ್ಳಬೇಕು We should be implied as a party in the proceedings ಎಂದು ಪಿಟಿಷನ್ ಏನು ಹಾಕಿದ್ದರು ಅದನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ನನಗೆ ಇದು ಅರ್ಥವಾಗುವುದಿಲ್ಲ. I do not mind even if there is a contempt of Court.

ಸುಪ್ರೀಂ ಕೋರ್ಟಿನವರು ನ್ಯಾಯ ಕೊಡುವುದಕ್ಕೆ ಕುಳಿತಿದ್ದಾರೋ ಅಥವಾ ಅನ್ಯಾಯ ಕೊಡುವುದಕ್ಕೆ ಕುಳಿತಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಕರ್ನಾಟಕ ರಾಜ್ಯದ ರೈತರು ಹಾಕಿದಂತಹ ಪಿಟಿಷನ್ ಏನು ಇದೆ ಅದು ಮೇಂಟೆನಬಲ್ ಅಲ್ಲ, ಅದು ಊರ್ಜಿತವಾಗುವುದಿಲ್ಲವೆನ್ನುವ ತೀರ್ಮಾನವನ್ನು ಕೊಟ್ಟಿದ್ದಾರೆ. Then, how can they maintain the petitions filed by the farmers of Tamil Nadu?

ತಮಿಳುನಾಡಿನ ರೈತರು ಹಾಕಿದಂತಹ ಅರ್ಜಿ ಊರ್ಜಿತವಾಗುವುದಾದರೆ, ತಮಿಳುನಾಡಿನವರು ಹಾಕಿದಂತಹ ಅರ್ಜಿ ಏನು ಇದೆ ಅದಕ್ಕೆ ಜ್ಯೂರಿಸ್‌ಡಿಕ್ಷನ್ ಇದೆ ಎಂದು ಸುಪ್ರೀಂ ಕೋರ್ಟ್ ಭಾವಿಸುವುದಾದರೆ ಕರ್ನಾಟಕ ರಾಜ್ಯದ ರೈತರು ಕೊಟ್ಟಂತಹ ಅರ್ಜಿಯನ್ನು ಪುರಸ್ಕರಿಸಲಿಕ್ಕೆ ಇವತ್ತು ಅಡ್ಡಿ ಯಾವುದು ಇದೆ? I do not know where we have failed. ತಮಿಳುನಾಡಿನ ರೈತರು ಹಾಕಿದಂತಹ ಅರ್ಜಿಯ ಆಧಾರದ ಮೇಲೆ ಇದೆಲ್ಲವೂ ನಡೆಯುತ್ತಿದೆ. ಆದರೆ ಅದೇ ಕರ್ನಾಟಕ ರಾಜ್ಯದ ರೈತರು ಹಾಕಿದಂತಹ ಅರ್ಜಿಯನ್ನು ತಿರಸ್ಕಾರ ಮಾಡುತ್ತಾರೆ. It is not maintainable.

ಆರ್ಡರ್ ಕಾಪಿ ನನ್ನ ಹತ್ತಿರ ಇಲ್ಲ ಅದು ನನಗೆ ಗೊತ್ತಿಲ್ಲ. I do not know what is the basis for their view or for their decision?

ಈ ರಾಜ್ಯದ ಕಾವೇರಿ ನದಿಯ ಆ ಪಾತ್ರದಲ್ಲಿರುವ ಜನರಿಗಾಗಿರುವಂತಹ ಅನ್ಯಾಯದ ಪರಂಪರೆಯಲ್ಲಿ, ದ್ರೋಹದ ಹಿನ್ನೆಲೆಯಲ್ಲಿ ಕೇವಲ ರಾಜ್ಯ ಸರಕಾರಗಳ ಪಾತ್ರ ಅಷ್ಟೇ ಅಲ್ಲ. ಕೇವಲ ರಾಜಕಾರಣಿಗಳ ಪಾತ್ರವಷ್ಟೇ ಅಲ್ಲ. ಇದರಲ್ಲಿ ಕಾನೂನು ಪಂಡಿತರ ಪಾತ್ರ ಇದೆ. ನ್ಯಾಯವನ್ನು ನೀಡಬೇಕಾದ ನ್ಯಾಯ ದೇಗುಲಗಳಾದ ನ್ಯಾಯಾಲಯಗಳ ಪಾತ್ರ ಇದೆ. ಮತ್ತೊಂದು ವಿಷಯವನ್ನು ನಾನು ಹೇಳಬೇಕಾಗಿತ್ತು ಆದರೆ ಮಾನ್ಯ ಕಾನೂನು ಮಂತ್ರಿಗಳು ಎಲ್ಲೋ ಹೊರಟುಹೋಗಿದ್ದಾರೆ. ಅವರು ಒಳಗಡೆ ಬರುವಾಗ ಮಹಾತ್ಮಾ ಗಾಂಧಿಯವರ ರೀತಿ ಬರುತ್ತಾರೆ. ಈ ರೂಪದಲ್ಲಾದರೂ ಮಹಾತ್ಮಾಗಾಂಧಿಯವರನ್ನು ನಾವು ನೋಡುತ್ತಿದ್ದೇವೆಂದು ನಮಗೆ ಒಂದು ರೀತಿಯ ಖುಷಿ ಆಯಿತು. ಮೊನ್ನೆ ಅವರು ಏನೊಂದು ಅಪ್ಪಣೆಯನ್ನು ಕೊಡಿಸಿದ್ದಾರೆ ಎಂಬುದನ್ನು ತಾವು ಕೇಳಬೇಕು. ಸುಪ್ರೀಂ ಕೋರ್ಟ್‌ನವರು ಈ ಅರ್ಜಿಯನ್ನು ತೀರ್ಮಾನ ಮಾಡುವ ಸಂದರ್ಭದಲ್ಲಿ ರಾಜ್ಯಸರ್ಕಾರದ ಪ್ರತಿನಿಧಿಗಳು ಯಾರೂ ಕೂಡ ಕೋರ್ಟ್‌ನಲ್ಲಿ ಇರಲಿಲ್ಲ. ಆದಕ್ಕೆ ಅವರು ಹೇಳುತ್ತಾರೆ, ನಾವು ಹೇಗೆ ಇರುವುದಕ್ಕಾಗುತ್ತದೆ? ನಮಗೆ ನೋಟೀಸ್ ಬಂದಿರಲಿಲ್ಲ. ಆದ್ದರಿಂದ ನಾವು ಅಲ್ಲಿ ಹೇಗೆ ಇರುವುದಕ್ಕೆ ಸಾಧ್ಯವಾಗುತ್ತದೆ ಎಂದು ಮಾನ್ಯ ರಾಮಸ್ವಾಮಿಯವರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ.

ನಾನಾದರೂ ಹೇಳುತ್ತೇನೆ. ಇದು ಬಹಳ ಸಿಲ್ಲಿ ಎಂದು ನಾನು ಹೇಳುತ್ತೇನೆ. ಈ ರಾಜ್ಯದ ಲಕ್ಷಾಂತರ ಜನರ ಬದುಕಿನ ಬವಣೆಯ ವಿಷಯ ಕೋರ್ಟ್‌ನ ಮುಂದಿದೆ. ಆ ದಿನ ಕೋರ್ಟ್‌ನಲ್ಲಿ ಕೇಸು ಇದೆ ಎಂಬುದು ಈ ಸರ್ಕಾರಕ್ಕೆ ಗೊತ್ತಿದೆ. ಈ ಸರ್ಕಾರದ ಪ್ರತಿನಿಧಿಗಳಿಗೆ ಗೊತ್ತಿದೆ. ಅಷ್ಟೇ ಅಲ್ಲ, ಈ ಸರ್ಕಾರದ ವಕೀಲರಿಗೂ ಕೂಡ ಗೊತ್ತಿದೆ. What was the necessity to issue the notice? It is not a small matter? ಇದು ಸಣ್ಣ ವಿಷಯವೇನೂ ಅಲ್ಲ. ಇದು ಅತ್ಯಂತ ಗಂಭೀರವಾದ ವಿಷಯ. ಈ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವಂಥ ವಿಷಯ ಕೋರ್ಟ್‌ನ ಮುಂದೆ ಬರುತ್ತಿದೆ ಎಂದು ಇರುವಾಗ ಇದಕ್ಕೆ ನೋಟೀಸ್ ಕೊಡುವ ಅವಶ್ಯಕತೆಯಾದರೂ ಏನಿದೆ? ಅಂಥ ಅವಶ್ಯಕತೆ ಇರಲಿಲ್ಲ. ಸರ್ಕಾರದ ಬೊಕ್ಕಸದಿಂದ ಹಣ ತೆಗೆದುಕೊಳ್ಳುವ ಸರ್ಕಾರೀ ವಕೀಲರು ಇದನ್ನು ಕಾಯ್ದುಕೊಂಡು ಅಲ್ಲಿ ಬಿದ್ದಿರಬೇಕಾಗಿತ್ತು. ನೀವು ಕೋರ್ಟ್ ಪ್ರೊಸೀಡಿಂಗ್ಸ್‌ನ್ನು ವಾಚ್ ಮಾಡಬೇಕಾಗಿತ್ತು. ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ಇಂಥ ಹೊಣೆಗೇಡಿತನದ....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವ ಅತ್ಯಂತ ಮಹತ್ತರವಾದ ವಿಷಯದ ಬಗ್ಗೆ ಇಷ್ಟೊಂದು ಬೇಜವಾಬ್ದಾರಿ ಹೇಳಿಕೆಯನ್ನು ಅವತ್ತು ಮಾನ್ಯ ಕಾನೂನು ಮಂತ್ರಿಗಳು ಕೊಟ್ಟು ನಮಗೆ ಕೋರ್ಟ್‌ನಿಂದ ನೋಟೀಸ್ ಬಂದಿರಲಿಲ್ಲ ಎಂದು. ಹಾಗಾದರೆ ತಮಿಳ್ನಾಡಿನವರಿಗೆ ನೋಟೀಸ್ ಕೊಟ್ಟಿದ್ದರೆ? ಅವರ ವಕೀಲರು ಅಲ್ಲಿ ಕಾಯ್ದುಕೊಂಡು ಕುಳಿತಿದ್ದರು. ಅಲ್ಲಿನ ಜಸ್ಟೀಸ್‌ರವರು ಹೇಳಬೇಕಾಯಿತು. ಅವರು ತಮಿಳ್ನಾಡಿನ ಅಡ್ವೋಕೇಟ್ಸ್‌ಗೆ ಹೇಳುತ್ತಾರೆ, ನೀವು ಕರ್ನಾಟಕದವರಿಗೆ ಹೇಳಿ, ಅವರಲ್ಲಿ ಅಂಕಿಅಂಶಗಳು ಇದ್ದರೆ, ಅದರ ವಿವರಗಳನ್ನು ಅವರು ನೋಡುವುದಕ್ಕೆ ಹೇಳಿ ಎಂದು ಕೋರ್ಟ್‌ನ ಜಡ್ಜ್ ಆ ತಮಿಳ್ನಾಡಿನ ಅಡ್ವೋಕೇಟ್ಸ್‌ಗೆ ಹೇಳುವಂಥ ದುಃಸ್ಥಿತಿ ಬಂದಿದೆ ಎಂದು ಹೇಳುವುದಾದರೆ, ನಮ್ಮ ರಾಜ್ಯದ ಅಡ್ವೋಕೇಟ್ಸ್ ಎಷ್ಟರಮಟ್ಟಿಗೆ ಪ್ರತಿಪಾದನೆ ಮಾಡಿರಬಹುದೆಂಬುದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ವೈ.ಕೆ.ರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಮ್ಮ ವಿಫಲತೆ ಕೇವಲ ಒಂದು ಕ್ಷೇತ್ರದಲ್ಲಿ ಅಲ್ಲ. ಕೇಸನ್ನು ನಡೆಸುವುದರಲ್ಲೂ ಇದೆ; ಇಚ್ಛಾ ಶಕ್ತಿಯನ್ನು ಪ್ರದರ್ಶನ ಮಾಡುವುದರಲ್ಲೂ ಇದೆ. ಇದು ಒಂದು ಉದಾಹರಣೆ. ಇನ್ನು ನಮ್ಮ ಸರ್ವೋಚ್ಚ ನ್ಯಾಯಾಲಯದ ಮಹಾ ಭೂಪರು, ಅಲ್ಲಿ ಕುಳಿತಿರುವವರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಸೆಕ್ಷನ್ 4 of the Interstate Dispute Act, 3 and 4 ಯಾವಾಗ ಅಡ್ಜುಡಿಕೇಷನ್‌ಗೆ ಕಳುಹಿಸಬಹುದು ಎಂಬುದನ್ನು ಪ್ರಸ್ತಾಪ ಮಾಡುವಾಗ, under section 4, when there is dispute *between* the two States, the aggrieved State can approach the Supreme Court for a direction. That is under. . . ತಾವು ವಕೀಲರಾಗಿರುವುದರಿಂದ ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. If you read Section 3 and 4, it is clear, if the dispute arises between the two States, ಆದರೆ ಪರಿಸ್ಥಿತಿ ಇಲ್ಲಿ ಆ ರೀತಿ ಇಲ್ಲ. ಇಲ್ಲಿ ಈ ವಿವಾದವನ್ನು ಕೋರ್ಟ್‌ನ ಮುಂದೆ ತಂದಿರುವವರು ತಮಿಳ್ನಾಡಿನ ರೈತರು. ತಮಿಳ್ನಾಡು ಸರ್ಕಾರ ಇದನ್ನು ತಂದಿಲ್ಲ. Then, how the Supreme Court have

assumed the jurisdiction to decide a dispute between the farmers of Tamil Nadu and the Karnataka Government.

ನಾವು ನೀವೆಲ್ಲಾ ಇಲ್ಲಿ ಸಣ್ಣಪುಟ್ಟ ಕೋರ್ಟ್‌ಗಳಲ್ಲಿ ವಕೀಲಿವೃತ್ತಿ ಮಾಡುತ್ತಿರುವವರು. ಆದರೆ ಅಲ್ಲಿ ದೊಡ್ಡ ದೊಡ್ಡವರು ಎಂದರೆ ನಾರಿಮನ್ ಮುಂತಾದವರನ್ನು ಅವರು ಇಟ್ಟುಕೊಂಡಿದ್ದಾರೆ. ಅವರು ಈ ವಾದವನ್ನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ವಾದನ್ನು ಕೋರ್ಟ್‌ನವರು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೋ, ಅಥವಾ implead ಮಾಡಿದ್ದಾರೋ ನನಗೆ ಗೊತ್ತಿಲ್ಲ. If Section 3 and 4 laid down that it is only a dispute between the two States, in that dispute if the aggrieved State can approach the Supreme Court, it is only then, they can decide. It is only then they will get the jurisdiction. But, in this case, the one party is the farmers of Tamil Nadu, the aggrieved party is Tamil Nadu farmers and against whom they are coming is the Karnataka Government. How can they decide this matter under Section 3 and 4? ಇದರ ಬಗ್ಗೆ ಕೂಡ ಮಾನ್ಯ ಕಾನೂನು ಮಂತ್ರಿಗಳು ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲುವುದಾದರೆ ಬಹಳ ಒಳ್ಳೆಯದಾಗುತ್ತದೆ. ಆದರೆ ಮಾನ್ಯ ಕಾನೂನು ಮಂತ್ರಿಗಳು ಹೊರಟುಹೋಗುತ್ತಿದ್ದಾರೆ. ಅವರು ಇಲ್ಲಿ ಇದ್ದಿದ್ದರೆ ನಾನು ತುಂಬಾ ಸಂತೋಷಪಡುತ್ತಿದ್ದೆ. ಸ್ವಲ್ಪಹೊತ್ತು ಮಾನ್ಯ ಕಾನೂನು ಮಂತ್ರಿಗಳು ಸದನದಲ್ಲಿದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ನೀವು ಇದ್ದರೆ ನನಗೆ ಸ್ವಲ್ಪ ಇನ್‌ಸ್ಪಿರೇಷನ್ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ನೀವು ಇದ್ದರೆ ಮಾನ್ಯ ಸದಸ್ಯರಿಗೆ ಏನೋ ಸಂತೋಷವಾಗುತ್ತದಂತೆ. ನಿಮ್ಮನ್ನು ನೋಡಿದರೆ ಏನೋ ಒಂದುರೀತಿ ಆಗುತ್ತದಂತೆ.

ಶ್ರೀ ವೈ.ಕೆ.ರಾಮಯ್ಯ :- ನಾನು ಇನ್ನೂ ನೀರಾವರಿಗೆ ಬಂದೇ ಇಲ್ಲ. ಇನ್ನೂ ನಾನು ಕೋರ್ಟ್ ವಿಚಾರದಲ್ಲೇ ಇದ್ದೇನೆ.

1.00 ಪಿ.ಎಂ

ಶ್ರೀ ಜಿ.ಪುಟ್ಟಸ್ವಾಮಿ ಗೌಡ :- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಮಯ್ಯನವರು ಸೆಕ್ಷನ್ 4ನ್ನು quote ಮಾಡುತ್ತಾ ಎರಡು ಸರ್ಕಾರಗಳ ಮಧ್ಯದಲ್ಲಿರತಕ್ಕಂಥ ವಿವಾದಗಳು ಅಥವಾ aggrieved ಆಗಿರತಕ್ಕಂಥವರು ಕೋರ್ಟಿಗೆ ಹೋಗಬೇಕಾಗಿತ್ತು, ಸುಪ್ರೀಂ ಕೋರ್ಟ್ ಅದನ್ನು ಗಣನೆಗೆ ತೆಗೆದುಕೊಳ್ಳದೆ ರೈತರು ಹಾಕಿರುವಂಥದ್ದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆಂದು ಈಗತಾನೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಅದು ಹಾಗಲ್ಲ. 1986ನೇ ಇಸವಿಯಲ್ಲಿ ತಂಜಾವೂರಿನ ರೈತರು ಸುಪ್ರೀಂ ಕೋರ್ಟ್‌ನಲ್ಲಿ ತಮ್ಮ ಅರ್ಜಿಯನ್ನು ಸಲ್ಲಿಸಿದಾಗ 1987ರಲ್ಲಿ ತಮಿಳುನಾಡಿನ ಸರ್ಕಾರ ನನ್ನನ್ನೆ ಪಾರ್ಟಿ ಮಾಡಬೇಕು ಎಂದು ಹೇಳಿ ಇಂಪ್ಲಿಡಿಂಗ್ ಅರ್ಜಿ ಹಾಕಿ ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡಿದೆ ಎನ್ನುವಂಥದ್ದನ್ನು ಅವರ ಗಮನಕ್ಕೆ ತರಬಯಸುತ್ತೇನೆ. ತದನಂತರ 1988ರಲ್ಲಿ ಅವಾರ್ಡ್, ಇಂಟರಿಮ್ ಆರ್ಡರ್ ಮಾಡುವಂಥದ್ದಕ್ಕೆ ಸುಪ್ರೀಂ ಕೋರ್ಟ್ ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ಆ್ಯಕ್ಟ್ ಕೆಳಗಡೆ ಡಿಸಿಷನ್ ತೆಗೆದುಕೊಂಡಿದ್ದನ್ನು ಅವರ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವೈ.ಕೆ.ರಾಮಯ್ಯ :- ಆ ವಿಷಯ ನನ್ನ ಹತ್ತಿರ ಇದೆ.

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಸನ್ಮಾನ್ಯ ಪುಟ್ಟಸ್ವಾಮಿಯವರು ಹೇಳಿದ್ದುದು ಸರಿ; But the question is, whether the Supreme Court has jurisdiction at all over the inter-State Water disputes.

ಸಂವಿಧಾನದಲ್ಲಿ ಸ್ಪೆಸಿಫಿಕ್ಕಾಗಿ ಒಂದು ವಿಧಿ ಇದೆ. excluding the jurisdiction of the Supreme Court itself.

ಹಿಂದೆ ಕರ್ನಾಟಕದವರೇ ಹೋದಾಗ ಆಗ ನಮಗೆ ಜ್ಯೂರಿಸ್ಡಿಕ್ಷನ್ ಇಲ್ಲ ಎಂದು ಹೇಳಿದ್ದುದು ಇದ್ದೇ ಇದೆ. ಹೇಗೆ ಜ್ಯೂರಿಸ್ಡಿಕ್ಷನ್ ಇದ್ದಕ್ಕಿದ್ದ ಹಾಗೆ ಅದು ಎಕ್ಸ್‌ರ್‌ಸೈಜ್ ಹೇಗೆ ಮಾಡಿತು ಎನ್ನುವುದು ಪ್ರಶ್ನೆ. That itself is an unconstitutional. The Supreme Court itself has done an unconstitutional act.

SRI D.B.CHANDRE GOWDA:- I would like to know from the Professor. Supreme Court lays down certain principles by way of decisions or otherwise. Can we take up these issues to Privy Council? That has become the law of the land. What is the remedy to this?

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ರೆಮಿಡಿ ಹೇಳುತ್ತೇನೆ. ಸುಪ್ರೀಂ ಕೋರ್ಟ್ ಮೇಲೆ ನಾವು ಹಿಂದಿನಿಂದ ಒಂದು ಸಂಪ್ರದಾಯವನ್ನು ಹೇರಿದ್ದು. ತನ್ನ ತೀರ್ಮಾನಗಳನ್ನು ಪದೇ ಪದೇ ಅದು ಬದಲಾಯಿಸಬಾರದು. ಈ ಶಿಸ್ತಿನಲ್ಲಿ ಸುಪ್ರೀಂ ಕೋರ್ಟ್ ಇರಬೇಕು. ಈ ಶಿಸ್ತನ್ನು ಕಳೆದುಕೊಂಡ ಮೇಲೆ ಅದು ಸುಪ್ರೀಂ ಕೋರ್ಟ್ ಎಂದು ಕರೆಯಿಸಿಕೊಳ್ಳುವಂತಹ ಯೋಗ್ಯತೆಯನ್ನು ಕಳೆದುಕೊಳ್ಳುತ್ತದೆ. That is the reason that we have imposed this kind of restriction on the Supreme Court. It centres round the principle of "Stare decicis". ಸ್ಟಾರಡೈಸಿಸ್‌ನ ಒಂದು ಕಲ್ಪನೆ ಏನು ಎಂದರೆ, ಪೂರ್ವ ತೀರ್ಮಾನಗಳನ್ನು ಯಾವುದೇ ದೇಶದ ಸರ್ವೋಚ್ಚ ನ್ಯಾಯಾಲಯವು ಪದೇ ಪದೇ ಬದಲಾಯಿಸಬಾರದು. The reason is that there is no court above that.

ಆದರೆ ನಮ್ಮ ಸರ್ವೋಚ್ಚ ನ್ಯಾಯಾಲಯ ಮಾಡಿರುವುದನ್ನು ನೋಡಿದರೆ It is unfit to be called as Supreme Court. I am not committing the contempt of Court also.

SRI D.B.CHANDRE GOWDA:- My question is, what is the remedy?

PROF.M.D.NANJUNDSWAMY:- The remedy is to reject whatever it has said. The Supreme Court verdict should be subjected to peoples' review.

ಶ್ರೀ ವೈ.ಕೆ.ರಾಮಯ್ಯ :- ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚಂದ್ರೇಗೌಡರು ಇದಕ್ಕೆ ಪರಿಹಾರ ಏನು ಎಂದು ಕೇಳಿದರು. ಅದು ಕನ್‌ಟೆಮ್ಪ್ಟ್ ಆಗುತ್ತದೆಯೋ, ಜೈಲಿಗೆ ಕಳುಹಿಸುತ್ತಾರೊ, ಪರವಾಗಿಲ್ಲ,

I will also join my friends to condemn this judgement to say that it is wrong. ಮಾನ್ಯ ಚಂದ್ರೇಗೌಡರು ಇದಕ್ಕೆ ರೆಮಿಡಿ ಏನು ಎಂದು ಕೇಳುತ್ತಿದ್ದಾರೆ. ಅದಕ್ಕೆ ನನಗೆ ಕಾಣುವುದು ಒಂದೇ ದಾರಿ. ಕರ್ನಾಟಕ ಸರ್ಕಾರಕ್ಕೆ, ಕರ್ನಾಟಕ ಜನತೆಗೆ ಗಂಡಸುತನ ಬೇಕಾಗುತ್ತದೆ ಅದೊಂದೆ ರೆಮಿಡಿ. We should reject the judgement. We should reject the decision and we should say that we are entitled to make use of water.

ಅದನ್ನು ಮಾಡುವುದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ.

PROF.M.D.NANJUNDSWAMY:- There is no other Constitutional way out. We have correctives to rectify administrative actions i.e., the Supreme Court. We have provisions for judicial/review of administrative action. What do you do when the Judiciary itself commits an Unconstitutional Act. The only logical way out is to subject the Judicial action to People's review. There is no other alternative.

ಶ್ರೀ ವೈ.ಕೆ. ರಾಮಯ್ಯ : - ಸನ್ಮಾನ್ಯ ಅಧ್ಯಕ್ಷರೇ, ನಾನು ಅದೇ ಮಾತು ಹೇಳುವುದು. ಅವರು ನಯವಾಗಿ ಹೇಳಿದರು, ನಾನು ಅದನ್ನು ಸ್ವಲ್ಪ ಒರಟಾಗಿ ಹೇಳಿದೆ. ಈ ರಾಷ್ಟ್ರದ ಅತ್ಯಂತ ಎತ್ತರದಲ್ಲಿ ಕುಳಿತಿರುವಂತಹ ಜನಗಳು ತಪ್ಪು ಮಾಡಿದಾಗ, ನ್ಯಾಯವನ್ನು ಕೊಡಬೇಕಾದವರು, ಅನ್ಯಾಯ ಮಾಡಿದಾಗ, ವಿವೇಕದ ದಾರಿಯಲ್ಲಿ ನಡೆಯಬೇಕಾದವರು ಅವಿವೇಕದ ದಾರಿಯಲ್ಲಿ ಹೋದಾಗ, ಜನತೆಗೆ ಇರುವುದು ಒಂದೇ ಒಂದು ದಾರಿ, ಅದು ಆ ಕಾನೂನನ್ನು ತುಚ್ಛವಾಗಿ ಕಾಣುವಂಥಾದ್ದು. There is no alternative for us.

ಮಾಜಿ ನೀರಾವರಿ ಸಚಿವರು ಅಪ್ಪಣೆ ಕೊಡಿಸಿದರು, ಇದಕ್ಕೆ ಸೆಕ್ಷನ್ 4 ಇದಕ್ಕೆ ಅಪ್ಲೈ ಆಗುವುದಿಲ್ಲ ಎಂದು. ಏಕೆಂದರೆ, ತಾವು ವಕೀಲರಾಗಿರುವುದರಿಂದ ನಾನು ಅದನ್ನು ಓದಿಯೇ ಬಿಡುತ್ತೇನೆ. ಇದಕ್ಕೆ ತಾವು ಸಮಯ ಕೊಡಬೇಕಾಗುತ್ತದೆ. ಇದು ಇವತ್ತು ಮುಗಿಯುವುದಿಲ್ಲ, ಇವತ್ತೆಲ್ಲ ಇದರ ಬಗ್ಗೆ ನಾನೇ ಮಾತನಾಡುತ್ತೇನೆ. ನಾನು ಇದನ್ನು ಓದಿದ ಮೇಲೆ ಬೇಕಾದರೆ ನೀವು ನೋಡಿ.

Section-3 of the inter-State Water Disputes Act, 1956 reads thus:

> "It appears to the Government of any State that water dispute with the Government of other State has arisen or is likely to arise by a reason of the fact that the interest of the State or any of the inhabitants thereof in the waters of the inter-State River Dispute Valley have been affected or likely to be affected prejudicially".

ಇಲ್ಲಿರುವಂತಹ ವ್ಯಾಜ್ಯ ತಮಿಳುನಾಡಿನ ರೈತರಿಗೆ ಮತ್ತು ಕರ್ನಾಟಕದ ಸರ್ಕಾರಕ್ಕೆ Therefore, it is only in respect of the State ಇದು ಒಂದು. ಎರಡನೆಯದು ತಮಿಳುನಾಡಿನ

ರೈತರ ಹಿತಾಸಕ್ತಿಯನ್ನು ಕಾಪಾಡುವಂತಹ ಜೂರಿಸ್‌ಡಿಕ್ಷನ್ ಸುಪ್ರೀಂ ಕೋರ್ಟಿಗೆ ಬರುವುದಾದರೆ, ಕರ್ನಾಟಕದ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡುವಂತಹ ಜೂರಿಸ್‌ಡಿಕ್ಷನ್ ಅವರಿಗೆ ಏಕೆ ಬರುವುದಿಲ್ಲ? Thirdly, I am not reviewing the judgement. But as an Advocate of very ordinary standard, I read the judgement carefully. Even factually also ಈ ಜಡ್ಜಮೆಂಟ್‌ನಲ್ಲಿ ನಾನು ನ್ಯೂನ್ಯತೆಯನ್ನು ಕಂಡೆ. ಅದು ಏನೆಂದರೆ, ಅವರು ಜಡ್ಜ್‌ಮೆಂಟ್ ಬರೆಯುತ್ತಾ ಒಂದು ಮಾತನ್ನು ಹೇಳುತ್ತಾರೆ.

"There was a time after the dispute arose when the Government in the State of Karnataka and Tamilnadu as also at the Centre were run by one common political Party".

What a pity? ಸುಪ್ರೀಂ ಕೋರ್ಟ್‌ನಲ್ಲಿ ಕುಳಿತುಕೊಂಡು ಇಂತಹ ಮಹತ್ತರವಾದಂತಹ ವಾದವಿವಾದಾಗಳನ್ನು ಕೇಳಿ ತೀರ್ಮಾನ ಕೊಡುವಂತಹ ನ್ಯಾಯಾಧೀಶರುಗಳಿಗೆ ಇಂತಹ ಒಂದು ಸಣ್ಣ ವಿಷಯವೂ ಕೂಡ ಗೊತ್ತಾಗುವುದಿಲ್ಲವೇ ಎಂದು ನನಗೆ ಅನಿಸುತ್ತದೆ. 20 ವರ್ಷಗಳಿಂದ ಕರ್ನಾಟಕದಲ್ಲಿ ತಮಿಳುನಾಡಿನಲ್ಲಿ, ಕೇಂದ್ರದಲ್ಲಿ ಒಂದೇ ಪಕ್ಷದ ಸರ್ಕಾರ ಇತ್ತು ಎನ್ನುವಂತಹ ಅಭಿಪ್ರಾಯವನ್ನು ರೆಕಾರ್ಡ್ ಮಾಡುವಂತಹ ದಡ್ಡತನವನ್ನು ಇವರು ಮಾಡಬಾರದಾಗಿತ್ತು. We have not seen the Congress Government in Tamilnadu for more than a decade or two. If I am correct. ಸುಮಾರು 20 ವರ್ಷಗಳ ಮಧ್ಯೆ ಯಾವಾಗಲಾದರೂ ಬಂದಿತ್ತೋ ಏನೋ ನನಗೆ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಬಹುಶಃ ಕೊನೇ ಯತ್ನ ಮಾಡಿದರು. ಆದುದರಿಂದ ಕಾಂಗ್ರೆಸನ್ನು ಸ್ವಾಗತಿಸುವಷ್ಟು ವಿಶಾಲವಾದಂತಹ ಬುದ್ಧಿಯನ್ನು ತಮಿಳುನಾಡಿನವರು ತೋರಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರಾಜಕೀಯ ಉದ್ದೇಶಕಾಗಿ ಅಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, The judgement is even factually incorrect. ಇದನ್ನು ನೋಡಿದಾಗ ನನಗೆ ಒಂದು ಅನುಮಾನ ಬಂದಿತು. To confirm my worst suspicion ಅದಕ್ಕೆ ಆಧಾರ ಕೂಡ ಇದೆ. ಈ ಅನುಮಾನ ಏನೆಂದರೆ, ಶ್ರೀಯುತ ಬಂಗಾರಪ್ಪನವರು ಈ ಸದನದಲ್ಲಿ ಒಂದು ಯುನಾನಿಮಸ್ ರೆಸಲ್ಯೂಷನ್ ಮಾಡಿ, ಅದು ತಪ್ಪೋ ಸರಿಯೋ, ಒಂದು ಆರ್ಡಿನನ್ಸ್ ಮಾಡಿ, ರಾಜ್ಯದ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಪ್ರಯತ್ನ ಪಟ್ಟಂತಹ ಕಾಲದಲ್ಲಿ, ಆ ನಮ್ಮ ಆರ್ಡಿನೆನ್ಸ್‌ನ ಸಿಂಧುತ್ವವನ್ನು, ಆ ವ್ಯಾಲಡಿಟಿಯನ್ನು ಪರೀಕ್ಷೆ ಮಾಡಲಿಕ್ಕೆ ಅವತ್ತಿನ ರಾಷ್ಟ್ರಾಧ್ಯಕ್ಷರು ಸುಪ್ರೀಂ ಕೋರ್ಟಿಗೆ ಕಳುಹಿಸಿದಂತಹ ಒಂದು ನಿದರ್ಶನ -ಇದು ನನಗೆ ಯಾವುದೋ ಒಂದು ಕಾಣದ ಕೈ ಈ ಸುಪ್ರೀಂ ಕೋರ್ಟಿನ ತೀರ್ಮಾನಗಳಲ್ಲಿ ಕೆಲಸ ಮಾಡುತ್ತಾ ಇದೆ ಎನ್ನುವಂತಹ ಅನುಮಾನವನ್ನು ಹುಟ್ಟಿಸಿತು. ಈ ರಾಷ್ಟ್ರದ ಇತಿಹಾಸದಲ್ಲಿ ಕರ್ನಾಟಕ ರಾಜ್ಯದಂಥ ಒಂದು ರಾಜ್ಯ- ಆ ರಾಜ್ಯದ ಜನ ಪ್ರತಿನಿಧಿಗಳ ಆದೇಶದ ಮೇರೆಗೆ ನಾವು ಮಾಡಿದಂತಹ ಒಂದು ಆರ್ಡಿನನ್ಸ್ ಇದು. ಆ ಆರ್ಡಿನನ್ಸ್ ನಂತರ ಕಾನೂನು ಕೂಡ ಆಯಿತು. ಅದರ ಸಂಧುತ್ವವನ್ನು ಪರೀಕ್ಷೆ ಮಾಡಲಿಕ್ಕೆ ಅಂದಿನ ರಾಷ್ಟ್ರಾಧ್ಯಕ್ಷರಾದಂತಹ ಶ್ರೀಮಾನ್ ವೆಂಕಟರಾಮನ್‌ರವರು ಸುಪ್ರೀಂ ಕೋರ್ಟಿಗೆ ರೆಫರ್ ಮಾಡುವಂತಹ ಅವಶ್ಯಕತೆ ಏನು ಇತ್ತು ಎಂದು ನನ್ನ ಭಾವನೆ. ಯಾವುದೇ ಮಾಡದೇ ಇದ್ದಂತಹವರು

ಈಗ ಏಕೆ ಇದ್ದಕಿದ್ದ ಹಾಗೆ ಎದ್ದುಬಿಟ್ಟರು? ಆದಕ್ಕಾಗಿ ನಾನು ಹೇಳುತ್ತಿರುವುದು. ಈ ಕರ್ನಾಟಕ ರಾಜ್ಯದ ಕಾವೇರಿ ನೀರಿನ ಬವಣೆಯಲ್ಲಿ ಆಗಿರುವಂತಹ ಅನ್ಯಾಯದ ಪರಂಪರೆಯಲ್ಲಿ ಕೋರ್ಟ್‌ಗಳ ಪಾತ್ರ ಇದೆ, ರಾಜಕಾರಣಿಗಳ ಪಾತ್ರ ಇದೆ, ಭಾಷೆಯ ಪಾತ್ರ ಇದರ ಒಳಗಡೆ ಇದೆ. ಅದು ಯಾರ ಕೈವಾಡ ಏನಿದೆಯೋ, ವಿಧಿಯಿಲ್ಲದೆ, ಒಬ್ಬ ವಕೀಲನಾಗಿ, ನ್ಯಾಯ ಪೀಠದಲ್ಲಿ ಅತ್ಯಂತ ಗೌರವವನ್ನು ಹೊಂದಿರತಕ್ಕಂಥ ನಾನು ಇವತ್ತು ನನ್ನ ಸ್ನೇಹಿತರಾದಂಥ ಮಾನ್ಯ ನಂಜುಂಡಸ್ವಾಮಿಯವರ ಜೊತೆಯಲ್ಲಿ ಸೇರಿಕೊಳ್ಳಬೇಕಾಗುತ್ತದೆ. ಈ ಸುಪ್ರೀಂ ಕೋರ್ಟ್ ಅಥವಾ ಉಚ್ಚ ನ್ಯಾಯಾಲಯ ಕೊಟ್ಟಿರತಕ್ಕಂಥ ತೀರ್ಪು ಅನ್ಯಾಯದ ತೀರ್ಪು, ಎಂದರೆ ಹೇಳಬೇಕಾಗುತ್ತದೆ. ಈ ಒಂದು ಅನ್ಯಾಯದ ತೀರ್ಪಿಗೆ ಅಪೀಲ್ ಇಲ್ಲ. ಅದನ್ನೇ ಸನ್ಮಾನ್ಯ ಚಂದ್ರೇಗೌಡರು ಹೇಳಿದರು. ಆದಕ್ಕೆ ಇರುವಂಥ ಒಂದೇ ಒಂದು ಮಾರ್ಗವೆಂದರೆ ನನ್ನ ಪ್ರಕಾರ ಈ ಜನರ ಶಕ್ತಿಯನ್ನು ಒಗ್ಗೂಡಿಸ ಈ ಸುಪ್ರೀಮ್ ಕೋರ್ಟಿನ ತೀರ್ಮಾನವನ್ನು ನಾವು ಕಸದ ಬುಟ್ಟಿಗೆ ಹಾಕಬೇಕಾಗುತ್ತದೆ. We should reject with all force ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೆ ಈ ಅನ್ಯಾಯದ ಪರಂಪರೆ ಇಲ್ಲಿಗೆ ನಿಲ್ಲಲಿಲ್ಲ. ನಾನು ಈಗಾಗಲೇ ಹೇಳಿದಹಾಗೆ, 1891ರಿಂದ ಸತತವಾಗಿ ಇಂಥ ಒಂದು ಪರಿಸ್ಥಿತಿ ಇದ್ದಾಗಲೂ ಕೂಡ, ಈ ಪರಿಸ್ಥಿತಿಯನ್ನು ನಿವಾರಣೆ ಮಾಡಲಿಕ್ಕೆ, ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ನಮ್ಮ ಸರ್ಕಾರಗಳು, ನಾನು ಒಂದು ಸರ್ಕಾರದಲ್ಲಿ ಮಂತ್ರಿಯಾಗಿದ್ದವನು, ನಾವು ಪ್ರಾಮಾಣಿಕವಾದಂಥ ಒಂದು ಪ್ರಯತ್ನವನ್ನು ಮಾಡಿದ್ದೇವೆಯೆ? ಇಲ್ಲ. ಸಾಕಷ್ಟು ಹಣವನ್ನು ಒದಗಿಸಿ, ಬೇಕಾದಷ್ಟು ರಾಜಕೀಯ ಇಚ್ಚಾಶಕ್ತಿಯನ್ನು ಪ್ರದರ್ಶನ ಮಾಡಿ ಕೆಲಸ ಮಾಡಿದ್ದಿದ್ದರೆ ನಮಗೆ ಈ ರೀತಿಯಾದ ಒಂದು ದುಸ್ಥಿತಿ ಬರುತ್ತಿರಲಿಲ್ಲ. ಆದರೆ ಅದನ್ನು ನಾವು ಮಾಡಲಿಲ್ಲ. ಇಂಥ ಒಂದು ವಿಶೇಷವಾದಂಥ ಪರಿಸ್ಥಿತಿ ನಮ್ಮ ಮುಂದೆ ಇದೆ, ಇಂಥ ಒಂದು ಗಂಭೀರವಾದಂಥ ಪರಿಸ್ಥಿತಿ ನಮ್ಮ ಮುಂದೆ ಇದೆ. ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ, ನಿಮ್ಮ ಸರ್ಕಾರದವರು ಕೊಟ್ಟಿರತಕ್ಕಂಥ ಎಕನಾಮಿಕ್ ಸರ್ವೆ. -1992-93 ಯನ್ನು ಓದಲೇ? ಅದು ನನ್ನದಲ್ಲ ನಾನು ಹೇಳುವುದನ್ನು ಕೇಳಬೇಡಿ. Economic Survey for 1992-93:

"The achievement in terms of the creation of irrigation potentialities under major and medium irrigation appears to be not commensurate with the investment..."

That is what your Government has stated in the economic Survey ಈಗ ಹೇಳಿ ಪ್ರಾಮಾಣಿಕವಾದಂಥ ಪ್ರಯತ್ನವನ್ನು ನಾವು ಮಾಡಿದ್ದೇವೆಯೋ ಇಲ್ಲವೋ ಎಂದು ಪ್ರಾಮಾಣಿಕವಾದ ಪ್ರಯತ್ನ ನಡೆದಿಲ್ಲವೆಂದು ಸರ್ಕಾರದವರು ಒದಗಿಸಿಕೊಟ್ಟಿರತಕ್ಕಂಥ ಆರ್ಥಿಕ ಸಮೀಕ್ಷೆಯ ಪುಸ್ತಕದಲ್ಲಿ ವರದಿಯಾಗಿದೆ. ಇದು ಒಂದು. ಸನ್ಮಾನ್ಯ ಅಧ್ಯಕ್ಷರೇ, ಇದು ಅನ್ಯಾಯದ ಪರಂಪರೆ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯದ ರೈತರ ಬದುಕಿನ ಮೋಸದ ಪರಂಪರೆ. ಪ್ರತಿವರ್ಷವೂ ಕೋಟಿಗಳ ಲೆಕ್ಕವನ್ನು ಆಯವ್ಯಯದಲ್ಲಿ ತೋರಿಸಿ ಆ ಅಂಕಿಅಂಶಗಳ ಮಾಯಾಜಾಲದಲ್ಲಿ ಈ ರೈತರನ್ನು ಎತ್ತಿಕೊಂಡು ಹೋಗತಕ್ಕಂಥ ಪ್ರಯತ್ನ ಎಲ್ಲಾ ಕಾಲದಲ್ಲೂ ನಡೆದಿದೆ. 900 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುವುದು 9ಕೋಟಿ ರೂಪಾಯಿಗಳನ್ನೂ

ಖರ್ಚುಮಾಡದಿರುವುದು. ಅದಕ್ಕೆ ಇಲ್ಲಿ ನೋಡಿ; ಅದು ಏನಾಗಿದೆ ಎನ್ನುವುದನ್ನು ಹೇಳುತ್ತೇನೆ. ಇದು ಕಳೆದ ವರ್ಷದ್ದು ಸ್ವಾಮಿ, ಈ ವರ್ಷ ಅದೆಷ್ಟು ಖರ್ಚು ಮಾಡಿದ್ದಾರೋ ಅದನ್ನು ಮಾನ್ಯ ನೀರಾವರಿ ಮಂತ್ರಿಗಳು ಕೊಡುತ್ತಾರೆ.

· "During the current year 66,000 hectares of additional irrigation potential was created"

ಅದು ಬೇಡಿ. ಈಗ ಏಕ್‌ದಂ ದುಡ್ಡಿಗೆ ಬಂದುಬಿಡುತ್ತೇನೆ. This is relevant for me.

"The expenditure under major and medium irrigation plan project from 1992-93 up to the end of November, 1992 is 170 crores as against a budget provision of 275 crores"

ಇದನ್ನು ಅನ್ಯಾಯದ ಪರಂಪರೆ ಎಂದು ಒಪ್ಪಿಕೊಳ್ಳುತ್ತೀರೋ, ಮೋಸದ ಜಾಲವನ್ನು ನಮ್ಮ ರೈತರ ಮೇಲೆ ಬೀಸುತ್ತಿದ್ದೇವೆ ಎಂದು ಒಪ್ಪಿಕೊಳ್ಳುತ್ತಿರೋ ಇಲ್ಲವೋ ಎನ್ನುವುದನ್ನು ಹೇಳಿ. Only 170 crores was the expenditure incurred as against a budget provision of 275 crores. ಅದಕ್ಕಾಗಿ ನಾನು ಹೇಳಿದ್ದುದು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುವುದರಲ್ಲಿ ಅಷ್ಟೇ ಅಲ್ಲ, ಹಣ ಖರ್ಚು ಮಾಡುವುದರಲ್ಲಿಯೂ ಕೂಡ ನಾವು ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಈಗಿನ ನೀರಾವರಿ ಸಚಿವರು ಈ ಸಾರಿ ಆಯವ್ಯಯದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಒಂದು ಪ್ರಾಮಾಣಿಕ ಮಾತನ್ನು ಆಡಿದ್ದಾರೆ. ಆ ಮಾತು ಏನೆಂದರೆ, ಎಲ್.ಓ.ಸಿ. ಎಂಬುದು, ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ತರುವಂತಹ, ಆಯವ್ಯಯಕ್ಕೆ ಅಪಚಾರ ಮಾಡುವಂತಹ ಒಂದು ಅನಿಷ್ಟ ಪದ್ಧತಿ. ಇದನ್ನು ಏಕೆ ತಂದಿದ್ದಾರೆ, ಏಕೆ ಇಟ್ಟಿದ್ದಾರೆ? ಆಯವ್ಯಯಕ್ಕೆ ಅಪಚಾರ ಮಾಡುವಂಥ, ಅಭಿವೃದ್ಧಿ ಕಾರ್ಯಗಳಿಗೆ ಆತಂಕ ತರುವಂಥ ಅಡ್ಡಿ ಮಾಡುವಂಥ ಎಲ್.ಓ.ಸಿ. ಪದ್ಧತಿಯನ್ನು ಏತಕ್ಕೆ ತಂದಿದ್ದಾರೆಂಬುದು ನೀರಾವರಿ ಮಂತ್ರಿಗಳಿಗೆ ಅವತ್ತಿಗಿಂತ ಇವತ್ತು ಅರ್ಥವಾಗಿದೆ ಎಂದು ಭಾವಿಸುತ್ತೇನೆ. ಬಹುಶಃ ಅವತ್ತು ಅವರಿಗೆ ಅರ್ಥವಾಗಿರಲಿಲ್ಲವೆಂದು ಕಾಣುತ್ತದೆ. ದುರದೃಷ್ಟವಶಾತ್ ಮಹಾಭಾರತದಲ್ಲಿ ಕೌರವನಿಗೆ ಬಂದ ಹಾಗೆ ಎಲ್ಲಾ ಒಂದೇ ಸಾರಿ ಬರುತ್ತದೆ. ಈ ಎಲ್ಲಾ ಸರ್ಕಾರದಲ್ಲಿ, ಎಲ್ಲಾ ಕಾಲದಲ್ಲಿ ನೀರಾವರಿ ಮಂತ್ರಿಗಳೇ ಡಿಸಿಡೆಂಟ್ ಲೀಡರ್ ಆಗಬೇಕೇ ನಮ್ಮ ದುರಾದೃಷ್ಟಕ್ಕೆ. ಎಕ್ಸೈಜ್ ಮಂತ್ರಿಗಳಾಗಲಿ, ಎಕ್ಸೈಜ್ ಹಾಳಾಗಿ ಹೋಗಲಿ, ನಮಗೆ ಏಕೆ ಬೇಕಾಗಿದೆ? ಇದು ನಮ್ಮ ದುರಾದೃಷ್ಟ ಅಲ್ಲವೆ? ಅದಕ್ಕೆ ಕೌರವನಿಗೆ ಹೇಳುವುದು; ನಿನಗೆ ಎಲ್ಲವೂ ಪ್ರತಿಕೂಲವಾಗಿದೆ ಎಂದು. ನಮ್ಮ ಸರ್ಕಾರದಲ್ಲೂ ಅದೆ, ಈ ಸರ್ಕಾರದಲ್ಲೂ ಅದೇ ನಡೆಯುತ್ತಿದೆ. ಆದಕ್ಕಾಗಿ ಎಲ್.ಓ.ಸಿ. ಪದ್ಧತಿಗೆ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಎಲ್.ಓ.ಸಿ.ಯನ್ನು ಏತಕ್ಕೆ ಮುಖ್ಯ ಮಂತ್ರಿಗಳು ಇಟ್ಟು ಕೊಳ್ಳುತ್ತಾರೆಂದು ಅವರಿಗೂ ಗೊತ್ತಿದೆ. ಅವರು ಕೂಡ ನೀರಾವರಿ ಸಚಿವರಾಗಿದ್ದರು. It is a bridle to ride the Irrigation Minister.I can't say more than that. LOC are retained to ride, control, and to bring to book the Irrigation Ministry. ಈ ಅನಿಷ್ಟ ಪದ್ಧತಿಯ ಪ್ರತಿಫಲ ಏನಾಗಿದೆ ಎಂದರೆ, ಅದಕ್ಕೆ ಕಳೆದ ವರ್ಷದ:ಕಥೆಯನ್ನು ಆರ್ಥಿಕ ಸಮೀಕ್ಷೆಯಲ್ಲಿ ಕೊಟ್ಟಿರುವುದನ್ನು ಓದಿ ಹೇಳಿದ್ದೇನೆ. ಮತ್ತೊಂದು ಮಾತನ್ನು ತುಮಕೂರು ಜಿಲ್ಲೆಯ ಸ್ನೇಹಿತರಿಗೆ

ಅನುಕೂಲವಾಗಲಿ ಎಂದು ನೀರಾವರಿ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಂಥ ಒಂದು ವಿಶೇಷ ಪರಿಸ್ಥಿತಿ ಇದ್ದಾಗಲೂ ಕೂಡ, ಕಷ್ಟದ ಪರಿಸ್ಥಿತಿ ಇದ್ದಾಗಲೂ ಕೂಡ ಈ ಸರ್ಕಾರಗಳು ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ ಎಂಬುದಕ್ಕೆ, ಹೇಮಾವತಿ ಕೆಲಸಕ್ಕೆ ತುಮಕೂರು ಜಿಲ್ಲೆಯಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನೀವು ಕೊಟ್ಟಿರುವ ಹಣ; ಮತ್ತು ಕೊಡಬೇಕಾದ ಹಣವನ್ನು ಓದುತ್ತೇನೆ ದಯವಿಟ್ಟು ತಿಳಿದುಕೊಳ್ಳಿ. ಅಕ್ಟೋಬರ್ ತಿಂಗಳಲ್ಲಿ grant in lakhs. LOC was issued for 544 lakhs. 544 ಲಕ್ಷ ರೂಪಾಯಿ ಕೊಡಬೇಕಾದ ಕೆಲಸಕ್ಕೆ ಆ ವರ್ಷ ಕೊಟ್ಟಿರುವ ಹಣ 2 ಲಕ್ಷದ 48 ಸಾವಿರ ರೂಪಾಯಿಗಳು. ಇದು ನಾಚಿಕೆಗೇಡಿನ ಪರಿಸ್ಥಿತಿ ಅಲ್ಲವೆ? ಅಲ್ಲಿ ಕುಳಿತುಕೊಂಡು 11 ಲಕ್ಷ ಎಕರೆಗಿಂತ ನೀರಾವರಿಯನ್ನು ಜಾಸ್ತಿ ಮಾಡಬೇಡಿ ಎಂದು ಸುಪ್ರೀಂ ಕೋರ್ಟಿನ ಮಹಾ ಪ್ರಭುಗಳು ಅಪ್ಪಣೆ ಕೊಡುತ್ತಾರೆ. 544 ಲಕ್ಷ ರೂಪಾಯಿಗಳನ್ನು 2 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಲ್ಲ, ಈ ಸರ್ಕಾರಕ್ಕೆ ನಾಚಿಕೆಯಾಗುವುದಿಲ್ಲವೆ? ನಿಮ್ಮನಿಮ್ಮಲ್ಲಿ ವ್ಯತ್ಯಾಸವಿದ್ದರೆ ನಿಮ್ಮ ನೀರಾವರಿ ಮಂತ್ರಿಗಳು ಸರಿಯಾಗಿ ಕೆಲಸ ಮಾಡದಿದ್ದರೆ ಡಿಸ್‌ಮಿಸ್ ಮಾಡಿ ಎಂದು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಮಾನ್ಯ ನೀರಾವರಿ ಸಚಿವರಿಗೆ ಅವರಿಗಿಂತ ಚಿಕ್ಕವನಾಗಿ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾವೇರಿ ನದಿ ಪಾತ್ರದಲ್ಲಿ ಇರುವ ಜನರ ರಕ್ಷಣೆ ಮಾಡುವಂಥ ಜವಾಬ್ದಾರಿ ನಿಮ್ಮ ಸರ್ಕಾರದ್ದು, ಮಂತ್ರಿಗಳದ್ದು ಅಷ್ಟೇ ಅಲ್ಲ, ಒಬ್ಬ ಮಣ್ಣಿನ ಮಗನಾಗಿರುವಂಥ ಋಣ ಇದೆ. ನಿಮ್ಮ ಮುಖ್ಯ ಮಂತ್ರಿಗಳಿಂದ ಈ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ, ನಿಮ್ಮ ಮುಖ್ಯ ಮಂತ್ರಿಗಳಿಂದ ಸಹಕಾರ ಸಿಕ್ಕುತ್ತಿಲ್ಲ ಎನ್ನುವುದಾದರೆ ಎಲ್.ಓ.ಸಿ. ಬ್ರಾಂಡಲ್ ಹಾಕಿ ಕಂಟ್ರೋಲ್ ಮಾಡುತ್ತಾರೆ ಎಂಬುದಾದರೆ ನಿಮ್ಮ ಸ್ಥಾನವೂ ಸೇರಿದಂತೆ ಯಾವ ಜಾಗವು ದೊಡ್ಡದಲ್ಲ; ಬಿಟ್ಟು ಬನ್ನಿ. 544 ಲಕ್ಷ ರೂಪಾಯಿಗಳನ್ನು ಕೊಡುವ ಕಡೆ 2 ಲಕ್ಷದ 48 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಲ್ಲ ಹೇಮಾವತಿ ಕೆಲಸಕ್ಕೆ. ಅದಕ್ಕೆ ನಾನು ಏನು ಮಾಡಬೇಕೆಂದು ಹೇಳಿದ್ದು ನಿಮ್ಮನ್ನು ಎಚ್ಚರಿಸಬೇಕಾದರೆ, ನಿಮ್ಮನ್ನು ಆಕರ್ಷಿಸಬೇಕಾದರೆ ಏನು ಮಾಡಬೇಕು ಹೇಳಿ. ತಾವು ಬರುವುದಕ್ಕೆ ಮೊದಲು ನಾನು ಬೆಳಿಗ್ಗೆ ಹೇಳುತ್ತಿದ್ದೆ. ಈ ಸದನದಲ್ಲಿ ಕೆಟ್ಟವರಿಗೆ, ಸತ್ತವರಿಗೆ ಸಂತಾಪ ಸೂಚನೆ ಮಾಡುವುದು, ಅಧಿಕಾರಕ್ಕೆ ಬಂದವರಿಗೆ ಅಭಿನಂದನೆ ಸೂಚಿಸುವುದು. ಇದಕ್ಕೆ ಇರುವಷ್ಟು ಆದ್ಯತೆ ಅಲ್ಲಿ ಕೋಟ್ಯಾಂತರ ಜನರ ಬದುಕಿಗೆ ನಾಂದಿ ಆಗುವ ಕೆಲಸಕ್ಕೆ ಇಲ್ಲ. ನಿಲುವಳಿ ಸೂಚನೆಯನ್ನು ಕಳುಹಿಸಿದರೆ ತಮ್ಮ ಕಛೇರಿಯಲ್ಲಿ ಅದನ್ನು ರೂಲ್ 68ರ ಕೆಳಗೆ ಮಾಡಿ ಕಳುಹಿಸುತ್ತಾರೆ. ಎಷ್ಟೊಂದು ಆಸಕ್ತಿ? ಸರ್ಕಾರಕ್ಕೆ ಆಸಕ್ತಿ ಇಲ್ಲ. ಕೋರ್ಟುಗಳಿಗೆ ಆಸಕ್ತಿ ಇಲ್ಲ. ಈ ಅಧ್ಯಕ್ಷರಿಗೆ ಆಸಕ್ತಿ ಇಲ್ಲ.

ಶ್ರೀ ಟಿ.ಎಂ. ಮಂಜುನಾಥ್:- ತುಮಕೂರು ಜಿಲ್ಲೆ ವಿಚಾರವಾಗಿ ಪ್ರಸ್ತಾಪ ಮಾಡುತ್ತಾ ಹೇಳಿದಿರಿ. ತಾವು ಈಗಾಗಲೇ ಉಪಮುಖ್ಯಮಂತ್ರಿಗಳವರ ಜೊತೆಯಲ್ಲಿ ಹೋಗಿ ಕೆಲಸಕಾರ್ಯಗಳನ್ನು ನೋಡಿಕೊಂಡು ಬಂದಿದ್ದೀರಿ. ಅಲ್ಲಿ ಕೆಲಸ ಎಷ್ಟು ಚುರುಕಿನಿಂದ ನಡೆಯುತ್ತಿವೆ ಎಂಬುದನ್ನು ನೋಡಿದ್ದೀರಿ. ಇಲ್ಲಿ ಎಲ್‌ಓಸಿ ಮುಖ್ಯ ಅಲ್ಲ. ಹಣ ಎಷ್ಟು ಕೇಳಿದ್ದಾರೋ ಅಷ್ಟೂ ಕೊಟ್ಟಿದ್ದಾರೆ. ಬೇರೆ ಯಾವ ಸರ್ಕಾರಕ್ಕಿಂತಲೂ ಹೆಚ್ಚಾಗಿ ಕೊಟ್ಟಿದ್ದಾರೆ. ಕೆಲಸ ತ್ವರಿತಗತಿಯಲ್ಲಿ ನಡೆಯುತ್ತಿದೆ. ಅದು ಯಾವುದೂ ಕುಂಠಿತ ಆಗಿಲ್ಲ. ಎಲ್‌ಓಸಿ ಇದಕ್ಕೆ ಅಡ್ಡ ಬಂದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ

ತರುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಮಾನ್ಯ ರಾಮಯ್ಯನವರು ಹೇಮಾವತಿ ಬಗ್ಗೆ ಹೇಳಿದರು. ಇವತ್ತು ಕೃಷ್ಣ ಮೇಲ್ದಂಡೆ, ಘಟಪ್ರಭಾ, ಮಲಪ್ರಭಾದಲ್ಲಿ ಎಲ್.ಒ.ಸಿ. ಹಾವಳಿ ಇದೆ. ಇವತ್ತು ತಾವು ತಪ್ಪು ತಿಳಿಯಬಾರದು. ಇವತ್ತು ಎಲ್‌ಒಸಿ ಕೊಡದ ಸಲುವಾಗಿ ನೀರಾವರಿ ಕೆಲಸಗಳು ಬಹಳ ಸ್ಥಗಿತವಾಗಿವೆ. ಇವತ್ತು ಡೀಸೆಲ್ ಕೊಡುವುದಕ್ಕೆ ಹಣ ಇಲ್ಲ. ಯಾವ ಪೆಟ್ರೋಲ್ ಬಂಕ್‌ನವರೂ ಸರ್ಕಾರಕ್ಕೆ ಡೀಸೆಲ್ ಉದರಿ ಕೊಡುವುದಕ್ಕೆ ತಯಾರು ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ:- ಎಲ್‌ಒಸಿ ಕೊಡುವುದು ಬಿಡುವುದು ಪ್ರಶ್ನೆ ಅಲ್ಲ. ಅವರು ಕೊಟ್ಟಿದ್ದಾರೆ, ಎಲ್ಲಿ ಹೋಗಿದೆ ಎಂದು ಹೇಳಿದರು. ಕೆಲಸ ಕಾರ್ಯಗಳು ನಡೆಯುತ್ತಿವೆ, ಆದರೆ ಕೆಲವರ ಪಾಕೆಟ್‌ಗೆ ಹೋಗುತ್ತಿಲ್ಲ ಎಂದು ಹೇಳುತ್ತಾರಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು-ಹಾಗೆ ಏನಾದರೂ ಆಗುತ್ತಿದೆಯೋ ಏನೋ ಎಂದು ಮಾನ್ಯ ರಾಮಯ್ಯನವರ ಸಂಶಯ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, I do not want to make politics outof everything. ಜನರ ನೋವಿನಿಂದ, ಜನರು ಬೆಂಕಿಗೆ ಬಿದ್ದು ಉರಿಯುತ್ತಿರುವ ಸಂದರ್ಭದಲ್ಲಿ, ಪ್ರಾಣಿಗಳಿಂದ, ಎಲ್ಲದರಿಂದಲೂ ರಾಜಕೀಯ ಮಾಡುವುದಕ್ಕೆ ನನಗೆ ಇಚ್ಛೆ ಇಲ್ಲ. I do not want to make politics out of everything. ನನಗೆ ಇವತ್ತು ಬೇಕಾಗಿರತಕ್ಕದ್ದು, ನೈಜ ಸ್ಥಿತಿ ಸದನದ ಮುಖಾಂತರ ಈ ರಾಜ್ಯದ ಜನರಿಗೆ ಗೊತ್ತಾಗಬೇಕು. ನಮ್ಮ ಜಿಲ್ಲೆಯ ಮಂತ್ರಿಗಳು ಅಪ್ಪಣೆ ಕೊಡಿಸುತ್ತಿದ್ದಾರೆ. ಆ ಕೆಲಸ ನಡೆಯುತ್ತಿದೆ, ಹಣ ಕೊಡಲಾಗಿದೆ ಎಂದಿದ್ದಾರೆ. ಈ ಹಂತದಲ್ಲಿ ನೀರಾವರಿ ಸಚಿವರು ನನಗೆ ಒಂದು ಮಾಹಿತಿ ಕೊಟ್ಟರೆ ಉಪಕಾರವಾಗುತ್ತದೆ. May I know what is the amount due for the payment of the Bills? ಆ ಮಾಹಿತಿ ಕೊಟ್ಟರೆ ನನ್ನ ಬರ್ಡನ್ ಕಡಿಮೆಯಾಗುತ್ತದೆ. ಇವತ್ತು ಎಲ್ಲಾ ಬೇಡ. ಕೃಷ್ಣ, ಕಾವೇರಿ, ಮಲಪ್ರಭಾ, ಘಟಪ್ರಭಾ ಎಲ್ಲಾ ಒಳಗೊಂಡಂತೆ ಭಾರಿ ನೀರಾವರಿ ಯೋಜನೆ ಅಡಿಯಲ್ಲಿ ತಾವು ಹಣ ಕೊಡಬೇಕಾದ ಎಷ್ಟು ಬಿಲ್ ಪೆಂಡಿಂಗ್ ಇವೆ? ನೀವು ಕೊಡದೇ ಇದ್ದರೂ ನನ್ನ ಹತ್ತಿರ ಇದೆ. ನಿಜಸ್ಥಿತಿಯನ್ನು ತಾವು ಮೊದಲೇ ಹೇಳಿದರೆ ನನ್ನ ಕಂಠ ಶೋಷಣೆ ಸ್ವಲ್ಪ ಕಡಿಮೆಯಾಗುತ್ತದೆ.

ಉಪಾಧ್ಯಕ್ಷರು:- ಕಾವೇರಿ ನದೀ ನೀರಿನ ಹಂಚಿಕೆ ವಿಚಾರವಾಗಿ ತಾವು ನಿಲುವಳಿ ಸೂಚನೆ ಕಳುಹಿಸಿದ್ದೀರಿ. ತಾವು ಎಲ್‌ಒಸಿ ಬಗ್ಗೆ ಇನ್ನೊಂದು ಸಾರಿ ಪ್ರಸ್ತಾಪ ಮಾಡಬಹುದು.

ಶ್ರೀ ಆರ್. ವಿ.ದೇಶಪಾಂಡೆ:- ಎಲ್‌ಒಸಿ ಎಂದರೆ, ಕಾವೇರಿ ಬಗ್ಗೆ ಎಲ್‌ಒಸಿ. ಅದರ ಬಗ್ಗೆ ಹೇಳಬೇಕು.

ಶ್ರೀ ಶಿವಾನಂದ ಹೆಚ್ ಕೌಜಲಗಿ:- ಈ ಸರ್ಕಾರದಲ್ಲಿ ಹಣ ಇಲ್ಲ; ಖಜಾನೆ ಬರಿದಾಗಿದೆ ಎಂದು ಕಂದಾಯ ಮಂತ್ರಿಗಳೇ ಹೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ನಾನು ಪ್ರಾರಂಭದಲ್ಲೇ ಹೇಳಿದೆ. ನೀರು ಉಳಿಸಿ ಕೊಳ್ಳುವುದಕ್ಕೆ ಕರ್ನಾಟಕದ ರಾಜಕಾರಣಿಗಳು, ಸರ್ಕಾರ ಮಾಡತಕ್ಕ ಹೋರಾಟ ಒತ್ತಟ್ಟಿಗಾದರೆ, ನೀರನ್ನು ಬಳಸಿಕೊಳ್ಳಲು ನಾವು ಮಾಡಿರತಕ್ಕ ಪ್ರಯತ್ನ ಇದಕ್ಕೆ ಸಮ ಇದೆಯೇ? ಇಲ್ಲಿ ಎಲ್‌ಒಸಿ ಬಹಳ ಪ್ರಮುಖವಾದುದು. ಅದನ್ನು ಬಿಟ್ಟು ಇನ್ನೇನು ಹೇಳಬೇಕು? ಇದರಲ್ಲೂ ಈ ರಾಜ್ಯದ ಜನತೆಯ

ವಂಚನೆ ಮಾಡುವುದಾದರೆ ಮಾಡಲಿ. I say, with all information at my command, it is Rs.80 crores. 80ಕೋಟಿ ರೂಪಾಯಿಗಳ ಬಿಲ್ಲನ್ನು ಇವರು ಸರ್ಕಾರದಿಂದ ಕೊಡಬೇಕಾಗಿದೆ. ಸುಂದರ ರೆಡ್ಡಿ ಅಥವಾ ಸುಂದರ ರಾಮರೆಡ್ಡಿ ಎನ್ನುವವರು ನನ್ನ ಹತ್ತಿರ ಬಂದು ಕಣ್ಣಲ್ಲಿ ನೀರು ಹಾಕಿದರು. ಅವರು ನನಗೆ ಚುನಾವಣೆಗೆ ಒಂದು ಪೈಸೆ ದುಡ್ಡು ಕೊಟ್ಟವರಲ್ಲ. ಅಧ್ಯಕ್ಷರೇ, ಡಿಸೆಂಬರ್ ತಿಂಗಳಲ್ಲಿ ತುಮಕೂರು ಜಿಲ್ಲೆಗೆ ನೀರು ಕೊಡುವ ಕಾರ್ಯಕ್ರಮ ಈ ಸರ್ಕಾರ ಇಟ್ಟುಕೊಂಡಿದೆ. ಒಬ್ಬನೇ ಒಬ್ಬ ಕಂಟ್ರಾಕ್ಟರ್‌ಗೆ 70 ಲಕ್ಷ ರೂಪಾಯಿಗಳ ಬಿಲ್ ಹಣ ಕೊಡಬೇಕು. ಡಿಸ್‌ಪ್ಯೂಟ್ ಮಾಡುವುದಾದರೆ ಮಾಡಲಿ; ನನ್ನದೇನೂ ಇಲ್ಲ. ಆ ಸುಂದರ ರೆಡ್ಡಿ ಎನ್ನುವವರಿಗೆ 70 ಲಕ್ಷ ರೂಪಾಯಿಗಳವರೆಗೆ ಆತನಿಗೆ ಬಿಲ್ ಕೊಟ್ಟಿಲ್ಲ. ಕೃಷ್ಣಾ ಮತ್ತು ಕಾವೇರಿ ಕೊಳ್ಳದಲ್ಲಿ ಆಗುತ್ತಿರುವ ಕೆಲಸ ಅಷ್ಟಕ್ಕೆ ಸುಮಾರು 80ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗಿದೆ. ಯಾವ ಮುಖ ಇಟ್ಟುಕೊಂಡು ಹೇಳುತ್ತೀರಿ ನೀವು? ಕಾವೇರಿಯ ಬಗ್ಗೆ ಜಯಲಲಿತ ಅನ್ಯಾಯ ಮಾಡಿದ್ದಾರೆಂದು ನಮ್ಮ ನಾಗರಾಜ್‌ರವರು ದೂಷಣೆ ಮಾಡುತ್ತಾರೆ. ಕಾವೇರಿಯಲ್ಲಿ ಕಾಣದ ಕೈನಕೆಲಸ ಮಾಡಿದೆಯೆಂದು ನಾನು ದೂರುತ್ತಿದ್ದೇನೆ. ಆದರೆ ನೀವು ಕಾವೇರಿ ನೀರನ್ನು ಬಳಸಿಕೊಳ್ಳುವ ಬಗ್ಗೆ ರಾಜ್ಯದ ಜನತೆಗೆ ಈ ಸರ್ಕಾರ ಮಾಡುತ್ತಿರುವ ದ್ರೋಹದ ಬಗ್ಗೆ ನಾನು ಮೊದಲು ಹೇಳಬೇಕು. ಇದಕ್ಕೆ ಉತ್ತರ ಇಲ್ಲವೇನು? 80ಕೋಟಿ ರೂಪಾಯಿಗಳನ್ನು ನೀರಾವರಿ ಕೆಲಸಕ್ಕೆ ಕೊಡದಿರುವ ಈ ಸಂದರ್ಭದಲ್ಲಿ ನಾವು 2ಸಾವಿರದ ಇಸವಿಯೊಳಗೆ ನೀರು ಕೊಡುತ್ತೇವೆಂದು ಕೃಷ್ಣಾದಲ್ಲಿ ಹೇಳುತ್ತೀರಿ. ಡಿಸೆಂಬರ್ ತಿಂಗಳಿನೊಳಗೆ ಹೇಮಾವತಿ ನೀರನ್ನು ಕೊಡುತ್ತೇವೆಂದು ಕಾವೇರಿಯಲ್ಲಿ ಹೇಳುತ್ತೀರಿ. ನಾನು ವಿಧಿಯಿಲ್ಲದೆ ಹೇಳಬೇಕಾಗುತ್ತದೆ; ನಮ್ಮ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ, ಇದು ರಾಜಕೀಯ ಬುಡುಬುಡಿಕೆ. ಈ ಕೆಲಸವನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕೆಂದು ನಾನು ಚುನಾವಣೆಯಲ್ಲಿ ಈ ಸಾರಿ ವಿಧಾನಸಭೆಗೆ ಆರಿಸಿ ಬಂದ ತಕ್ಷಣ ಒಂದು ಪ್ರಶ್ನೆಯನ್ನು ಕಳುಹಿಸಿದ್ದೇನೆ. ತುಮಕೂರು ಜಿಲ್ಲೆಗೆ ಹೇಮಾವತಿ ಯೋಜನೆಗೆ ಸಂಬಂಧಪಟ್ಟ ಕೆಲಸಗಳು ತೀವ್ರಗತಿಯಲ್ಲಿ ಆಗದೇ ಇರಲಿಕ್ಕೆ ಕಾರಣವೇನು? What is the reason for this tardy progress in the project? ಈಗ ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿತ್ತು, ಆ ಪ್ರಶ್ನೆ ಬಂದ ದಿವಸ ನನ್ನನ್ನು ಕರೆದು ಹೇಳಿದರು, ಆ ಪ್ರಶ್ನೆಗೆ ಉತ್ತರ ಕೊಡುವುದು ಬೇಡಿ, ನಾನು ತಮ್ಮನ್ನು ಕರೆದು ಚರ್ಚೆ ಮಾಡುತ್ತೇನೆಂದು ಹೇಳಿದರು. ಇವತ್ತಿನವರೆಗೂ ಸಭೆ ಕರೆದಿಲ್ಲ. ಅವರು ಮುಖ್ಯಮಂತ್ರಿಯಾಗಿ 9-10 ತಿಂಗಳಾಯಿತು ಎಂದು ಕಾಣುತ್ತದೆ. ಕಾವೇರಿ ನೀರಿನ ಕಾರ್ಯಕ್ರಮಗಳು ಏನಾಗುತ್ತಿವೆ? ಯೋಜನೆಗಳ ಅನುಷ್ಠಾನ ಏನಾಗುತ್ತಿದೆ? ಹಣದ ಕೊರತೆ ಏನಿದೆ? ಇವತ್ತಿನವರೆಗೆ ಕಾವೇರಿ ಕೊಳ್ಳದ ಶಾಸಕರನ್ನು ಕರೆದು ಚರ್ಚಿಸುವಂತಹ ಕೆಲಸವನ್ನು ಇವತ್ತಿನವರೆಗೂ ಮುಖ್ಯಮಂತ್ರಿಗಳು ಮಾಡಲಿಲ್ಲ. ಅದರ ಬಗ್ಗೆ ನಾನು ಬರೆದಿರುವ ಎಲ್ಲ ಪತ್ರಗಳ ನಕಲುಗಳು ನನ್ನ ಹತ್ತಿರ ಇವೆ. ಒಂದಲ್ಲ, ಎರಡಲ್ಲ ಹತ್ತಾರು ಪತ್ರಗಳನ್ನು ಬರೆದಿದ್ದೇನೆ. ನಾನು ಮರ್ಯಾದೆ ಬಿಟ್ಟು ಹೇಳಬೇಕೆಂದರೆ, ಅವರ ಕಾಲಿಗೆ ನಮಸ್ಕಾರ ಮಾಡುವುದನ್ನು ಬಿಟ್ಟು ಉಳಿದ ಎಲ್ಲವನ್ನೂ ಮಾಡಿದ್ದೇನೆ. ಸಭೆ ಕರೆಯಿರಿ, ಅಧಿಕಾರಿಗಳ ಜೊತೆ ಚರ್ಚೆಮಾಡಿ ಏನು ಸಮಸ್ಯೆಯಿದೆ ಎನ್ನುವುದನ್ನು ನಮ್ಮ ಗಮನಕ್ಕೆ ತನ್ನಿಯೆಂದು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕವನವನ್ನು ಬರೆದು ಪ್ರಕಟ ಮಾಡಿದರು. ಕಾದಂಬರಿಯನ್ನು ಬರೆದು ಮೊನ್ನೆ ಪ್ರಕಟಣೆ ಮಾಡಿದರು.

ಧ್ವನಿಮುದ್ರಣ ಸುರುಳಿಯನ್ನು ಬಿಡುಗಡೆ ಮಾಡಿದರು. ಬಹಳ ಸಂತೋಷ, ಒಬ್ಬ ರಾಜಕಾರಣಿ ಆಗಿರುವಂತಹರಿಗೆ ಇಷ್ಟೊಂದು ಅಕಾಡಮಿಕ್ ಬ್ಯಾಕ್‌ಗ್ರೌಂಡ್ ಇರುವಂತಹದ್ದನ್ನು ನಾನು ಮೆಚ್ಚುತ್ತೇನೆ. ಆದರೆ ನಾನು ಅವರಿಗೆ ಏನು ಸಲಹೆ ಮಾಡುತ್ತೇನೆಂದರೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ. ಇನ್ನು ಅಕಾಡೆಮಿಗಳಿವೆ, ಮಾನ್ಯ ಬಂಗಾರಪ್ಪನವರನ್ನು ಬೇಕಾದರೆ ನಾಟಕ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಮಾಡೋಣ. ಇವರನ್ನು ಸಾಹಿತ್ಯ ಅಕಾಡೆಮಿ ಅಧ್ಯಕ್ಷರನ್ನಾಗಿ ಮಾಡೋಣ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ, ನಿಮ್ಮ ಸಾಹಿತ್ಯ ರಚನೆ, ನಿಮ್ಮ ಕಾವ್ಯಗಳ ಧ್ವನಿಮುದ್ರಣ ಸುರುಳಿಯನ್ನು ಬಿಡುಗಡೆ ಮಾಡುವುದು -ಇಂತಹ ವಿಷಯಗಳಲ್ಲಿ ಕಾಲ ಕಳೆದು ರಾಜ್ಯದ ಜ್ವಲಂತ ಸಮಸ್ಯೆಗಳನ್ನು ನೀವು ಮೂಲೆ ಗುಂಪು ಮಾಡುತ್ತಿದ್ದೀರಿ. ನೀವು ಕಾವ್ಯ ಬರೆಯುವುದು ಕೆಟ್ಟದ್ದೆಂದು ನಾನು ಹೇಳುವುದಿಲ್ಲ. ನಾನು ಚುನಾವಣೆಯಲ್ಲಿ ಸೋತು ಮನೆಯಲ್ಲಿ ಕುಳಿತಿದ್ದಾಗ ಇಂತಹದ್ದೆ ಒಂದು ಪುಸ್ತಕ ಬರೆದಿದ್ದೇನೆ. ನೀವು ಪುಸ್ತಕ ಬರೆಯುವುದನ್ನು ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಕಾವೇರಿ ನೀರಿನ ಬಗ್ಗೆ ನೀವು ಎಷ್ಟು ಆಸಕ್ತಿ ವಹಿಸಬೇಕಾಗಿದೆ, ಚರ್ಚೆ ಮಾಡಬೇಕಾಗಿದೆ. ನೀವು ಅಧಿಕಾರಕ್ಕೆ ಬಂದು 9ತಿಂಗಳು ಆಯಿತು. ಒಂದು ಗಂಟೆ ಕಾವೇರಿ ಕೊಳ್ಳದ ಶಾಸಕರ ಸಭೆಯನ್ನು ಕರೆದು ಚರ್ಚೆ ಮಾಡವುದಕ್ಕೆ ವ್ಯವಧಾನ ಇಲ್ಲವೆಂದರೆ ಕಾಲಾವಕಾಶ ಇಲ್ಲವೆಂದರೆ ನಿಮ್ಮ ಸಾಹಿತ್ಯ ರಚನೆಗೆ ಕಾಲ ಎಲ್ಲಿಂದ ಬಂತು ಸ್ವಾಮಿ? ಕವಿತೆಗಳ ರಚನೆಗೆ ಕಾಲ ಎಲ್ಲಿಂದ ಬಂತು ಸ್ವಾಮಿ? ಒಬ್ಬ ಶಾಸಕನಾಗಿ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಕಾಲಿಗೆ ನಮಸ್ಕಾರ ಮಾಡುವುದನ್ನು ಬಿಟ್ಟು ಉಳಿದೆಲ್ಲವನ್ನು ಮಾಡಿದೆ, ನಾನು ಕಣ್ಣೀರು ಹಾಕಿದ್ದೇನೆ, ನಿಮ್ಮ ಹತ್ತಿರ ಬಂದು ಸಭೆ ಕರೆಯಿರಿಯೆಂದು ಹೇಳಿದ್ದೇನೆ. ಈ ಗಳಿಗೆಯವರೆಗೆ ಸಭೆ ಕರೆದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಕೆಆರ್‌ಎಸ್ ಹತ್ತಿರ ಹೋಗಿ ಚೆನ್ನಾಗಿ ಪೂಜೆ ಮಾಡಿದ್ದಾರೆ. ಮತ್ತೇನು ಮಾಡಬೇಕು? ನೀರಾವರಿ ಮಂತ್ರಿಗಳನ್ನು ಕರೆದುಕೊಂಡು ಹೋಗಿರುವುದು ನಮ್ಮ ಭಾಗ್ಯ? ಚೆನ್ನಾಗಿ ಪೂಜೆ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರೇ, ನೀವು ಸಸ್ಪೆಂಡ್ ಆದ ಸದಸ್ಯರು ನೀವು ಮಾತನಾಡುವ ಹಕ್ಕು ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್. ಸದನದಲ್ಲಿ ನಾನು ಸಸ್ಪೆಂಡ್ ಆಗಿಲ್ಲ. ನನಗೆ ಗೊತ್ತಿಲ್ಲದ ಸಸ್ಪೆಂಡ್ ಯಾವುದು?

ಶ್ರೀ ಡಿ.ಬಿ.ಚಂದ್ರೇಗೌಡ: ನನಗೆ ಸುದ್ದಿಯಿದೆ, ನೀವು ಕಾಂಗ್ರೆಸ್ ಪಕ್ಷದಿಂದ ಸಸ್ಪೆಂಡ್ ಆಗಿದ್ದೀರಿ ಎಂದು ನೀವು ಯಾರ ಪರವಾಗಿ ಮಾತನಾಡುತ್ತೀರಿ ಎಂಬುದು ಗೊತ್ತಾಗಬೇಕು.

2.30 ಪಿ.ಎಂ

ಶ್ರೀ ಮಲ್ಲಾರಗೌಡ ಎಸ್.ಪಾಟೀಲ್ : - ಮಾನ್ಯ ಉಪನಾಯಕರಿಗೆ ಗೊತ್ತು....

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಕಾಂಗ್ರೆಸ್ಸಿನ ನಿಷ್ಠಾವಂತರು ಎಂಬುದು ನಮಗೆ ಗೊತ್ತಿರತಕ್ಕಂಥ ವಿಚಾರ. ಆದರೆ ನಮಗೆ ಏನು ತಿಳಿದುಬಂದಿದೆ ಎಂದರೆ, ನಾವು ಈ ಒಂದು ಕಾವೇರಿ ವಿಚಾರದಲ್ಲಿ ಉತ್ತರವನ್ನು ನಿರೀಕ್ಷಣೆ ಮಾಡಿ, ಇದರ ಬಗ್ಗೆ ನಾವು ಪಕ್ಷಾತೀತವಾಗಿ ರಾಜಕೀಯವನ್ನು

ಬೆರೆಸದೆ ಉತ್ತರ ಅಪೇಕ್ಷೆ ಮಾಡಿಕೊಂಡು, ಏನಾದರೂ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವೆಲ್ಲರೂ ಸಹಿತ ಇದನ್ನು ತೆಗೆದುಕೊಂಡುಬಂದಿದ್ದೇವೆ. ಆದರೆ ಇವತ್ತು ನಡೆದಿರತಕ್ಕಂಥ ಘಟನಾವಳಿಗಳ ಪ್ರಕಾರ ಕಾಂಗ್ರೆಸ್ ಶಾಸಕಾಂಗ ಪಾರ್ಟಿಯ ಸಭೆಯಲ್ಲಿ 132 ಜನ ಶಾಸಕರು ಒಂದು ತೀರ್ಮಾನ ತೆಗೆದುಕೊಂಡು ಇವರ ನಾಯಕತ್ವದಲ್ಲಿ, ಈ ಸರ್ಕಾರದಲ್ಲಿ ಮತ್ತು ಇವರ ಮುಖಂಡತ್ವದಲ್ಲಿ ತಮಗೆ ನಂಬಿಕೆ ಇಲ್ಲವೆಂದು ಹೇಳಿ ತೀರ್ಮಾನ ಮಾಡಿದ್ದಾರೆಂದು ಸಹಿತ ಕೇಳಿದ್ದೇವೆ. ತಮ್ಮ ಪಕ್ಷದ ಆಂತರಿಕ ಜಗಳದಲ್ಲಿ....

ಶ್ರೀ ಎಸ್.ಎಂ. ಕೃಷ್ಣ :- ಕಾವೇರಿಗೂ, ಇದಕ್ಕೂ ಏನು ಸಂಬಂಧ?

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ತಮ್ಮ ಪಕ್ಷದ ಆಂತರಿಕ ಜಗಳದಲ್ಲಿ ನಮಗೆ ಯಾವುದೇ ರೀತಿಯಲ್ಲಿ ಆಸಕ್ತಿ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ :- ಅದು ನನಗೆ ಕನ್ವಿನ್ಸ್ ಆಗಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :- ಹಾಗಾದರೆ ಬಹಳ ಸಂತೋಷ. ಆದರ ಪರಿಣಾಮವಾಗಿ ನಿಮ್ಮನ್ನು ಸಸ್ಪೆಂಡ್ ಮಾಡಲಾಗಿದೆಯಂತಲ್ಲ, ಮತ್ತೆ ಅಲ್ಲಿ ಏಕೆ ಕುಳಿತಿದ್ದೀರಿ ಎಂದು ಕೇಳಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :- ಅಧ್ಯಕ್ಷರೇ....

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ :- ಅತ್ಯಂತ ಗಂಭೀರವಾಗಿರತಕ್ಕಂಥ ವಿಚಾರದ ಬಗ್ಗೆ ಮಾನ್ಯ ರಾಮಯ್ಯನವರು ಮತ್ತು ವಿರೋಧ ಪಕ್ಷದ ನಾಯಕರು, ಬಿ.ಜೆ.ಪಿ. ಪಕ್ಷದ ನಾಯಕರು ಮಾತನಾಡಿದ್ದಾರೆ. ಪರಿಸ್ಥಿತಿಯ ಗಂಭೀರತೆ ಮತ್ತು ವಿಷಯದ ಗಂಭೀರತೆ ಏನಿದೆ, ಅದಕ್ಕೆ ಲವಲೇಶವೂ ಅಪಚಾರವಾಗದ ರೀತಿಯಲ್ಲಿ ನಾವು ಕಾವೇರಿ ಬಗ್ಗೇನೇ ನಮ್ಮ ಗಮನ ಎಲ್ಲವನ್ನೂ ಸೀಮಿತ ಮಾಡಿದರೆ ಒಳಿತು ಎಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಉಪಾಧ್ಯಕ್ಷರು :- ರಾಮಯ್ಯನವರೆ, ಇನ್ನು ಎಷ್ಟು ಹೊತ್ತು ಆಗುತ್ತದೆ?

ಶ್ರೀ ವೈ.ಕೆ. ರಾಮಯ್ಯ :- ನನಗೆ ಗೊತ್ತಿಲ್ಲ. ಕೊನೆಯಪಕ್ಷ ಇನ್ನೂ ಒಂದು ಗಂಟೆ ಬೇಕಾಗುತ್ತದೆ.

ಉಪಾಧ್ಯಕ್ಷರು :-ಈಗ ಸದನವನ್ನು ಮುಂದೂಡಿ ಮತ್ತೆ ಎರಡೂವರೆ ಗಂಟೆಗೆ ಸೇರುತ್ತದೆ.

(3.05 ಗಂಟೆಗೆ ಸಭೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ವಿ.ಎಸ್. ಕೌಜಲಗಿಯವರು ಉಪಸ್ಥಿತರಿದ್ದರು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ :- ಸಿ.ಎಲ್.ಪಿ.ಮೀಟಿಂಗ್‌ನಲ್ಲಿ ಕಾಂಗ್ರೆಸ್ ಶಾಸಕರ ವರ್ತನೆ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಇಷ್ಟೊಂದು ಮಹತ್ವದ ಒಂದು ಗಂಭೀರವಾದ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಆದರೆ ಇಲ್ಲಿ ಇವತ್ತು ಸಭಾನಾಯಕರು ಕಾಣಿಸುತ್ತಿಲ್ಲ, ಸಂಬಂಧಪಟ್ಟ ಉಪಮುಖ್ಯಮಂತ್ರಿಯವರೂ ಕಾಣಿಸುತ್ತಿಲ್ಲ. ಅದಕ್ಕೆ ಕಾರಣವೇನೆಂದು ನಮಗೆ ಗೊತ್ತಿಲ್ಲ. ಆದರೆ ಬಹಳ ಗಂಭೀರವಾದ ಒಂದು ಸುದ್ದಿ ನಮಗೆ ಬಂದಿದೆ. ಅದು ಏನೆಂದರೆ, ಇವತ್ತು ಕಾಂಗ್ರೆಸ್(ಐ) ಲೆಜಿಸ್ಲೇಟಿವ್ ಪಾರ್ಟಿಮೀಟಿಂಗ್‌ನಲ್ಲಿ